2. **Power Purchase** : The project proponent should make arrangements with KPTCL to supply at least 30% of generated power to the State Grid through PPA with respective ESCOM and approach KERC for price fixation.
3. **Environment** : The promoters to obtain CFE and CFO from KSPCB and environmental clearance from MOEF, GOI.
4. **Employment** : The company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
5. **Vendor Development** : Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
6. **Social Infrastructure Development** : The company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
7. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

**APARNA PAVATE**
Desk Officer (Technical Cell)
Commerce & Industries Department.

P.R. 1523

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

**ವಿಷಯ :** ಮಾನ್ಯ ಶಾಸಕರುಗಳ ಆಪ್ತ ಸಹಾಯಕರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ :** 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 177 ಆಹಿಸೇ 2009 ದಿನಾಂಕ 23-02-2010.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 544 ಆಹಿಸೇ 2008 ದಿನಾಂಕ 29-01-2009.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಗ್ರೂಪ್ ಸಿ ವೃಂದದಲ್ಲಿ ಪ್ರಥಮ ದರ್ಜೆ ಸಹಾಯಕರ/ದ್ವಿತೀಯ ದರ್ಜೆ ಸಹಾಯಕರು/ಶೀಘ್ರಲಿಪಿಗಾರರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಅವರ ವಿದ್ಯಾರ್ಹತೆಗನುಗುಣವಾಗಿ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರ/ ಶೀಘ್ರಲಿಪಿಗಾರರ ಹುದ್ದೆಗಳಿಗೆದುರಾಗಿ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15(1)(ಬಿ)(vii) ರನ್ವಯ ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ಸರ್ಕಾರದಿಂದ ಅನುಮೋದಿಸಲ್ಪಟ್ಟ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೇಮಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗಿದೆ. ಮೇಲೆ ಓದಲಾದ (2)ರ ಅಧಿಕೃತ ಜ್ಞಾಪನದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯ, ಸಚಿವರ ಆಪ್ತ ಶಾಖೆ, ವಿಧಾನ ಪರಿಷತ್ತು/ಸಭೆ; ರಾಜ್ಯ ಸಭೆ/ಲೋಕ ಸಭೆ ಸದಸ್ಯರ ಆಪ್ತ ಸಿಬ್ಬಂದಿ ಶಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ

ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಚಿತ ವೇತನವನ್ನು ನಿಗದಿಪಡಿಸಲಾಗಿದೆ. ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ಮಾನ್ಯ ಶಾಸಕರ ಆಪ್ತ ಸಹಾಯಕರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಆಡಳಿತ ಹಿತದೃಷ್ಟಿಯಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳೇ ಹೊರಡಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 123 ಆಹಿಸೇ 2010, ಬೆಂಗಳೂರು, ದಿನಾಂಕ : 21-05-2010**

ಸೂಕ್ತ ಪರಿಶೀಲನೆಯ ನಂತರ ಗ್ರೂಪ್ ಸಿ ವೃಂದದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15(1)(ಬಿ)(vii) ರನ್ವಯ ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ನೇಮಕಗೊಂಡಿರುವ ನೌಕರರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಅನುಬಂಧದಲ್ಲಿರುವಂತೆ ನೇಮಕ ಮಾಡಿರುವ ಹುದ್ದೆಗೆ ನಿಗದಿಪಡಿಸಿರುವ ಸಂಚಿತ ವೇತನದಲ್ಲಿ ಆದೇಶ ಹೊರಡಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಿ ಆದೇಶಿಸಲಾಗಿದೆ.

ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ನೇಮಕಗೊಳ್ಳುವ ನಿಗಮ: ಮಂಡಳಿ ಸ್ಥಳೀಯ ಸಂಸ್ಥೆಗಳು: ಸ್ವಾಯುತ್ತ: ಶಾಸನಬದ್ಧ ಸಂಸ್ಥೆಗಳ ಗ್ರೂಪ್ ಸಿ ನೌಕರರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸಲು ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ರುಕ್ಮಿಣಿ ದಿವಾಕರ್**

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-1)

## ಅನುಬಂಧ

## ಗುತ್ತಿಗೆ ನೇಮಕಾತಿಯ ನಿಬಂಧನೆ ಹಾಗೂ ಷರತ್ತುಗಳು

1. __________ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ __________ ದಿನಾಂಕ __________ ರಲ್ಲಿ ________ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿರುವ ಶ್ರೀ/ಶ್ರೀಮತಿ __________ ಇವರ ಗುತ್ತಿಗೆ ನೇಮಕಾತಿಯ ಅವಧಿಯು ದಿನಾಂಕ __________ ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಶ್ರೀ ______________ ಮಾನ್ಯ ಶಾಸಕರು, ______________ ವಿಧಾನಸಭಾ /ವಿಧಾನಪರಿಷತ್ತು ಕ್ಷೇತ್ರ ಇವರ ಪದಾವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಇವರ ಒಪ್ಪಂದದ ನೇಮಕಾತಿಗೆ ಕ್ರೋಢಿಕೃತ ಮಾಸಿಕ ಸಂಬಳ ರೂ. ________ (________ ರೂಪಾಯಿಗಳು ಮಾತ್ರ) ಗಳಿಗೆ ನಿಗದಿಪಡಿಸಲಾಗಿದೆ. ಇದಲ್ಲದೆ ಇನ್ನಿತರ ಯಾವುದೇ ಭತ್ಯೆಗಳಿಗೂ ಇವರು ಅರ್ಹರಾಗಿರುವುದಿಲ್ಲ.
3. ಇವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರ ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಒಪ್ಪಂದದ ನೌಕರರು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ.
5. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ವೈದ್ಯಕೀಯ ಕಾರಣಗಳ ಮೇರೆಗಾಗಲಿ ಅಥವಾ ಬೇರೆ ಕಾರಣಗಳಿಂದಾದರಲೀ ಅನಧಿಕೃತ ಗೈರು ಹಾಜರಿಯಾದಲ್ಲಿ ಗುತ್ತಿಗೆ ಆಧಾರದ ನೇಮಕಾತಿಯು ತಾನಾಗಿಯೇ ರದ್ದಾಗುತ್ತದೆ.
6. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ವೈದ್ಯಕೀಯ ಕಾರಣಗಳ ಮೇರೆ ಅಥವಾ ಸಮರ್ಥನೀಯ ಕಾರಣಗಳ ಮೇರೆಗೆ ಗುತ್ತಿಗೆ ಆಧಾರದ ಅವಧಿಯಲ್ಲಿ ಮೂರು ತಿಂಗಳಿಗೆ ಮೀರದಂತೆ, ಗೈರು ಹಾಜರಾದಲ್ಲಿ ಆ ಕಾರಣದಿಂದ ಗುತ್ತಿಗೆ ನೇಮಕಾತಿ ರದ್ದಾಗುವುದಿಲ್ಲ. ಆದರೆ ಈ ಅವಧಿಯಲ್ಲಿ ಕರ್ತವ್ಯ ರಹಿತ ದಿನಗಳೆಂದು (ಡೈಸ್ ನಾನ್) ಪರಿಗಣಿಸಲಾಗುವುದು ಮತ್ತು ಅವರು ಈ ಅವಧಿಗೆ ಯಾವುದೇ ವೇತನ ಮತ್ತು ಇತರ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.

7. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ, ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
8. ಸದರಿ ನೌಕರರ ದುರ್ವತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಧರಿಸಿಕೊಡಲು ಬದ್ಧರಾಗಿರತಕ್ಕದ್ದು.
9. ಸದರಿ ಒಪ್ಪಂದದ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸುವುದಿಲ್ಲ.
10. ಇವರು ತಮ್ಮ ಕರ್ತವ್ಯ, ಕಾರ್ಯ, ಪ್ರಕಾರ್ಯಗಳನ್ನು ಶ್ರದ್ದೆ, ಭಕ್ತಿ, ಮತ್ತು ಆಸಕ್ತಿಯಿಂದ ನಿರ್ವಹಿಸತಕ್ಕದ್ದು.
11. ಇವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
12. ಇವರು 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಬದ್ಧರಾಗಿರತಕ್ಕದ್ದು.
13. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.
14. ಇವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಮತ್ತು ಸರ್ಕಾರಕ್ಕೆ ಸಂಬಂದಿಸಿದಂತೆ ಆರ್ಥಿಕ ನಷ್ಟವನ್ನು ಸರ್ಕಾರಕ್ಕೆ ತುಂಬಿಕೊಡಲು ಹೊಣೆಯಾಗಿರುತ್ತಾರೆ.
15. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ 50 ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಒಪ್ಪಿಸತಕ್ಕದ್ದು.

ಪಿ. ಆರ್. 1524

## COMMERCE & INDUSTRIES SECRETARIAT

**Sub :-** Approval to the Project Proposal of M/s. Scotts Garments Ltd., & Bombay Rayon Fashions Ltd., to establish a "Ready Made Garments unit" at Doddaballapura, Hassan & Kolar Districts.

**Read :-** Proceedings of the 22$^{nd}$ State High Level Clearance Committee (SHLCC) meeting held on 24-05-2010.

**Preamble:**

M/s. Scotts Garments Ltd., & Bombay Rayon Fashions Ltd., propose to establish a "Ready Made Garments unit for Exports Knitting & Processing" at Doddaballapura, Hassan & Kolar Districts, with an investment of Rs. 682.67 crores, generating employment to about 50000 persons.

In the 22$^{nd}$ State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22$^{nd}$ Meeting held on 24-05-2010, in all aspects.

Hence the following Order.

**Government Order No. CI 200 SPI 2010, Bangalore, dated : 02-06-2010**

Government is pleased to accord in principle approval to the Project Proposal of M/s. Scotts Garments Ltd., & Bombay Rayon Fashions Ltd., to establish a "Ready Made Garments unit for Exports Knitting & Processing" at Doddaballapura, Hassan & Kolar Districts, with an investment of Rs. 682.67 crores, generating employment to about 50000 persons and extend the following infrastructure facilities incentives and concessions.

**Infrastructure Facilities** :

1. **Land :** 15 acres – KIADB allotted land at Doddaballapura.
   5 acres – KIADB allotted land at Hassan.
   3.70 acres of land at Sy. No. 60, 30/1, 32/1, 21,22 & 71 Sultan Thippansandra Village, Kasaba Hobli Kolar District. U/s 109 of KLR Act and conversion of the same for industrial use
   51.30 acres – KIADB to allot land in Industrial Areas at KGF Apparel Park, Gowribidanur Doddaballapur, Chikkaballapur, Chitradurga, Shimoga, Mudhol, Siddlaghatta, Srinivasapura.
2. **Water :** 5.086 MLD from KIADB.

3. **Power :** 34600 KVA to be serviced by respective ESCOMs
4. **Incentives and Concessions :** As per applicable Suvarna Vasthra Neethi of the State, Additional Incentives & Concessions to be examined as a separate case.

**GENERAL TERMS AND CONDITIONS** :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

**(Aparna Pavate)**

P.R. 1556

Desk Officer (Technical Cell)

Commerce & Industries Department

**COMMERCE & INDUSTRIES SECRETARIAT**

**Sub :-** Approval to the Project Proposal of M/s. Green R & D Centre, Hindustan Petroleum Corporation Ltd. to establish a "R & D Centre" at Tarabahalli & Devenagondhi Villages, Jaraganahalli Hobli, Hosakote Taluk, Bangalore Rural District.

**Read :-** Proceedings of the 22$^{nd}$ State High Level Clearance Committee (SHLCC) meeting held on 24-05-2010.

**Preamble:**

M/s. Green R & D Centre, Hindustan Petroleum Corporation Ltd., proposes to establish a "R & D Centre" at Tarabahalli & Devenagondhi Villages, Jaraganahalli Hobli, Hoskote Taluk, Bangalore Rural District, with an investment of Rs. 550 crores, generating employment to about 205 persons.

In the 22$^{nd}$ State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22$^{nd}$ Meeting held on 24-05-2010, in all aspects.

Hence the following Order.

**Government Order No. CI 201 SPI 2010, Bangalore, dated : 02-06-2010**

Government is pleased to accord in principle approval to the Project Proposal of M/s. Green R & D Centre, Hindustan Petroleum Corporation Ltd., to establish a "R & D Centre" at Tarabahalli & Devenagondhi Villages, Jaraganahalli Hobli, Hoskote Taluk, Bangalore Rural District, with an investment of Rs. 550 crores, generating employment to about 205 persons. and extend the following infrastructure facilities, incentives and concessions.

**Infrastructure Facilities** :

1. **Land :** 131 Acre and 13 Guntas and additional 50 acres of land.
   - ❖ 112A 02 G of KIADB allotted at Tarabahalli Village, Jaraganahalli Hobli, Hoskote Taluk.
   - ❖ 12 A 31 G of KIADB allotted land.
   - ❖ 6 acres 20 guntas of Govt. land (KIADB acquisition is in process).
   - ❖ 50 acres of adjacent land KIADB to acquire and allot.
2. **Water :** 3800 KLD from KIADB or Secondary Treated Water from BWSSB.
3. **Power :** 5000 KVA to be serviced by BESCOM.
4. **Incentives and Concessions :** Additional Incentives & Concessions to be examined as a special case.

**GENERAL TERMS AND CONDITIONS :**

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   - a) The project proponents shall provide employment to at least one member of the family of each land looser as the land is being acquired through KIADB.
   - b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   - c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

**(Aparna Pavate)**

Desk Officer (Technical Cell)

Commerce & Industries Department

P.R. 1557

## COMMERCE & INDUSTRIES SECRETARIAT

**Sub :-** Approval to the Project Proposal of M/s. Bhuvana Comforts Pvt. Ltd., to establish an "Information Technology SEZ", in B.M. Kaval & Rachanamadu Village, Kengeri Hobli, Bangalore.

**Read :-** Proceedings of the 22nd State High Level Clearance Committee (SHLCC) Meeting held on 24-05-2010.

**Preamble :**

M/s. Bhuvana Comforts Pvt. Ltd., proposes to establish an "Information Technology SEZ", in B.M. Kaval & Rachanamadu Village, Kengeri Hobli, Bangalore, with an investment of Rs. 390 crores, generating employment to about 9500 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010, in all aspects.

Hence the following Order.

**Government Order No. CI 204 SPI 2010, Bangalore, dated : 02-06-2010**

Government is pleased to accord in principle approval to the Project Proposal of M/s. Bhuvana Comforts Pvt. Ltd., to establish an " Information Technology SEZ", in B.M. Kaval & Rachanamadu Village, Kengeri Hobli, Bangalore, withan investment of Rs. 390 crores, generating employment to about 9500 persons and extend the following infrastructure facilities, incentives and concessions.

**Infrastructure Facilities :**

1. **Land :** 33 acres 25 guntas of land at Sy. No.s. 191 264, 266, 190, 267, 206,207/1, 207/2, 99/2 of B.M. Kaval & 9 in Rachanamadu Village, Kengeri Hobli, Bangalore.
2. **Water :** 1000 KLPD (400 KLPD from BWSSB, 200 KLPD from own source, 300 KLPD from Recycled water and 100 KOPD from rain water harvesting)
3. **Power :** 8000 KVA power to be serviced by BESCOM.
4. **Incentives and Concessions :** As per applicable IT Policy and SEZ Policy of the State.

**GENERAL TERMS AND CONDITIONS :**

1. **MOU :** The project proponents will have to sign a MOU with the Government of Karnataka during the Global Investors Meet in June 2010
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate**)

Desk Officer (Technical Cell)

Commerce & Industries Department.

P.R. 1558

**ಒಳಾಡಳಿತ ಸಚಿವಾಲಯ**

ವಿಷಯ : ಶ್ರೀ ಬಿ.ಎಲ್. ವೇಣುಗೋಪಾಲ್, ಪೊಲೀಸ್ ಇನ್ಸ್‌ಪೆಕ್ಟರ್, ಜಾಗೃತ ದಳ, ಬೆಸ್ಕಾಂ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು ಇವರ ಆದೇಶ ಸಂಖ್ಯೆ : ಸಿಬಿ(8)54/2007-08 ದಿನಾಂಕ : 18-09-2008
2) ಅರ್ಜಿದಾರರ ಮೇಲ್ಮನವಿ ಅರ್ಜಿ ದಿ : 23-12-09
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ(8)54/2007-08 ದಿನಾಂಕ : 11-03-10

**ಪ್ರಸ್ತಾವನೆ :**

ಶ್ರೀ ಬಿ.ಎಲ್. ವೇಣುಗೋಪಾಲ್, ಪೊಲೀಸ್ ಇನ್ಸ್‌ಪೆಕ್ಟರ್, ಜಾಗೃತ ದಳ, ಬೆಸ್ಕಾಂ, ಬೆಂಗಳೂರು, ಇವರು ಈ ಹಿಂದೆ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

**ದೋಷಾರೋಪಣೆ :**

1. ದಿ : 12-2-2007 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ವಿವಾದದ ಭೂ ಮಾಲೀಕರು ಮತ್ತು ಆತನ ಸಂಬಂಧಿಕರು ಫಿರ‍್ಯಾದಿಯ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಮನೆಯಲ್ಲಿ ವಾಸವಾಗಿದ್ದ ಫಿರ‍್ಯಾದಿ ಮತ್ತು ಇತರರಿಗೆ ಹೊಡೆದು ಹೊರಗೆ ಹಾಕಿದ್ದ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಡಲು ಬಂದಾಗ ಅವರೊಂದಿಗೆ ಸೌಜನ್ಯದಿಂದ ವರ್ತಿಸದೆ ಫಿರ‍್ಯಾದಿ ಮತ್ತು ಮನೆಯವರನ್ನು ಠಾಣೆಯಲ್ಲಿ ದಸ್ತಗಿರಿ ಮಾಡಿ ಬಿಡುಗಡೆ ಮಾಡದೇ ಇಟ್ಟುಕೊಂಡು ಅದೇ ವೇಳೆಯಲ್ಲಿ ಅರ್ಜಿದಾರರ ಪರವಾಗಿ ಪ್ರತಿವಾದಿಗಳ ವಿರುದ್ಧ ಉಚ್ಚ ನ್ಯಾಯಾಲಯದ ಡಬ್ಲ್ಯೂ.ಪಿ. ಸಂ : 37886/04 ಆದೇಶವಿದ್ದಾಗ್ಯೂ ಸಹ ಕಾನೂನು ಬಾಹಿರವಾಗಿ ಮನೆಯನ್ನು ವಶಕ್ಕೆ ತೆಗೆದುಕೊಂಡಿದ್ದರೂ, ಸಹ ಒಬ್ಬ ಪೊಲೀಸ್ ಅಧಿಕಾರಿಯಾಗಿ ನ್ಯಾಯಾಲಯದ ಆದೇಶ ಮತ್ತು ಕಾನೂನು ಕಾಪಾಡುವ ಬದಲು ಪ್ರತಿವಾದಿಗೆ ಪರೋಕ್ಷವಾಗಿ ಸಹಾಯ ಮಾಡಿ, ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿ ಮಾಡಬೇಕಾದ ಕರ್ತವ್ಯವನ್ನು ಮಾಡದೇ ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ನಿರ್ಲಕ್ಷತೆ, ದುರ್ನಡತೆ ಹಾಗೂ ಕರ್ತವ್ಯಚುತಿ ಎಸಗಿರುವುದು.
2. ತಾವು ಬೆಂಗಳೂರು ನಗರದ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಅರ್ಜಿದಾರರಾದ ಶ್ರೀಮತಿ ಖತೀಜ ಮತ್ತು ಮನೆಯವರಿಗೆ ಪ್ರತಿವಾದಿಗಳು ನಿಂದಿಸಿ ಹಲ್ಲೆ ಮಾಡಿದ ಬಗ್ಗೆ ದೂರು ನೀಡಲು ಠಾಣೆಗೆ ಬಂದಾಗ, ಅರ್ಜಿದಾರರಿಗೆ ಮತ್ತು ಅವರ ಮನೆಯವರನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಡದೇ, ಅವರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿ ಠಾಣೆಯಲ್ಲಿ ದಸ್ತಗಿರಿ ಮಾಡಿ ಈ ಬಗ್ಗೆ ಮೇಲಾಧಿಕಾರಿಗಳ ನಿರ್ದೇಶನದಂತೆ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೀರಿ, ಈ ಸಂಬಂಧ ಏಕಪಕ್ಷೀಯವಾಗಿ ನಡೆದುಕೊಂಡು, ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ನಿರ್ಲಕ್ಷತೆ, ದುರ್ನಡತೆ ಹಾಗೂ ಕರ್ತವ್ಯಚ್ಯುತಿ ಎಸಗಿರುತ್ತೀರಿ.
3. ದಿ : 12-2-2007ರಂದು ಅರ್ಜಿದಾರರು ಕೊಟ್ಟ ದೂರನ್ನು ತಡವಾಗಿ ಅಂದರೆ ದಿನಾಂಕ : 14-2-2007 ರಂದು ದಾಖಲಿಸಿರುವುದಲ್ಲದೆ ಫಿರ‍್ಯಾದಿಯನ್ನು ನಿಂದಿಸಿ ಅರೋಪಿಯನ್ನು ದಸ್ತಗಿರಿ ಮಾಡದೇ

ತನಿಖೆಯನ್ನು ಸರಿಯಾಗಿ ನಡೆಸದೇ, ಬಿ ಅಂತಿಮ ವರದಿ ಸಲ್ಲಿಸಿಕೊಂಡು ಅಧಿಕಾರ ದುರುಪಯೋಗ, ಕರ್ತವ್ಯದಲ್ಲಿ ನಿರ್ಲಕ್ಷತೆ, ದುರ್ನಡತೆ ಹಾಗೂ ಕರ್ತವ್ಯಚ್ಯುತಿ ಎಸಗಿರುತ್ತೀರಿ.

4. ದಿನಾಂಕ : 25-2-2007 ರಂದು ಅರ್ಜಿದಾರರಿಗೆ ಕೆಲವು ಗೂಂಡಾ ವ್ಯಕ್ತಿಗಳು ಹಲ್ಲೆ ಉಂಟುಮಾಡಿ, ಬಿಳಿ ಖಾಲಿ ಕಾಗದದ ಮೇಲೆ ಸಹಿ ಮಾಡುವಂತೆ ಒತ್ತಾಯಿಸಿದ್ದರ ಬಗ್ಗೆ ಅರ್ಜಿದಾರರು ದೂರು ಸಲ್ಲಿಸಲು ಠಾಣೆಗೆ ಬಂದಾಗ ಅವರ ದೂರು ಸ್ವೀಕರಿಸದೇ ಕರ್ತವ್ಯದಲ್ಲಿ ನಿರ್ಲಕ್ಷತೆ, ದುರ್ನಡತೆ ಹಾಗೂ ಕರ್ತವ್ಯಚ್ಯುತಿ ಎಸಗಿರುವುದು."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು 3 ಆರೋಪಗಳು ಸಾಬೀತಾಗಿದ್ದು 4ನೇ ಆರೋಪವು ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (1)ರಲ್ಲಿ ಓದಲಾದ ದಿನಾಂಕ : 18-09-2009ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಕಾರಣಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಒಇ 4 ಪೊಸಿಅ 2010, ಬೆಂಗಳೂರು, ದಿನಾಂಕ : 14ನೇ ಜೂನ್, 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಿ.ಎಲ್. ವೇಣುಗೋಪಾಲ್, ಪೊಲೀಸ್ ಇನ್ಸ್‌ಪೆಕ್ಟರ್, ಜಾಗೃತ ದಳ, ಬೆಸ್ಕಾಂ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಟಿ.ಎನ್. ರವಿಪ್ರಕಾಶ್**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1559

## ಒಳಾಡಳಿತ ಸಚಿವಾಲಯ

**ವಿಷಯ :** ಶ್ರೀ ಗಂಗರಂಗಯ್ಯ, ಎಚ್.ಸಿ.-653, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :**

1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (1) 22/2006-07 ಓ.ಬಿ. 34/08-09 ದಿನಾಂಕ : 11-12-08
2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ : 31-03-08
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)11/2009-10 ದಿನಾಂಕ : 05-06-2009
4) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 163 ಸಿಎನ್‌ಎಸ್ 09 ದಿನಾಂಕ : 05-5-2010

**ಪ್ರಸ್ತಾವನೆ :**

ಶ್ರೀ ಗಂಗರಂಗಯ್ಯ, ಎಚ್.ಸಿ.-653, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ, ಇವರು ಮತ್ತು ಇನ್ನೋರ್ವ ಅಧಿಕಾರಿಯ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪ ಹಾಗೂ ಬೇಜವಾಬ್ದಾರಿತನ

ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

**ದೋಷಾರೋಪಣೆ :**

1) ದಿ : 12-2-2006 ರಂದು ಸಂಜೆ 4.45 ಗಂಟೆಗೆ ಇಲಿ ಪಾಷಾಣ ಸೇವಿಸಿದ್ದ ವಡ್ಡರ ದೊಡ್ಡಿ ಗ್ರಾಮದ ವಾಸಿ ರತ್ನಮ್ಮಳನ್ನು ರಾಮನಗರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿದ್ದು, ಸರ್ಕಾರಿ ಆಸ್ಪತ್ರೆಯ ವೈದ್ಯರು ಕಳುಹಿಸಿದ ಎಂ.ಎಲ್.ಸಿ., ಮೆಮೋವನ್ನು ನೀವು ಪಡೆದು ಅದೇ ದಿನ ಸೀಮಿಸ್ ನಂ. 34/2006ನ್ನು ಬರೆದು ಮಧ್ಯಾಪ್ನ 3.30 ಗಂಟೆ ಎಂದೂ ಸಮಯವನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿರುತ್ತೀರಿ.

2) ರಾಮನಗರ ಗ್ರಾಮಾಂತರ ಠಾಣಾ ಸೀಮಿಸ್ ನಂ. 34/2006ರಲ್ಲಿ ದಿ : 12-02-2006 ರಂದು ನೀವು ಆಸ್ಪತ್ರೆಗೆ ಭೇಟಿ ನೀಡಿ ವಡ್ಡರ ದೊಡ್ಡಿ ಗ್ರಾಮದ ವಾಸಿ ರತ್ನಮ್ಮಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು, ಹೇಳಿಕೆ ಪಡೆಯುವಾಗ ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದಳೆ ? ಅಥವಾ ಇಲ್ಲವೆ ? ಎಂಬ ಬಗ್ಗೆ ಸಂಬಂಧಪಟ್ಟ ವೈದ್ಯರಿಂದ ಲಿಖಿತ ವರದಿ ಪಡೆಯದೇ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿರುತ್ತೀರಿ.

3) ರಾಮನಗರ ಗ್ರಾಮಾಂತರ ಠಾಣಾ ಸೀಮಿಸ್ ನಂ. 34/2006ರಲ್ಲಿ ರತ್ನಮ್ಮ ಹೊಟ್ಟೆ ನೋವಿಗಾಗಿ ಪುಡಿ ಔಷಧಿಯ ಬದಲಿಗೆ ಇಲಿ ಪಾಷಾಣವನ್ನು ಸೇವಿಸಿರುವುದಾಗಿ ರತ್ನಮ್ಮಳ ಹೇಳಿಕೆಯಲ್ಲಿ ನೀವು ಬರೆದುಕೊಂಡಿದ್ದು, ಪುಡಿ ಔಷಧಿಯನ್ನು ಯಾರು ಎಲ್ಲಿಂದ ತಂದಿಟ್ಟಿದ್ದರು ಹಾಗೂ ಯಾವ ಸ್ಥಳದಲ್ಲಿಡಲಾಗಿತ್ತು ಎಂಬ ವಿವರಗಳನ್ನು ಹೇಳಿಕೆಯಲ್ಲಿ ಬರೆದುಕೊಂಡಿರುವುದಿಲ್ಲ. ಹಾಗೂ ಹೊಟ್ಟೆ ನೋವಿಗಾಗಿ ಪುಡಿ ಔಷಧಿ ಇರಲು ಸಾಧ್ಯವೇ ? ಅಥವಾ ಇಲ್ಲವೆ ಎಂಬುದನ್ನೂ ಸಹ ಖಚಿತಪಡಿಸಿಕೊಳ್ಳದೆ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿರುತ್ತೀರಿ.

4) ರಾಮನಗರ ಗ್ರಾಮಾಂತರ ಠಾಣಾ ಸೀಮಿಸ್ ನಂ. 34/2006ರಲ್ಲಿ ದಿ : 12-02-2006ರಂದು ವಡ್ಡರ ದೊಡ್ಡಿ ಗ್ರಾಮದ ವಾಸಿ ರತ್ನಮ್ಮಳ ಹೇಳಿಕೆ ಪಡೆಯಲು ಠಾಣೆಯಿಂದ ಎಷ್ಟು ಗಂಟೆಗೆ ಹೊರಟಿದ್ದು ಮತ್ತು ಎಷ್ಟು ಗಂಟೆಗೆ ಠಾಣೆಗೆ ಹಿಂತಿರುಗಿ ಬಂದಿದ್ದು ಹಾಗೂ ರತ್ನಮ್ಮಳ ಹೇಳಿಕೆಯನ್ನು ಯಾವ ಸಮಯದಿಂದ ಎಷ್ಟು ಸಮಯದವರೆಗೆ ಬರೆಯಲಾಯಿತು ಎಂಬ ವಿವರಗಳನ್ನು ಠಾಣಾ ದಿನಚರಿಯಲ್ಲಿ ನಮೂದಿಸದೇ ಕರ್ತವ್ಯದಲ್ಲಿ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ತೋರಿಸಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ 4 ಮಾತ್ರ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 11-12-08ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಗಳನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಮೇಲಿನ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯ ಆರೋಪಕ್ಕೆ ಅನುಗುಣವಾಗಿಲ್ಲವೆಂದು ಸರ್ಕಾರವು ತೀರ್ಮಾನಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸುವ ಕುರಿತು ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಒಇ 82 ಪೊಸಿಅ 2009 ಬೆಂಗಳೂರು, ದಿನಾಂಕ : 14ನೇ ಜೂನ್, 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಗಂಗರಂಗಯ್ಯ ಎಚ್.ಸಿ.- 653, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ, ರಾಮನಗರ ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ: 11-12-08ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ (ಸಂಚಿತ ಪರಿಣಾಮ ರಹಿತವಾಗಿ) ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1560

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

## ಒಳಾಡಳಿತ ಸಚಿವಾಲಯ

**ವಿಷಯ :** ಶ್ರೀ ಎ.ವೈ. ತಿಮ್ಮಾಪುರ, ಮಾಜಿ ಪಿ.ಸಿ., ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆ, ಬಾಗಲಕೋಟೆ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :**

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ 3/ಪಿಆರ್/ಇತರೆ 81/2008, ಅ.ಮ. ಸಂಖ್ಯೆ : 427/08, ದಿನಾಂಕ 20.11.2007 ಮತ್ತು 27.11.08.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ : ಅಪೀಲು 06/ಉವ/2009, ದಿನಾಂಕ 27–5–09.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 10–7–09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 27/2009–10, ದಿನಾಂಕ 09–12–2009.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ : 07 ಸಿಎಸ್‌ಎಸ್ 10, ದಿನಾಂಕ 06–05–2010.

**ಪ್ರಸ್ತಾವನೆ :**

ಶ್ರೀ ಎ.ವೈ. ತಿಮ್ಮಾಪುರ, ಇವರು ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ದುರ್ನಡತೆ, ಅಶಿಸ್ತು, ನಿರ್ಲಕ್ಷತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

**ದೋಷಾರೋಪಣೆ :**

ಆಪಾದಿತರಾದ ಶ್ರೀ ಎ.ವೈ. ತಿಮ್ಮಾಪುರ, ಸಿ.ಪಿ.ಸಿ.–1244, ತೇರದಾಳ ಪೊಲೀಸ್ ಠಾಣೆ, ನೀವು ಈ ಮೊದಲು ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ದಿನಾಂಕ 31–01–2007 ರಂದು ನವನಗರ ಪೊಲೀಸ್ ತರಬೇತಿ ಶಾಲೆ ಮುಂದೆ ಇರುವ ಸಂಗಮೇಶ್ವರ ಖಾನಾವಳಿ ಮುಂಭಾಗದಲ್ಲಿ ರಾತ್ರಿ 19.35 ಗಂಟೆ ಸುಮಾರಿಗೆ ಬಾಗಲಕೋಟೆ ಶಹರ ಠಾಣೆಯ ಸಿಪಿಸಿ 746 ಎಫ್.ಬಿ. ತೆಗ್ಗಿ ಹಾಗೂ ಸಿಎಚ್‌ಸಿ–1026 ಎಫ್.ವಾಯ್. ತಳವಾರ ನೇದವರು ಮಾತನಾಡುತ್ತಾ ಕುಳಿತಿರುವಾಗ ಅವರ ಹತ್ತಿರ ಹೋಗಿ ಸಿಪಿಸಿ 746 ನೇದವರೊಂದಿಗೆ "ಈ ಮೊದಲು ಪೆಟ್ರೋಲ್ ಕಳ್ಳತನದ ಪ್ರಕರಣದಲ್ಲಿ ನನ್ನ ಅಮಾನತ್ತಿಗೆ ನೀನೇ ಮೇಲಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಹೇಳಿ ನನ್ನ ಮರ್ಯಾದೆ ಕಳೆದಿರುತ್ತಿ ನನ್ನ ಅಮಾನತ್ತಿಗೆ ನೀನೇ ಕಾರಣ ಇರುವಿ ಸೂಳೇಮಗನೇ ನಿನ್ನ ಸೊಕ್ಕ ಬಹಳ ಆಗಿದೆ ಅಂತಾ ಹಲ್ಕಟ್ ಬೈದಾಡಿ, ನಿಮ್ಮ ಬಲಕಾಲಿನ ಬೂಟ್ ಬಿಚ್ಚಿ ಸಿಪಿಸಿ 746 ಎಫ್.ಬಿ. ತೆಗ್ಗಿ ಇವರ ಎಡ ಕಣ್ಣಿನ ಹತ್ತಿರ ಕಪಾಳಕ್ಕೆ ಹಾಗೂ ತಲೆಗೆ ಬೂಟಿನಿಂದ ಹೊಡೆದು, ಒಳ ನೊವು ಪಡಿಸಿ, ಕಾಲಿನಿಂದ ಒದ್ದು, ಕೆಳಗೆ ಕೆಡವಿ, ಕೈಯಿಂದ ಎದೆಗೆ ಗುದ್ದಿ, ನಿನ್ನ ಜೀವ ಸಹಿತ ಬಿಡುವುದಿಲ್ಲ" ಅಂತಾ ಜೀವದ ಬೆದರಿಕೆ ಹಾಕಿ ನೀವು ಒಬ್ಬ ಸರ್ಕಾರಿ ನೌಕರನಿಗೆ ಸಲ್ಲದ ಕೃತ್ಯವೆಸಗಿ ನೀವು ನಿಮ್ಮ ಆದ್ಯ ಕರ್ತವ್ಯದಲ್ಲಿ ಘೋರ ದುರ್ನಡತೆ, ಅಶಿಸ್ತು, ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 20–11–07 ರ ಆದೇಶದಲ್ಲಿ ಅರ್ಜಿದಾರ ಇವರು ಪಡೆಯುತ್ತಿರುವ ಕಾಲಿಕ ವೇತನ ಶ್ರೇಣಿಯಲ್ಲಿನ 2 ಹಂತಗಳನ್ನು, ಅಂದರೆ ರೂ.7100–00 ರಿಂದ ರೂ.6800–00 ಗೆ ಮುಂಬರುವ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ 3 ವರ್ಷಗಳ ಕಾಲ ಕೆಳಗಿಳಿಸಲಾಗಿದೆ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿದ್ದಾರೆ.

ಇವರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣ ಸಂಖ್ಯೆ : 1669/07 ರಲ್ಲಿ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಬಾಗಲಕೋಟೆ, ಇವರು ದಿನಾಂಕ 27–08–08 ರಲ್ಲಿ ಈ ಕೆಳಕಂಡಂತೆ ತೀರ್ಪು ನೀಡಿದೆ.

Acting U/Sec/255(2) of Cr P.C. accusd is convicted of the offences punishable U/Sec 504, 323 and 355 of IPC.

Acting U/Sec/255(1) of Cr P.C. accusd is acquited of the offence punishable U/Sec 506 of IPC.

Accused is released after due admnoition under Section 3 of Probation of Offenders Act.

ಈ ತೀರ್ಪಿನ ಹಿನ್ನೆಲೆಯಲ್ಲಿ ಶಿಸ್ತು ಪ್ರಾಧಿಕಾರವು ಓದಲಾದ (1)ರ ದಿನಾಂಕ 27-11-08ರ ಆದೇಶದಲ್ಲಿ ನ್ಯಾಯಾಲಯ ತೀರ್ಪಿನ ದಿನಾಂಕ : 27-8-08 ರಿಂದಲೇ ಪೂರ್ವಾನ್ವಯವಾಗುವಂತೆ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 27-05-2009ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರು ದುರ್ನಡತೆಯನ್ನು ಎಸಗಿರುವುದು ಸಾಬೀತಾಗಿದೆ ಅರ್ಜಿದಾರರಿಗೆ ಒಂದೇ ಆರೋಪಕ್ಕೆ ಎರಡು ಬಾರಿ ದಂಡನೆಯನ್ನು ವಿಧಿಸಿರುವುದನ್ನು ಹಾಗೂ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ, ಶಿಸ್ತು ಪ್ರಾಧಿಕಾರದ ದಂಡನೆಯ ಆದೇಶವನ್ನು ಮಾರ್ಪಡಿಸಲು ತೀರ್ಮಾನಿಸಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ : ಒಇ 131 ಪೊಸಿಅ 2009, ಬೆಂಗಳೂರು, ದಿನಾಂಕ : 14-06-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ.ವೈ. ತಿಮ್ಮಾಪುರ, ಮಾಜಿ ಪಿ.ಸಿ., ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ 20-11-07 ಮತ್ತು 27-11-08 ರ ಆದೇಶದಲ್ಲಿನ ದಂಡನೆಯ ಬದಲಾಗಿ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿ ಆದೇಶಿಸಿದೆ.

(i) ಅರ್ಜಿದಾರರನ್ನು ಸೇವೆಗೆ ಪುನರ್ ನೇಮಕ ಮಾಡಿ, ಪಿ.ಸಿ. ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಇವರ ವೇತನವನ್ನು ಮೂರು ವರ್ಷಗಳ ಕಾಲ ಸಂಚಿತ ಪರಿಣಾಮ ಬೀರುವಂತೆ ಕೆಳಗಿಳಿಸುವ ದಂಡನೆಯನ್ನು ವಿಧಿಸಲಾಗಿದೆ. ಸದರಿ ದಂಡನೆಯ ಅವಧಿಯಾದ ಮೂರು ವರ್ಷಗಳವರೆಗೆ ಇವರು ಯಾವುದೇ ವಾರ್ಷಿಕ ವೇತನ ಬಡ್ತಿ ಅಥವಾ ಪದೋನ್ನತಿ ಪಡೆಯಲು ಅರ್ಹರಿರುವುದಿಲ್ಲ.

(ii) ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಲಾಗಿದೆ.

(iii) ಸೇವೆಯಿಂದ ವಜಾಗೊಂಡ ದಿನಾಂಕದಿಂದ ಸೇವೆಗೆ ಮರು ಸ್ಥಾಪನೆಯಾಗುವ ದಿನಾಂಕದವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿಯೆಂದು (dies-non) ಎಂದು ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**(ಟಿ.ಎನ್. ರವಿಪ್ರಕಾಶ್),**

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1561

**ಒಳಾಡಳಿತ ಸಚಿವಾಲಯ**

**ವಿಷಯ :** ಶ್ರೀ ಎಸ್.ವೈ. ಜಾಧವ, ಮಾಜಿ ಪಿ.ಸಿ., ಕೇಶ್ವಾಪುರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ :**

1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರ ಆದೇಶ ಸಂಖ್ಯೆ : ಸಿಪಿ/ಸಿಬ್ಬಂದಿ 3/ನಿಯಮ 6/12/07ಅ.ಪು. ಸಂಖ್ಯೆ : 180/2008, ದಿನಾಂಕ 29.02.2008.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (6) 01/2008-09 ಓ.ಬಿ. ಸಂಖ್ಯೆ: 38/08-09, ದಿನಾಂಕ 20-12-2008.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 18-02-09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 123/2008-09, ದಿನಾಂಕ 23-05-2009.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ : 221 ಸಿಎನ್‌ಎಸ್ 09, ದಿನಾಂಕ 05-05-2010.

ಪ್ರಸ್ತಾವನೆ :

ಶ್ರೀ ಎಸ್.ವೈ. ಜಾಧವ, ಇವರು ಕೇಶ್ವಾಪುರ ಪೊಲೀಸ್ ಠಾಣೆ, ಹುಬ್ಬಳ್ಳಿಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾದ ಆರೋಪದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

**ದೋಷಾರೋಪಣೆ :**

"ಸಿ.ಪಿ.ಸಿ-2471. ಎಸ್.ವೈ. ಜಾಧವ, ಕೇಶ್ವಾಪುರ ಪೊಲೀಸ್ ಠಾಣೆ, ನಿಮಗೆ ಮಾನ್ಯ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ರವರು ತಮ್ಮ ಆದೇಶ ಪತ್ರ ಸಂಖ್ಯೆ ಸಿಪಿ/ಸಿಬ್ಬಂದಿ-1/ಎಎನ್ಎಫ್/63/2006 ಆದೇಶ ಪುಸ್ತಕದ ಸಂಖ್ಯೆ : 84/2006 ದಿ : 12-03-2006 ನೇದ್ದರ ಮೇರೆಗೆ ನಿಮ್ಮನ್ನು ನಕ್ಸಲ ನಿಗ್ರಹ ದಳ, ಕಾರ್ಕಳ, ಉಡುಪಿ ಜಿಲ್ಲೆಯಲ್ಲಿ ನಿಯೋಜನೆಯ ಮೇಲೆ ಕರ್ತವ್ಯ ನಿರ್ವಹಿಸಲು ತಾತ್ಕಾಲಿಕ ತಳಹದಿಯ ಮೇಲೆ ಮುಂದಿನ ಆದೇಶವಾಗುವವರೆಗೆ ನಿಯೋಜಿಸಿದ್ದು ಇತ್ತು. ಈ ಆದೇಶದ ಪ್ರಕಾರ ಪೊಲೀಸ್ ಇನ್ಸ್‌ಪೆಕ್ಟರ್, ಕೇಶ್ವಾಪುರ ಪೊಲೀಸ್ ಠಾಣೆ, ಇವರು ಸದರಿ ಆದೇಶ ಪತ್ರವನ್ನು ಜಾರಿಗೊಳಿಸಲು ನೀವು ದಿ : 13-03-2006 ರಂದು 21-00 ಗಂಟೆಯಿಂದ ಗೈರುಹಾಜರ ಆಗಿದ್ದರಿಂದ ಖುದ್ದಾಗಿ ಪೊಲೀಸ್ ಠಾಣೆಯಲ್ಲಿ ಜಾರಿ ಮಾಡಲು ಸಾಧ್ಯವಾಗದೇ, ಜಾರಿ ಮಾಡಲು ಎಚ್.ಸಿ.-2009 ಶ್ರೀ ಪಿ.ಜಿ. ಲಕ್ಷ್ಮೇಶ್ವರ ಮತ್ತು ಪಿ.ಸಿ.-2619 ಎಚ್.ಎಮ್. ಗುಳೇಶ್ ರವರುಗಳು ಪೊಲೀಸ್ ಇನ್ಸ್‌ಪೆಕ್ಟರ್, ಕೇಶ್ವಾಪುರ ಪೊಲೀಸ್ ಠಾಣೆ, ರವರ ಆದೇಶದ ಮೇರೆಗೆ ನಿಮ್ಮ ಮನೆಗೆ ಖುದ್ದಾಗಿ ಜಾರಿ ಮಾಡಲು ಬಂದಿದ್ದು, ನೀವು ಸಿಗದೇ ಇದ್ದುದರಿಂದ ಮತ್ತು ನಿಮ್ಮ ಮನೆಗೆ ಬೀಗ ಹಾಕಿದ್ದರಿಂದ ದಿ : 21.03.2006 ರಂದು ನಿಮ್ಮ ಮನೆಯ ಬಾಗಿಲಿಗೆ ಥಕಾಯಿಸಿ ಜಾರಿ ಮಾಡಿ ಬಂದಿದ್ದು ಇರುತ್ತದೆ.

ನೀವು ನಕ್ಸಲ ನಿಗ್ರಹ ದಳ, ಕಾರ್ಕಳ, ಉಡುಪಿ ಜಿಲ್ಲೆಗೆ ನಿಯೋಜಿಸಿದ್ದನ್ನು ತಿಳಿದುಕೊಂಡು ಅದೇ ದಿನದಿಂದ ಕರ್ತವ್ಯಕ್ಕೆ ಉದ್ದೇಶಪೂರ್ವಕವಾಗಿ ಹೇಳದೆ ಕೇಳದೆ ಅಂದರೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಸದರಿ ನಿಯೋಜನೆಯ ಆದೇಶ ಪತ್ರ ಹಾಗೂ ಬಿಡುಗಡೆಯ ಪತ್ರಗಳನ್ನು ಜಾರಿಗೊಳಿಸಲು ಸಿಗದೇ ಇದ್ದು, ಕೊನೆಗೆ ಸದರಿ ನಿಯೋಜನೆ ಆದೇಶ ಪತ್ರವನ್ನು ನಿಮ್ಮ ಮನೆಗೆ ಅಂಟಿಸಿ ಜಾರಿಗೊಳಿಸಿದರೂ ಸಹಾ ಕರ್ತವ್ಯಕ್ಕೆ ಬಂದು ಹಾಜರಾಗದೇ ಗೈರು ಹಾಜರಾಗಿರುತ್ತೀರಿ.

ಹೀಗಿರುವಾಗ ನೀವು ನಕ್ಸಲ ನಿಗ್ರಹ ದಳಕ್ಕೆ ಹೋಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಗೈರು ಹಾಜರಾಗಿದ್ದರಿಂದ ದಿನಾಂಕ 12-10-2006 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಕೇಶ್ವಾಪುರ ಪೊಲೀಸ್ ಠಾಣೆ, ಇವರು ನಮ್ಮ ಮೇಲೆ ಕರ್ತವ್ಯ ಪಲಾಯನ ಪತ್ರ ಹೊರಡಿಸಲು ತಮ್ಮ ಕಛೇರಿ ಪತ್ರ ಕ್ರಮಾಂಕ 325/2006 ದಿನಾಂಕ 12-10-2006 ರ ಮೇರೆಗೆ ಮಾನ್ಯ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ರವರಿಗೆ ಪತ್ರವನ್ನು ಬರೆದುಕೊಂಡಿರುತ್ತಾರೆ.

ಅನಧಿಕೃತವಾಗಿ ಗೈರು ಹಾಜರಾಗಿ ಹಾಗೂ ಮೇಲಾಧಿಕಾರಿಗಳ ಆದೇಶ ಮತ್ತು ಇಲಾಖಾ ನಿಯಮಾವಳಿಗಳನ್ನು ಪಾಲಿಸದೇ ತಾತ್ಸರ ಮನೋಭಾವನೆಯನ್ನು ತಾಳಿ, ನೀವು ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆ ಮತ್ತು ನಿರ್ಲಕ್ಷತನ ತೋರಿಸಿದ್ದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ನಿಮ್ಮ ಮೇಲೆ ಇರುವ ಈ ಆಪಾದನೆಯ ಬಗ್ಗೆ ಇಲಾಖಾ ವಿಚಾರಣೆಯನ್ನು ನಡೆಸಲು ಈ ಆಪಾದನೆ ಪತ್ರ ನೀಡಲಾಗಿದೆ.

ನೀವು ಶಿಸ್ತಿನ ಇಲಾಖೆಯಲ್ಲಿದ್ದು ಮೇಲಾಧಿಕಾರಿಗಳ ಆದೇಶವನ್ನು ಹಾಗೂ ಇಲಾಖಾ ನಿಯಮಾವಳಿಗಳನ್ನು ಪಾಲಿಸದೇ ಅವುಗಳ ಬಗ್ಗೆ ತಾತ್ಸರ ಮನೋಭಾವನೆಯನ್ನು ತಾಳಿ ಘೋರ ದುರ್ನಡತೆ, ಅತೀವ ನಿರ್ಲಕ್ಷತನ ಮತ್ತು ನಿಷ್ಕಾಳಜಿತನ ತೋರಿಸಿದ್ದು ಕಂಡುಬರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿಯನ್ನು ಕೋರಿದ್ದು ಅರ್ಜಿದಾರರು ಸಮಜಾಯಿಷಿ ನೀಡಿರುವುದಿಲ್ಲ. ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 29-02-2008 ರ ಆದೇಶದಲ್ಲಿ ಅರ್ಜಿದಾರರು ಗೈರುಹಾಜರಾದ ದಿನಾಂಕ 14-03-2006 ರಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 20-12-2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ ಆದರೆ ಅರ್ಜಿದಾರರು ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಂಡು ಮಾನವೀಯತೆ ದೃಷ್ಟಿಯಿಂದ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ : ಒಇ 44 ಪೊಸಿಅ 2009, ಬೆಂಗಳೂರು, ದಿನಾಂಕ : 14-06-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ವೈ. ಜಾಧವ, ಪಿ.ಸಿ., ಕೇಶ್ವಾಪುರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ 29-02-2008ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ **"ಕಡ್ಡಾಯ ನಿವೃತ್ತಿ"** ಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**(ಟಿ.ಎನ್. ರವಿಪ್ರಕಾಶ್),**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1562

## ಒಳಾಡಳಿತ ಸಚಿವಾಲಯ

**ವಿಷಯ :** ಶೌರ್ಯ ಪ್ರಶಸ್ತಿ ವಿಜೇತರಿಗೆ ಏಕ ಗಂಟಿನ ಮೊತ್ತದ ಅನುದಾನ (Lumpsum amount) ನೀಡುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರಿ ಆದೇಶ ಸಂ : ಒಇ 74 ಕಸೈಸೇ 93, ದಿನಾಂಕ 18-01-1997.
2. ಸರ್ಕಾರಿ ಆದೇಶ ಸಂ : ಒಇ 16 ಕಸೈಸೇ 01, ದಿನಾಂಕ 06-07-2002.
3. ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ರವರ ಪತ್ರ ಸಂ : ಸೈನಿಪುಇ/ಶೌಪ್ರ/ನಿಯಮ/08, ದಿನಾಂಕ 03-04-2008.

**ಪ್ರಸ್ತಾವನೆ :**

ಮೇಲೆ ಓದಲಾದ (1) ರಲ್ಲಿ ಕೇಂದ್ರ ರಕ್ಷಣಾಲಯವು ಗ್ಯಾಲಂಟರಿ ಮತ್ತು ನಾನ್ ಗ್ಯಾಲಂಟರಿ ಪ್ರಶಸ್ತಿ ವಿಜೇತರಿಗೆ ಎಲ್ಲಾ ರಾಜ್ಯಗಳಲ್ಲಿಯೂ ಏಕರೂಪದ ನಗದು ಅನುದಾನ ದರಗಳನ್ನು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಮಂಜೂರಾತಿ ನೀಡಿತ್ತು.

| ಕ್ರಮ ಸಂ. | ಶೌರ್ಯ ಪ್ರಶಸ್ತಿಯ ಹೆಸರು | ನಗದು ಅನುದಾನ (ಒಂದು ಬಾರಿ) ರೂ. | ವರ್ಷಾಸನ | ಜಮೀನಿಗೆ ಬದಲು ನಗದು (ಒಂದು ಬಾರಿ) ರೂ. |
|---|---|---|---|---|
| 1) | ಪರಮವೀರ ಚಕ್ರ | 22,500 | 1,000 | 1,50,000 |
| 2) | ಮಹಾವೀರ ಚಕ್ರ | 15,000 | 400 | 1,00,000 |
| 3) | ವೀರ ಚಕ್ರ | 7,000 | 300 | 50,000 |
| 4) | ಅಶೋಕ ಚಕ್ರ | 20,000 | 800 | 1,25,000 |
| 5) | ಕೀರ್ತಿ ಚಕ್ರ | 12,000 | 350 | 75,000 |
| 6) | ಶೌರ್ಯ ಚಕ್ರ | 5,000 | 250 | 40,000 |
| 7) | ಸೇನಾ/ನೌಕರಿ ಸೇನಾ ವಾಯುಸೇನಾ ಮೆಡಲ್ | 3,000 | 250 | 20,000 |
| 8) | ಮೆನಶನ್ ಎನ್ ಡಿಸ್‌ಪ್ಯಾಚ್ | 2,000 | 150 | 10,000 |

ತಪನಂತರ ಮೇಲೆ ಓದಲಾದ (2)ರ ಆದೇಶದಲ್ಲಿ ಈ ಕೆಳಗೆ ನಮೂದಿಸಿರುವ ವಿಶಿಷ್ಟ ಸೇವಾ ಪ್ರಶಸ್ತಿಗಳ ವಾರ್ಷಿಕ ಅನುದಾನವನ್ನು ಅವುಗಳ ಮುಂದೆ ಸೂಚಿಸಿರುವಂತೆ ಹೆಚ್ಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

| | |
|---|---|
| 1) ಪರಮವೀರ ಚಕ್ರ | ರೂ. 1000 ರಿಂದ 2000 |
| 2) ಮಹಾವೀರ ಚಕ್ರ | ರೂ. 400 ರಿಂದ 1500 |
| 3) ವೀರಚಕ್ರ | ರೂ. 300 ರಿಂದ 1000 |

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ನಿರ್ದೇಶಕರು ಮೇಲೆ ಓದಲಾದ (3)ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಯೋಧರ ಕುಟುಂಬದವರಿಗೆ ನೀಡುವ ಪರಿಹಾರ ಧನ ಸಹಾಯವನ್ನು (ಶೌರ್ಯ ಪ್ರಶಸ್ತಿ) ಪಂಜಾಬ, ಹರಿಯಾಣಾ ಹಾಗೂ ಉತ್ತರ ಪ್ರದೇಶ ರಾಜ್ಯಗಳಲ್ಲಿ ನೀಡುತ್ತಿರುವಂತೆ ಕರ್ನಾಟಕ ಸರ್ಕಾರವು ಕರ್ನಾಟಕದ ಯೋಧರಿಗೆ ನೀಡುತ್ತಿರುವ ನಗದು, ಅನುದಾನ, ಜಮೀನಿಗೆ ಬದಲು ನಗದು ಅನುದಾನ ಹಾಗೂ ವರ್ಷಾಸನಗಳ ಹೊರತಾಗಿ ಈ ಕೆಳಗೆ ನಮೂದಿಸಿರುವ ಏಕಗಂಟಿನ ಮೊತ್ತವನ್ನು ದಿನಾಂಕ 01-01-2007 ರಿಂದ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಹೊರಡಿಸಲು ಕೋರಿದ್ದಾರೆ.

| ಕ್ರಮ ಸಂ. | ಶೌರ್ಯ ಪ್ರಶಸ್ತಿಯ ಹೆಸರು | ನಗದು ಅನುದಾನ (ಒಂದು ಬಾರಿ) ರೂ. | ಜಮೀನಿಗೆ ಬದಲು ನಗದು (ಒಂದು ಬಾರಿ) ರೂ. | ವರ್ಷಾಸನ | ಪ್ರಸ್ತಾವಿತ ಹೆಚ್ಚುವರಿಯಾಗಿ ನೀಡಲು ಉದ್ದೇಶಿಸಿರುವ ಏಕಗಂಟಿನ ಮೊತ್ತ (ಒಂದು ಬಾರಿ) |
|---|---|---|---|---|---|
| 1) | ಪರಮವೀರ ಚಕ್ರ | 22,500 | 1,50,000 | 2,000 | 25,00,000 |
| 2) | ಮಹಾವೀರ ಚಕ್ರ | 15,000 | 1,00,000 | 1,500 | 15,00,000 |
| 3) | ವೀರ ಚಕ್ರ | 7,000 | 50,000 | 1,000 | 10,00,000 |
| 4) | ಅಶೋಕ ಚಕ್ರ | 20,000 | 1,25,000 | 800 | 25,00,000 |
| 5) | ಕೀರ್ತಿ ಚಕ್ರ | 12,000 | 75,000 | 350 | 15,00,000 |
| 6) | ಶೌರ್ಯ | 5,000 | 40,000 | 250 | 10,00,000 |
| 7) | ಸೇನಾ/ನೌಕಾ ಸೇನಾ ವಾಯುಸೇನಾ ಮೆಡಲ್ | 3,000 | 20,000 | 250 | 5,00,000 |
| 8) | ಮೆನಶನ್ ಎನ್ ಡಿಸ್‌ಪ್ಯಾಚ್ | 2,000 | 10,000 | 150 | 2,50,000 |

ಕರ್ನಾಟಕ ಶೌರ್ಯ ಪ್ರಶಸ್ತಿ ವಿಜೇತರಿಗೆ ಏಕಗಂಟಿನ ಮೊತ್ತವನ್ನು ನೀಡುವ ಆದೇಶವನ್ನು 01-01-2007 ರಿಂದ ಅನ್ವಯವಾಗುವಂತೆ ಜಾರಿಗೆ ತಂದಲ್ಲಿ 2007-08ನೇ ಸಾಲಿನಲ್ಲಿ ಕರ್ನಲ್ (ದಿವಂಗತ) ವಸಂತ ವೇಣುಗೋಪಾಲ, (ಅಶೋಕ ಚಕ್ರ) ಇವರ ಒಂದೆ ಒಂದು ಪ್ರಕರಣವಿದ್ದು ಇದಕ್ಕಾಗಿ ರೂ.25,00,000/-ಗಳ ಅನುದಾನ ಲೆಕ್ಕ ಶೀರ್ಷಿಕೆ 2235-60-200-1-99 (100) (ಎಕ್ಸ್‌ಗ್ರೇಶಿಯಾ) ಯಡಿಯಲ್ಲಿ ನೀಡಬಹುದಾಗಿದೆ ಹಾಗೂ ಮುಂಬರುವ ದಿನಗಳಲ್ಲಿ ಶೌರ್ಯ ಪ್ರಶಸ್ತಿ ಪಡೆದವರಿಗೆ ಸಹ ಸದರಿ ಏಕಗಂಟಿನ ಧನ ಸಹಾಯ ನೀಡಬಹುದಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ : ಒಇ 27 ಕಸೈಸೇ 2008, ಬೆಂಗಳೂರು, ದಿನಾಂಕ : 15-06-2010**

ಪ್ರಸಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ಯಾಲಂಟರಿ ಮತ್ತು ನಾನ್ ಗ್ಯಾಲಂಟರಿ ಪ್ರಶಸ್ತಿ ವಿಜೇತರಿಗೆ ಎಲ್ಲಾ ರಾಜ್ಯಗಳಲ್ಲಿಯೂ ಏಕ ರೂಪದ ನಗದು ಅನುದಾನದ ದರಗಳನ್ನು ನೀಡುತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಈ ಕೆಳಗಿನ 8 ವರ್ಗಗಳ ಶೌರ್ಯ ಪ್ರಶಸ್ತಿ ವಿಜೇತರಿಗೆ ಒಂದು ಬಾರಿ ನೀಡುವ ಅನುದಾನದ ಮೊತ್ತವನ್ನು ಅವುಗಳೆದುರು ತೋರಿಸಿರುವಂತೆ ಹೆಚ್ಚಿಸಲು ಸರ್ಕಾರವು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಮಂಜೂರಾತಿಯನ್ನು ನೀಡಿದೆ.

| ಕ್ರಮ ಸಂ. | ಶೌರ್ಯ ಪ್ರಶಸ್ತಿಯ ಹೆಸರು | ನಗದು ಅನುದಾನ (ಒಂದು ಬಾರಿ) | |
|---|---|---|---|
| | | ಈಗ ನೀಡುತ್ತಿರುವ ಏಕಗಂಟಿನ ಮೊತ್ತ | ಹೆಚ್ಚಿಸಿರುವ ದರ |
| 1) | ಪರಮವೀರ ಚಕ್ರ | 1,74,500.00 | 5,00,000.00 |
| 2) | ಮಹಾವೀರ ಚಕ್ರ | 1,16,500.00 | 2,00,000.00 |
| 3) | ವೀರ ಚಕ್ರ | 58,000.00 | 1,50,000.00 |
| 4) | ಅಶೋಕ ಚಕ್ರ | 1,45,800.00 | 5,00,000.00 |
| 5) | ಕೀರ್ತಿ ಚಕ್ರ | 87,350.00 | 2,00,000.00 |
| 6) | ಶೌರ್ಯ | 45,250.00 | 1,50,000.00 |
| 7) | ಸೇನಾ/ನೌಕಾ ಸೇನಾ ವಾಯುಸೇನಾ ಮೆಡಲ್ | 23,250.00 | 1,00,000.00 |
| 8) | ಮೆನಶನ್ ಎನ್ ಡಿಸ್‌ಪ್ಯಾಚ್ | 12,150.00 | 1,00,000.00 |

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2235-60-200-1-99 (100) (ಎಕ್ಸ್‌ಗ್ರೇಶಿಯಾ) ರಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ : ಆಇ 99 ವೆ-11/2010, ದಿನಾಂಕ : 06-05-2010 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**(ಜಿ.ಆರ್. ಶ್ರೀನಿವಾಸರಾವ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಒಳಾಡಳಿತ ಇಲಾಖೆ
(ಪೊಲೀಸ್ ಸಹಾಯಕ ಸೇವೆಗಳು).

ಪಿ.ಆರ್. 1563

## ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

**ವಿಷಯ :** ಇಂಡಿಯನ್ ಮೆರಿಟೈಮ್ ಯೂನಿವರ್ಸಿಟಿ, ಕೊಲ್ಕತಾ ಇವರು ದಿನಾಂಕ 16-08-2010 ರಿಂದ 21-08-2010 ರವರೆಗೆ ಏರ್ಪಡಿಸಿರುವ ತರಬೇತಿಗೆ ಕ್ಯಾಪ್ಟನ್ ಸಿ. ಸ್ವಾಮಿ, ಬಂದರು ಅಧಿಕಾರಿ, ಕಾರವಾರ ಅವರನ್ನು ನಿಯೋಜಿಸುವ ಬಗ್ಗೆ – ಆದೇಶ.

**ಓದಲಾಗಿದೆ :**

1. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇವರ ಪತ್ರ ಸಂಖ್ಯೆ ಬಂಒಜಸಾ – 48/ಎಂಎಸ್‌ಸಿ/2009, ದಿನಾಂಕ 15-05-2010.

**ಪ್ರಸ್ತಾವನೆ :**

ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 15-05-2010 ರ ಪತ್ರದಲ್ಲಿ ಇಂಡಿಯನ್ ಮೆರಿಟೈಮ್ ಯೂನಿವರ್ಸಿಟಿ, ಕೊಲ್ಕತಾ ಇವರ ದಿನಾಂಕ 29-04-2010 ರ ಪತ್ರವನ್ನು ಉಲ್ಲೇಖಿಸಿ ಸದರಿ ಸಂಸ್ಥೆ ದಿನಾಂಕ 16-08-2010 ರಿಂದ 21-08-2010 ರವರೆಗೆ ಏರ್ಪಡಿಸಿರುವ ತರಬೇತಿಗೆ ಕ್ಯಾಪ್ಟನ್ ಸಿ. ಸ್ವಾಮಿ, ಬಂದರು ಅಧಿಕಾರಿ, ಕಾರವಾರ ಅವರನ್ನು ನಿಯೋಜಿಸುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂ : ಲೋಇ 24 ಬನೌಸೇ 2010, ಬೆಂಗಳೂರು, ದಿನಾಂಕ : 11-06-2010**

ಇಂಡಿಯನ್ ಮೆರಿಟೈಮ್ ಯೂನಿವರ್ಸಿಟಿ, ಕೊಲ್ಕತಾ ಇವರು ದಿನಾಂಕ 16-08-2010 ರಿಂದ 21-08-2010 ರವರೆಗೆ ಏರ್ಪಡಿಸಿರುವ ತರಬೇತಿ ಕಾರ್ಯಕ್ರಮಕ್ಕೆ ಕ್ಯಾಪ್ಟನ್ ಸಿ. ಸ್ವಾಮಿ, ಬಂದರು ಅಧಿಕಾರಿ, ಕಾರವಾರ ಇವರನ್ನು ನಿಯೋಜಿಸಲು ಅನುಮೋದನೆ ನೀಡಲಾಗಿದೆ. ಹಾಗೂ ಕ್ಯಾಪ್ಟನ್ ಸಿ. ಸ್ವಾಮಿ, ಬಂದರು ಅಧಿಕಾರಿ, ಕಾರವಾರ ಅವರು ಸದರಿ

ತರಬೇತಿಗೆ ಹಾಜರಾದಲ್ಲಿ, ತರಬೇತಿಗೆಂದು ನಿಗದಿಪಡಿಸಿರುವ ಶುಲ್ಕ ರೂ.15,000–00 ಮತ್ತು ಸದರಿಯವರ ಹುದ್ದೆಗೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ/ದಿನ ಭತ್ಯೆ ಪಡೆಯಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಜಿ. ಸಿದ್ದಲಿಂಗಯ್ಯ,**
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಮತ್ತು
ಒಳನಾಡು ಜಲಸಾರಿಗೆ ಇಲಾಖೆ
(ಸೇವೆಗಳು–ಸಿ)

ಪಿ.ಆರ್. 1564

## COMMERCE & INDUSTRIES SECRETARIAT

**Sub :-** Approval to Change of company name from M/s. IFCI Ltd., to M/s. IFCI Infrastructure Development Ltd.,

**Read :-** 1. Govt. Order No. CI 144 SPI 2010, Dated 29.04.2010.
2. Proceedings of the 22nd State High Level Clearance Committee (SHLCC) meeting held on 24-05-2010.

**Preamble:**

The Proposal of M/s. IFCI Ltd., to establish a "Financial City" at Devanahalli Industrial Area, Bangalore Rural District, with an investment of Rs.997 crores, generating employment to about 4300 persons, was approved in the 21st State High Level Clearance Committee (SHLCC) meeting held on 29-03-2010, and G.O. read at (1) above has been issued.

In the 22nd State High Level Clearance Committee (SHLCC) meeting held on 24-05-2010 the committee approved the request of the Company for Change of name from M/s. IFCI Ltd., to M/s. IFCI Infrastructure Development Ltd.

Hence the following Order.

**Government Order No. CI 144 SPI 2010, Bangalore, dated : 10-06-2010**

Government is pleased to accord approval to the to change of company name from M/s. IFCI Ltd., to M/s. IFCI Infrastructure Development Ltd., for establishment of "Financial City" at Devanahalli Industrial Area, Bangalore Rural District, with an investment of Rs. 997 crores, generating employment to about 4300 persons as per G.O. read at (1) above has been issued.

Other terms and conditions, infrastructure facilities, incentives and concessions remain the same as in the G.O. read at (1) above.

By Order and in the name of the Governor of Karnataka
**Aparna Pavate**
Desk Officer (Technical Cell)
Commerce & Industries Department

P.R. 1565

## COMMERCE & INDUSTRIES SECRETARIAT

**Sub :-** Approval to the Project Proposal of M/s. Swastik Steel (Hospet) Pvt. Ltd., to establish a "0.50 Million MTPA Integrated Steel Plant', at Danayakanakere & Gollarahalli Villages, Hospet Taluk, Bellary District.

**Read :-** Proceedings of the 22nd State High Level Clearance Committee (SHLCC) Meeting held on 24-05-2010.

**Preamble:**

M/s. Swastik Steel (Hospet) Pvt. Ltd., Proposes to establish a " 0.50 Million MTPA Integrated Steel Plant", at Danayakanakere & Gollarahalli Villages, Hospet Taluk, Bellary District, with an investment of Rs. 1500 crores, generating employment to about 362 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

**Government Order No. CI 242 SPI 2010, Bangalore, dated : 02-06-2010**

Government is pleased to accord in principle approval to the Project Proposal of M/s. Swastik Steel (Hospet) Pvt. Ltd., to establish a " 0.50 Million MTPA Integrated Steel Plant", at Danayakanakere & Gollarahalli Villages, Hospet Taluk, Bellary District, with an investment of Rs. 1500 crores, generating employment to about 362 persons. and extend the following infrastructure facilities, incentives and concessions.

**Infrastructure Facilities :**

1. **Land :** 580 acres at Danayakanakere & Gollarahalli Villages, Hospet Taluk, Bellary District U/s 109 of KLR Act and conversion of the same to industrial use.
2. **Water :** 6 MGD of water from Tungabhadra River during surplus/ rainy season, subject to approval of the Water Resources Department.
3. **Power :** 10,000 KVA to be serviced by GESCOM.
4. **Incentives and Concessions :** As per applicable under Industrial Policy of the State.

**GENERAL TERMS AND CONDITIONS :**

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wher ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

**Aparna Pavate**
Desk Officer (Technical Cell)
Commerce & Industries Department

P.R. 1586

## ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40-41ರ ರಸ್ತೆ ಮೇಲು ಸೇತುವೆ ಯ ಕೂಡು ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ.ಮೂಅಇ 65 ರಾರಾಹೆ 2007, ದಿನಾಂಕ : 27-07-07

(2) ಸರ್ಕಾರದ ಆದೇಶ ಸಂಖ್ಯೆ. ಮೂಅಇ 65 ರಾರಾಹೆ 2007, ದಿನಾಂಕ : 15-12-2008

(3) ಸರ್ಕಾರದ ಆದೇಶ ಸಂಖ್ಯೆ. ಮೂಅಇ 34 ರಾರಾಹೆ 2009, ದಿನಾಂಕ : 06-02-2010ರ ಸರ್ಕಾರಿ ಅದೇಶ.

(4) ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ, (ದ) ಬೆಂಗಳೂರು ಇವರ ದಿನಾಂಕ : 10-05-2010 ಪತ್ರ ಸಂಖ್ಯೆ : ಸಿಬಿಎಸ್ : ಹಭಪ : 34 : ಹಭಪ : 5465 : 2009-10.

ಪ್ರಸ್ತಾವನೆ :

ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40-41ರ ರಸ್ತೆ ಮೇಲು ಸೇತುವೆ ಯ ಕೂಡು ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ 50:50 ವೆಚ್ಚವನ್ನು ಹಂಚಿಕೆ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಹಾಗೂ ಸದರಿ ರಸ್ತೆಯ ಕಾಮಗಾರಿಗೆ ಬೇಕಾಗುವ ಭೂಸ್ವಾಧೀನ ಹಾಗೂ ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಕ್ರಮವಾಗಿ ರೂ. 342.00 ಮತ್ತು 349.10 ಲಕ್ಷಗಳನ್ನು ಮತ್ತು ಕಾಮಗಾರಿಗೆ ತಗಲುವ ಶೇ 50 ರಷ್ಟು ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 300.00 ಲಕ್ಷಗಳನ್ನು ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರಿ ಅದೇಶಗಳಲ್ಲಿ ಬಿಡುಗಡೆ ಮಾಡಲಾಗಿತ್ತು.

2. ಎಲ್.ಸಿ. ಸಂಖ್ಯೆ 40-41 ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವುದರಿಂದ ಹಾಗೂ ರಸ್ತೆ ಕಾಮಗಾರಿಗಳ ಕಂಬಗಳ ಕ್ಯಾಪ್ ತಳಮಟ್ಟಕ್ಕೆ ಪ್ರಗತಿ ಸಾಧಿಸಿದ್ದು ಮತ್ತು ಇನ್ನಿತರ ಕಾಮಗಾರಿಗಳು ಸಹ ನಡೆಯುತ್ತಿರುವುದರಿಂದ ಹಾಗೂ ಬಿಡುಗಡೆ ಮಾಡಿರುವ ಮೊತ್ತ ರೂ. 3.00 ಕೋಟಿಗಳಲ್ಲಿ ದಿನಾಂಕ : 31-03-2010ರ ಅಂತ್ಯಕ್ಕೆ ರೂ. 1,83,29,041/- ಲಕ್ಷಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದು, ಉಳಿದ ಮೊತ್ತ ರೂ. 1,16,70, 959/- ಲಕ್ಷಗಳು ಲ್ಯಾಪ್ಸ್ ಆಗಿದ್ದು, ಡ್ರಾ ಮಾಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ನೀಡುತ್ತಾ, ಸದರಿ ಕಾಮಗಾರಿಗೆ ತಗಲುವ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 5.00 ಕೋಟಿಯನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (4) ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ (ದಕ್ಷಿಣ) ಮುಖ್ಯ ಇಂಜಿನಿಯರವರು ಕೋರಿದ್ದಾರೆ.

3. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಅದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ಬೆಂಗಳೂರು, ದಿನಾಂಕ : 10ನೇ ಜೂನ್, 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40-41ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 2.00 ಕೋಟಿಗಳನ್ನು (ರೂಪಾಯಿ ಎರಡು ಕೋಟಿ ಮಾತ್ರ) 2010-2011 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465-01-190-3-04 (ಯೋಜನೆ)-211 ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲುಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ. 30.00 ಕೋಟಿಗಳಿಂದ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ತುಮಕೂರು ವಿಭಾಗ, ತುಮಕೂರು ಇವರಿಗೆ ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು ಸಾದಿಲ್ವಾರು ಬಿಲ್ಲಿನ ಮೂಲಕ ಸೆಳೆದು ಸಂಬಂಧಪಟ್ಟವರಿಗೆ ಖಜಾನೆ ಚೆಕ್ ಮೂಲಕ ಕೊಡತಕ್ಕದ್ದು.

3. ಈ ಆದೇಶವನ್ನು ದಿನಾಂಕ : 16-05-2008 ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008 ಸರ್ಕಾರಿ ಅದೇಶದಲ್ಲಿ ಇಲಾಖೆಯು ಪ್ರಧಾನ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎನ್. ಮಂಜುಳ ಗೀತ**

ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 1587

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಆಡಳಿತ ತರಬೇತಿ ಸಂಸ್ಥೆ, ಮೈಸೂರು, ಇಲ್ಲಿ ದಿನಾಂಕ: 24-06-2010 ರಿಂದ 26-06-2010 ರವರೆಗೆ ನಡೆಯಲಿರುವ Sustainable Development ತರಬೇತಿ ಕೋರ್ಸಿಗೆ ಕೆ.ಎ.ಎಸ್. ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ : ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರ ಪತ್ರ ಸಂಖ್ಯೆ : TRG/F(NRM)/CR-25/2010-11, ದಿನಾಂಕ : 29-05-2010

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 29-05-2010ರ ಪತ್ರದಲ್ಲಿ ಅಡಳಿತ ತರಬೇತಿ ಸಂಸ್ಥೆ, ಮೈಸೂರು, ಇಲ್ಲಿ ದಿನಾಂಕ : 24-06-2010 ರಿಂದ 26-06-2010ರವರೆಗೆ ನಡೆಯಲಿರುವ Sustainable Development ತರಬೇತಿ ಕೋರ್ಸಿಗೆ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿಗಳನ್ನು ನಿಯೋಜಿಸುವಂತೆ ಮಹಾನಿರ್ದೇಶಕರು ಕೋರಿದ್ದಾರೆ. ಸದರಿ ತರಬೇತಿಯಲ್ಲಿ The course comprises of field trips & class room sessions to interact with the resource persons ವಿಷಯದ ಬಗ್ಗೆ ತರಬೇತಿ ಹಮ್ಮಿಕೊಂಡಿರುವುದರಿಂದ, ಈ ತರಬೇತಿಯು ಅಧಿಕಾರಿಗಳಿಗೆ ಆಡಳಿತ ನಿರ್ವಹಣೆಯಲ್ಲಿ ಉಪಯುಕ್ತವಾಗಿದೆಯೆಂದು ಮಹಾನಿರ್ದೇಶಕರು ತಿಳಿಸಿದ್ದಾರೆ.

ಮಹಾನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮುಂದಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 205 ಆಸೇಇ 2010, ಬೆಂಗಳೂರು, ದಿನಾಂಕ : 14ನೇ ಜೂನ್, 2010**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡ 10 ಕೆ.ಎ.ಎಸ್. ಆಯ್ಕೆ ಶ್ರೇಣಿ ಹಾಗೂ ಹಿರಿಯ ಶ್ರೇಣಿ ಅಧಿಕಾರಿಗಳನ್ನು ಮೈಸೂರು ಅಡಳಿತ ತರಬೇತಿ ಸಂಸ್ಥೆಯಲ್ಲಿ ದಿನಾಂಕ : 24-06-2010 ರಿಂದ 26-06-2010 ರವರೆಗೆ ನಡೆಯಲಿರುವ Sustainable Development ತರಬೇತಿ ಕೋರ್ಸಿಗೆ ನಿಯೋಜಿಸಲಾಗಿದೆ.

ಅಧಿಕಾರಿಗಳು ಸದರಿ ಕೋರ್ಸಿಗೆ ಹಾಜರಾಗುವುದು ಕಡ್ಡಾಯವಾಗಿದ್ದು, ಗೈರು ಹಾಜರಾಗುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ತರಬೇತಿ ಪಡೆದ ನಂತರ ಅನುಭವಗಳ ಕಿರು ವರದಿಯನ್ನು ಒಂದು ವಾರದೊಳಗಾಗಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ಹಾಗೆಯೆ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ಈ ತರಬೇತಿಗೆ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಕೋರಿದೆ.

| ಕ್ರ ಸ. | ಅಧಿಕಾರಿಯ ಹೆಸರು ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಶ್ರೀ/ಶ್ರೀಮತಿ. | ಕ್ರ ಸ. | ಅಧಿಕಾರಿಯ ಹೆಸರು ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಶ್ರೀ/ಶ್ರೀಮತಿ. |
|---|---|---|---|
| 1. | ಎನ್. ಜಯರಾಮ್ (ಆಯ್ಕೆ ಶ್ರೇಣಿ) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್ ರಸ್ತೆ, ಬೆಂಗಳೂರು. | 2 | ಕೆ.ಎಸ್. ರಾಯ್ಕರ್ (ಆಯ್ಕೆ ಶ್ರೇಣಿ) ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು |
| 3 | ಮುಜಿಬ್ ಅಹಮದ್ ಹೆಚ್.ಎಂ. (ಆ.ಶ್ರೇ) ಮುಖ್ಯ ಕಾರ್ಯನಿರ್ವಹಣಾಧಿಕಾರಿ, Devika Rani Roerich Estate, V.V. Tower, Bangalore. | 4 | ರಾಮಾಂಜನೇಯ (ಆಯ್ಕೆ ಶ್ರೇಣಿ) ಮುಖ್ಯ ಆಡಳಿತಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು. |
| ೫ | ಹೇಮಾಜಿ ನಾಯಕ್ (ಹಿರಿಯ ಶ್ರೇಣಿ) ವಿಶೇಷ ಭೂಸ್ವಾಧೀನಾಧಿಕಾರಿಗಳು (LAQ & R & R), ಬೃಹತ್ ನೀರಾವರಿ ಯೋಜನೆ, M&G Project, ಬೆಳಗಾಂ. | 6 | ಜಿಯಾವುಲ್ಲಾ ಎಸ್. (ಹಿರಿಯ ಶ್ರೇಣಿ) ಜಂಟಿ ನಿರ್ದೇಶಕರು (Municipal Reforms), ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು. |
| 7 | ಎಂ. ಶಶಿಧರ್ (ಹಿರಿಯ ಶ್ರೇಣಿ) ಸರ್ಕಾರದ ಉಪ ಕಾರ್ಯದರ್ಶಿ, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಯೋಜನೆ, ಬೆಂಗಳೂರು. | 8 | ಎಸ್. ಜಿ. ವಾಲಿ (ಹಿರಿಯ ಶ್ರೇಣಿ) ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಕೋಶ, ಜಿಲ್ಲಾ ಪಂಚಾಯತ್, ಬಾಗಲಕೋಟೆ. |
| ೯ | ರುದ್ರಪ್ಪ (ಹಿರಿಯ ಶ್ರೇಣಿ) ಉಪ ಆಯುಕ್ತರು, ಬ್ಯಾಟರಾಯನಪುರ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು. | 10 | ಎಸ್. ಪಾಲಯ್ಯ (ಹಿರಿಯ ಶ್ರೇಣಿ) ಮುಖ್ಯ ಆಡಳಿತಾಧಿಕಾರಿ, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು. |

ಈ ತರಬೇತಿಗೆ ನಿಯೋಜಿತರಾಗಿರುವ ಅಧಿಕಾರಿಗಳು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗುತ್ತಾರೆ. ತರಬೇತಿಯ ಅವಧಿ ಹಾಗೂ ಅವಶ್ಯಕ ಪ್ರಯಾಣದ ಅವಧಿಯನ್ನು ಕರ್ತವ್ಯದ ಮೇಲೆ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಎಚ್.ಆರ್. ನಾಗೇಂದ್ರ**
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವೆಗಳು-2)

ಪಿ.ಆರ್. 1588

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

**ವಿಷಯ :** ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ ಸಾಲ-ಅಸಲು ಮತ್ತು ಬಡ್ಡಿಯ ಮರುಪಾವತಿಗಾಗಿ 2010ರ ಜೂನ್ ಅಂತ್ಯದ 22ನೇ ಕಂತಿನ ಹಣ ಬಿಡುಗಡೆ ಬಗ್ಗೆ.

**ಓದಲಾಗಿದೆ :** 1) ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 22 ಪಿಅರ್‌ಎಂ 2002 ದಿನಾಂಕ : 6-3-03,
2) ನಿರ್ದೇಶಕರು, ಮಾತಂ ಜೈತಂ ನಿರ್ದೇಶನಾಲಯರವರ ಪತ್ರ ಸಂಖ್ಯೆ ಮಾತಂನಿ/ಲೆಕ್ಕ-1/ಹುಡ್ಕೋ ಲೋನ್/198/2009-10, ದಿ : 01-06-10.

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಅದೇಶ ದಿನಾಂಕ : 6-3-2003ರಲ್ಲಿ ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ [Housing and Urban Development Corporation] ಸಂಸ್ಥೆಯಿಂದ ರೂ. 20.00 ಕೋಟಿ ಸಾಲವನ್ನು ಎತ್ತುವಳಿ ಮಾಡಲು ಮಂಜೂರಾತಿ ನೀಡಲಾಗಿತ್ತು.

2005ನೇ ವರ್ಷದಿಂದ ಹುಡ್ಕೋ ಸಂಸ್ಥೆಯ ಅಸಲು, ಬಡ್ಡಿಯ ಮರುಪಾವತಿಯ ಕೆಬಿಟ್ಸ್ ಸಂಸ್ಥೆಗೆ ತ್ರೈಮಾಸಿಕ ಅನುದಾನಗಳನ್ನು ಸರ್ಕಾರವು ಆಗಿಂದಾಗ್ಗೆ ಬಿಡುಗಡೆ ಮಾಡುತ್ತಲಿದೆ.

2010ನೇ ಸಾಲಿನ ಆಯವ್ಯಯದಲ್ಲಿ ಸದರಿ ಸಾಲವನ್ನು ಮರುಪಾವತಿಸಲು ಬಾಬ್ತು ಲೆಕ್ಕಶೀರ್ಷಿಕೆ "5465-01-190-1-08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ" ಇದರ ಅಡಿಯಲ್ಲಿ ರೂ. 325.00 ಲಕ್ಷ ಒದಗಿಸಲಾಗಿದೆ.

ಮೇಲೆ [2] ರಲ್ಲಿ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರದಲ್ಲಿ ಹುಡ್ಕೋ ಸಂಸ್ಥೆಗೆ 22ನೇ ಕಂತಿನ ಬಾಬ್ತು ಅಸಲು ರೂ. 62,50,000/- + ಬಡ್ಡಿ ಬಾಬ್ತು ರೂ. 16,71,184/- ಒಟ್ಟು ರೂ. 79,21,184/-ಗಳನ್ನು 2010ರ ಜೂನ್ ಅಂತ್ಯದೊಳಗಾಗಿ ಪಾವತಿ ಮಾಡಬೇಕಾಗಿರುತ್ತದೆಂದು ತಿಳಿಸುತ್ತ, ಸದರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 13 ಪಿಆರ್‌ಎಂ 2010, ಬೆಂಗಳೂರು, ದಿನಾಂಕ : 17-06-2010**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಹುಡ್ಕೋ ಸಾಲದ (22ನೇ ತ್ರೈಮಾಸಿಕ ಕಂತಿನ) ಅಸಲು ಮತ್ತು ಬಡ್ಡಿಯ ಬಾಬ್ತು ಪಾವತಿಸಲು ರೂ. 79,21,184/-ಗಳ [ಎಪ್ಪತ್ತೊಂಬತ್ತು ಲಕ್ಷದ ಇಪ್ಪತ್ತೊಂದು ಸಾವಿರದ ನೂರಾ ಎಂಬತ್ತನಾಲ್ಕು ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಅಪರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ '5465-01-190-1-08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ' ಇದರ ಅಡಿಯಲ್ಲಿ ಒದಗಣೆ ಮಾಡಲಾದ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಸದರಿ ಅನುದಾನದ ಬಳಕೆಯ ಬಗ್ಗೆ ಕೆಬಿಟ್ಸ್ ಸಂಸ್ಥೆಯ ಅಪರ ವ್ಯವಸ್ಥಾಪಕ ನಿರ್ದೇಶಕರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ಪಡೆದು ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16-05-2008 ಇದರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಜೆ.ಆರ್. ಅನ್ನಪೂರ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1589

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2010-11ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ಆಡಳಿತಾತ್ಮಕ ವೆಚ್ಚಕ್ಕಾಗಿ ಮೊದಲನೆಯ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 35 ಆಡವಿ 2010 ದಿನಾಂಕ : 15-04-10,
2) ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರರವರ ಪತ್ರ ಸಂ : ಕರಾದೂಸಂಅಕೇಂ/71/ಜಿಇಎನ್/2010, ದಿನಾಂಕ : 12-05-2010.

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451-00-090-2-08 ಕರ್ನಾಟಕ ರಾಜ್ಯ ದೂರ ಸಂವೇದಿಕ ತಂತ್ರಜ್ಞಾನ ಬಳಕೆ ಕೇಂದ್ರ - 059 ಇತರೆ ಖರ್ಚು [ಯೋಜನೆ]" ರಡಿಯಲ್ಲಿ ರೂ. 350.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸದರಿ ರೂ. 350 ಲಕ್ಷಗಳ ಒವಗಣೆ ಮೊತ್ತದಲ್ಲಿ ಸದರಿ ಸಂಸ್ಥೆಯ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 150.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ : 12-05-2010ರ ಪತ್ರದಲ್ಲಿ ಸಿಬ್ಬಂದಿಗಳ ವೇತನ ವಿತರಣೆ, ಆಡಳಿತ ನಿರ್ವಹಣೆ ಇತರೆ ವೆಚ್ಚಗಳಿಗಾಗಿ ಮೊದಲನೆಯ ಕಂತಿನ ಅನುದಾನವನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರಕ್ಕೆ ಬಿಡುಗಡೆ ಮಾಡಲು ನಿರ್ದೇಶಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲೆ (1)ರಲ್ಲಿ ಓದಲಾದ ಅದೇಶದಲ್ಲಿ 2010-11ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಆಡಳಿತಾತ್ಮಕ ವೆಚ್ಚಕ್ಕಾಗಿ ಒದಗಿಸಲಾಗಿರುವ ರೂ. 150.00 ಲಕ್ಷಗಳಲ್ಲಿ ಸದರಿ ಕೇಂದ್ರಕ್ಕೆ ರೂ. 37.50 ಲಕ್ಷಗಳನ್ನು ಮೊದಲನೆಯ ತ್ರೈಮಾಸಿಕ ಕಂತಿನ ಅನುದಾನವಾಗಿ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 57 ಎಡಿಎಂ 2010, ಬೆಂಗಳೂರು, ದಿನಾಂಕ : 18-06-2010**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ 2010-11ನೇ ಸಾಲಿಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಆಡಳಿತಾತ್ಮಕ ವೆಚ್ಚಕ್ಕಾಗಿ ಒದಗಿಸಲಾಗಿರುವ ರೂ. 150.00 ಲಕ್ಷಗಳಲ್ಲಿ ಮೊದಲನೆಯ ತ್ರೈಮಾಸಿಕ ಕಂತಿನ ಅನುದಾನವಾಗಿ ರೂ. 37.50 ಲಕ್ಷಗಳನ್ನು [ಮುವತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ] ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'3451-00-090-2-08 ಕರ್ನಾಟಕ ರಾಜ್ಯ ದೂರ ಸಂವೇದಿಕ ತಂತ್ರಜ್ಞಾನ ಬಳಕೆ ಕೇಂದ್ರ - 059 ಇತರೆ ಖರ್ಚು [ಯೋಜನೆ]"** ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಇವರು ಅನುದಾನದ ಬಳಕೆಯ ಬಗ್ಗೆ ಉಪಯೋಗಿತಾ ದೃಢೀಕರಣ ಪತ್ರವನ್ನು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16-05-2008 ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜೆ.ಆರ್. ಅನ್ನಪೂರ್ಣ**

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1590

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ**

ವಿಷಯ : ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಬೆಂಗಳೂರು ನಗರ, ಕೆಹೆಚ್‌ಎಸ್‌ಡಿಆರ್‌ಪಿ, ಜೆ.ಸಿ. ರಸ್ತೆ, ಮಾವಳ್ಳಿ, ಬೆಂಗಳೂರು ಈ ಕಟ್ಟಡಕ್ಕೆ ರಿಪೇರಿ ಮತ್ತು ಬಣ್ಣ ಬಳಿಯುವ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1) AEE/KHSDRP/Sub-division/B'lore/ಪತ್ರ ಸಂಖ್ಯೆ : HFW/KHSDRP/EEE/AEE/BNG/Est-RPR-DPMU/(U) 2010-11, ದಿನಾಂಕ : 28-05-2010.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಬೆಂಗಳೂರು ನಗರ, ಕೆಹೆಚ್‌ಎಸ್‌ಡಿಆರ್‌ಪಿ, ಜೆ.ಸಿ. ರಸ್ತೆ, ಮಾವಳ್ಳಿ, ಬೆಂಗಳೂರು ಈ ಕಟ್ಟಡಕ್ಕೆ ರಿಪೇರಿ ಮತ್ತು ಬಣ್ಣ ಬಳಿಯುವ ಕಾಮಗಾರಿಯನ್ನು ಹಮ್ಮಿಕೊಳ್ಳಬೇಕಾಗಿದ್ದು, ಇದಕ್ಕೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ನಿಯಮಗಳಿಗನುಸಾರವಾಗಿ ದರಗಳೊಂದಿಗೆ ಅಂದಾಜು

ಪಟ್ಟಿ ತಯಾರಿಸಿ ಕಳುಹಿಸಿರುತ್ತಾರೆ. ಅದರಂತೆ ಪರಿಶೀಲಿಸಿದ್ದು, ಕಾಮಗಾರಿಗೆ ಒಟ್ಟು ರೂ. 1.15 ಲಕ್ಷಗಳ ಅಂದಾಜು ವೆಚ್ಚವಾಗಲಿದ್ದು, ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಕಾಮಗಾರಿ ಅಗತ್ಯವೆಂದು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಇ/ಎಇ-2/ಡಿಪಿಎಂಓ/ ಬೆಂಗಳೂರು-ಅರ್ಬನ್/2010-11, ದಿನಾಂಕ : 18-06-2010.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಬೆಂಗಳೂರು ನಗರ, ಕೆಹೆಚ್‌ಎಸ್‌ಡಿಆರ್‌ಪಿ, ಜೆ.ಸಿ. ರಸ್ತೆ, ಮಾವಳ್ಳಿ, ಬೆಂಗಳೂರು ಈ ಕಟ್ಟಡಕ್ಕೆ ರಿಪೇರಿ ಮತ್ತು ಬಣ್ಣ ಬಳಿಯುವ ಕಾಮಗಾರಿಯನ್ನು ಕೈಗೊಳ್ಳಲು ರೂ. 1.15 ಲಕ್ಷ (ರೂಪಾಯಿ ಒಂದು ಲಕ್ಷದ ಹದಿನೈದು ಸಾವಿರ ಮಾತ್ರ) ಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1603

**ಎಂ. ಶಶಿಧರ್**
ಸರ್ಕಾರದ ಉಪ ಕಾರ್ಯದರ್ಶಿ,
ಕೆಹೆಚ್‌ಎಸ್‌ಡಿಆರ್‌ಪಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## ಸಹಕಾರ ಸಚಿವಾಲಯ

**ವಿಷಯ :** ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಲೇವಾದೇವಿ ಅಧಿನಿಯಮದಿಂದ ವಿನಾಯತಿ ನೀಡುವ ಬಗ್ಗೆ.

**ಓದಲಾಗಿದೆ:** ಸಹಕಾರ ಸಂಘಗಳ ನಿಬಂಧಕರು ಹಾಗೂ ಲೇವಾದೇವಿ ಮಹಾನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಎನ್.ಎಂ.ಎಲ್./ವೈ.ಎಂ.ಸಿ./58/2009-10, ದಿನಾಂಕ : 06-05-2010.

**ಪ್ರಸ್ತಾವನೆ:**

ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಈ ಸಂಸ್ಥೆಯು ರಿಜಿಸ್ಟ್ರಾರ್ ಆಫ್ ಕಂಪನೀಸ್, ಕೇರಳ ಇವರಿಂದ ದಿನಾಂಕ : 26-07-2007ರಂದು ನೋಂದಣಿಯಾಗಿದ್ದು ಆರ್‌ಬಿಐನ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವಿಭಾಗ, ಪ್ರಾಂತೀಯ ಕಛೇರಿ, ತಿರುವನಂತಪುರಂ ಇವರಿಂದ ದಿನಾಂಕ : 13-11-2001ರಂದು ಎನ್‌ಬಿಎಫ್‌ಸಿ ಸಂಸ್ಥೆ ಎಂದು ಪ್ರಮಾಣ ಪತ್ರ ಪಡೆದಿದ್ದು, ಕರ್ನಾಟಕದಲ್ಲಿಯೂ ಸಹ ಹಲವಾರು ಶಾಖೆಗಳನ್ನು ಹೊಂದಿದ್ದು ಕರ್ನಾಟಕ ಲೇವಾದೇವಿ ಅಧಿನಿಯಮದಿಂದ 1961ರನ್ವಯ ಪರವಾನಗಿ ಪಡೆದು ಹಣಕಾಸಿನ ವ್ಯವಹಾರ ನಡೆಸುತ್ತಿದ್ದು ತನ್ನೆಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ರೂ. 2.6 ಲಕ್ಷಗಳ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಪಾವತಿಸಿದ್ದು, ಕರ್ನಾಟಕ ಲೇವಾದೇವಿ ಅಧಿನಿಯಮದಿಂದ ವಿನಾಯಿತಿ ನೀಡಲು ಸಹಕಾರ ಸಂಘಗಳ ನಿಬಂಧಕರನ್ನು ದಿನಾಂಕ : 25-01-2010ರ ಮನವಿಯಲ್ಲಿ ಕೋರಿರುತ್ತದೆ.

ಸಹಕಾರ ಸಂಘಗಳ ನಿಬಂಧಕರು ಸದರಿ ಮನವಿಯನ್ನು ಪರಿಶೀಲಿಸಿ ಮುತ್ತೂಟ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಯು ಆರ್.ಬಿ.ಐ.ನಿಂದ ಅನುಮತಿ ಪಡೆದ ಎನ್‌ಬಿಎಫ್‌ಸಿ ಸಂಸ್ಥೆಯಾಗಿದ್ದು ಎನ್‌ಬಿಎಫ್‌ಸಿ ಸಂಸ್ಥೆಗಳ ನಿಯಂತ್ರಣವು ಆರ್.ಬಿ.ಐ. ಗೆ ಒಳಪಡುವುದರಿಂದ ಕರ್ನಾಟಕ ಲೇವಾದೇವಿ ಅಧಿನಿಯಮ 1961ರ ಪ್ರಕರಣ 2(10)(iv) (ಬಿ) ರಡಿಯಲ್ಲಿ ವಿನಾಯತಿ ನೀಡಲು ಪರಿಗಣಿಸಬಹುದಾಗಿದೆ ಎಂದು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 18 ಸಿಎಂಎಲ್ 2009, ಬೆಂಗಳೂರು, ದಿನಾಂಕ 15-06-2010.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಲೇವಾದೇವಿ ಅಧಿನಿಯಮ 1961ರ ಪ್ರಕರಣ (2)ರ ಖಂಡ 10ರ ಉಪಖಂಡ (iv)ರ ಐಟಂ (ಬಿ) ಅಡಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಮುತ್ತೂಟ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಈ ಸಂಸ್ಥೆಯು ಸದರಿ ಐಟಂನ ಉಪಬಂಧದಿಂದ ಮುಂದಿನ ಆದೇಶದವರೆಗೆ ಮತ್ತು ಭದ್ರತಾ ಠೇವಣಿ ಎಂದು ಸದರಿ ಸಂಸ್ಥೆಯು ಸರ್ಕಾರಕ್ಕೆ ಪಾವತಿಸಿರುವ ರೂ. 2,60,000.00 (ಎರಡು ಲಕ್ಷದ ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಷರತ್ತಿಗೊಳಪಟ್ಟು ವಿನಾಯಿತಿ ಪಡೆದಿರುತ್ತದೆ ಎಂದು ನಿಗದಿಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಆರ್.ಎಸ್. ಹುಚ್ಚಾಚಾರಿ**

ಪಿ.ಆರ್.1604

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

## ಕಂದಾಯ ಸಚಿವಾಲಯ

ವಿಷಯ : ಶ್ರೀ ಕೆ. ಮುರಳೀಧರ, ಹಿಂದಿನ ತಹಶೀಲ್ದಾರ್, ಉಡುಪಿ ತಾಲ್ಲೂಕು, ಪ್ರಸ್ತುತ ಚುನಾವಣಾ ತಹಶೀಲ್ದಾರ್, ಉಡುಪಿ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ: 1) ಪಬ್ಲಿಕ್ ಪ್ರಾಸಿಕ್ಯೂಟರ್, ಕರ್ನಾಟಕ ಲೋಕಾಯುಕ್ತ ಇವರ ಅ.ಸ.ಪತ್ರ ಸಂಖ್ಯೆ : ಕಂಪ್ಲೆಂಟ್/ಲೋಕ್/ಎಂವೈಎಸ್/448/2005/ಪಿಪಿ, ದಿನಾಂಕ : 06-04-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರ ದಿನಾಂಕ : 06-04-2010ರ ಪತ್ರದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್, ಕರ್ನಾಟಕ ಲೋಕಾಯುಕ್ತ ಇವರು, ಶ್ರೀ ಕೆ. ಮುರಳೀಧರ್, ತಹಶೀಲ್ದಾರ್, ಉಡುಪಿ ತಾಲ್ಲೂಕು ಇವರ ವಿರುದ್ಧ ದಿನಾಂಕ : 28-10-2005 ರಂದು ಫಿರ್ಯಾದುದಾರರಾದ ಶ್ರೀ ದಾಮೋಧರ ಶೆಟ್ಟಿ, ಉಡುಪಿ ತಾಲ್ಲೂಕು ಇವರು ಉಡುಪಿ ತಾಲ್ಲೂಕು ಎಲ್ಲೂರು ಗ್ರಾಮದ ಸರ್ವೆ ನಂ. 43/2 ಹಾಗೂ ಇನ್ನಿತರ ಜಮೀನಿಗೆ ಸಂಬಂಧಪಟ್ಟಂತೆ ಕಾನೂನು ಬಾಹಿರವಾಗಿ ಆದೇಶ ಮಾಡಿರುತ್ತಾರೆ ಎಂದು ಮಾನ್ಯ ಕರ್ನಾಟಕ ಲೋಕಾಯುಕ್ತರು, ಬೆಂಗಳೂರು ಇವರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರನ್ನು ಪರಿಶೀಲಿಸಿ ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ದಿನಾಂಕ : 03-04-2010ರ ವರದಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 7(2) ರನ್ವಯ ಪ್ರಾರಂಭಿಕ ತನಿಖೆಯನ್ನು ನಡೆಸಿ ಸದರಿ ಅಧಿನಿಯಮ ಕಲಂ 12(3) ರನ್ವಯ ಇಲಾಖಾ ವಿಚಾರಣೆ ಜರುಗಿಸಲು ಶಿಫಾರಸ್ಸು ಮಾಡಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಕೆ. ಮುರಳೀಧರ್, ಹಿಂದಿನ ತಹಶೀಲ್ದಾರ್, ಉಡುಪಿ ತಾಲ್ಲೂಕು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ 12(3)ರನ್ವಯ ಶಿಫಾರಸ್ಸು ಮಾಡಿರುವಂತೆ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 14(ಎ) ರನ್ವಯ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ.: ಆರ್‌ಡಿ 255 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 14-06-2010.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ, ಸರ್ಕಾರವು ಶ್ರೀ ಕೆ.ಮುರಳೀಧರ್, ಹಿಂದಿನ ತಹಶೀಲ್ದಾರ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ, ಪ್ರಸ್ತುತ ಚುನಾವಣಾ ತಹಶೀಲ್ದಾರ್, ಉಡುಪಿ ಜಿಲ್ಲೆ ಇವರ ವಿರುದ್ಧ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು ನಿಯಮ 11 ಮತ್ತು 11(ಎ) ರನ್ವಯ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಾವಳಿಯ ನಿಯಮ 14(ಎ) ರನ್ವಯ ಇಲಾಖಾ ವಿಚಾರಣೆ ಜರುಗಿಸಿ, ಸರ್ಕಾರಕ್ಕೆ ವರದಿ ನೀಡಲು ಮಾನ್ಯ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1605

**ಎಸ್.ಬಿ. ಸಸಾಲಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

## ಕಂದಾಯ ಸಚಿವಾಲಯ

**ವಿಷಯ :** ಶ್ರೀ ಆರ್.ಎ. ಪಾಟೀಲ, ಹಿಂದಿನ ತಹಶೀಲ್ದಾರ್, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಪ್ರಸ್ತುತ ನಿವೃತ್ತ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡುವ ಕುರಿತು-ಆದೇಶ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 2002 ದಿನಾಂಕ: 16-03-2005.

2, ಶ್ರೀ ಎಂ.ಎನ್. ಗದಗ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರ ವಿಚಾರಣಾ ವರದಿ ದಿನಾಂಕ : 30-09-2006.

ಪ್ರಸ್ತಾವನೆ:

ಶ್ರೀ ಆರ್.ಎ. ಪಾಟೀಲ, ಹಿಂದಿನ ತಹಶೀಲ್ದಾರ್, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಪ್ರಸ್ತುತ ನಿವೃತ್ತ ಇವರು ರಾಯಭಾಗ ತಾಲ್ಲೂಕಿನ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಗಾವಿ ಜಿಲ್ಲಾಧಿಕಾರಿಗಳು ನಡೆಸಿದ ಸದರಿ ಕಛೇರಿಯ ತಪಾಸಣೆ ವರದಿಯನ್ನು ಅನುಪಾಲನೆ ಮಾಡಲು ಸೂಚಿಸಿದ್ದು, ಸದರಿ ಅನುಪಾಲನಾ ವರದಿಯನ್ನು ಪರಿಶೀಲಿಸಲಾಗಿ, ರಾಯಭಾಗ ತಾಲ್ಲೂಕು ಕಛೇರಿಯಲ್ಲಿ ಸ್ವಚ್ಛತೆ ಕಾಪಾಡದಿರುವುದು, ಅಭಿಲೇಖಾಲಯದಲ್ಲಿ ಖಾಸಗಿ ವ್ಯಕ್ತಿಗಳಿಂದ ಮೂಲ ದಾಖಲೆಗಳ ಪ್ರತಿ ಮಾಡಿಸುವ ಕೆಲಸದಲ್ಲಿ ತೊಡಗಿಸಿದ್ದದ್ದು, ಮೇಲಾಧಿಕಾರಿಗಳಿಗೆ ಶಿಷ್ಟಾಚಾರ ನೀಡುವಲ್ಲಿ ವಿಫಲರಾಗಿರುತ್ತಾರೆಂಬ ಕಾರಣದಿಂದ ಸದರಿ ಜಿಲ್ಲಾಧಿಕಾರಿಯವರು ಈ ಬಗ್ಗೆ ಆರೋಪಿತ ಅಧಿಕಾರಿಯ ಇತರೆ 25

ಲೋಪದೋಷಗಳ ಬಗ್ಗೆ ದಿನಾಂಕ : 8-1-2002 ರಂದು ಕಾರಣ ಕೇಳುವ ನೋಟೀಸು ನೀಡಿದ್ದು, ಅದಕ್ಕೆ ಆಪಾದಿತ ಅಧಿಕಾರಿಯು ಸಲ್ಲಿಸಿದ ದಿನಾಂಕ : 23-1-2002ರ ಲಿಖಿತ ಹೇಳಿಕೆಯು ಸಮರ್ಪಕವಾಗಿರುವುದಿಲ್ಲವೆಂದು, ಅಲ್ಲದೆ ಈ ಆಪಾದಿತ ಅಧಿಕಾರಿಯು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿರುತ್ತಾರೆ ಎಂದು ಸದರಿ ಅಧಿಕಾರಿಯ ವಿರುದ್ಧ ದೋಷಾರೋಪಣ ಪಟ್ಟಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದು, ಸದರಿ ನೋಟೀಸಿಗೆ, ಅಧಿಕಾರಿಯು ತಮ್ಮ ಲಿಖಿತ ಹೇಳಿಕೆಯಲ್ಲಿ ಅವರ ವಿರುದ್ಧದ ಆರೋಪಗಳನ್ನು ಒಪ್ಪಿಕೊಳ್ಳದೇ ಅಲ್ಲಗಳೆದಿರುವುದರಿಂದ, ಇವರ ವಿರುದ್ಧದ ಆರೋಪಗಳು ಹಾಗೂ ಲಿಖಿತ ಹೇಳಿಕೆಯ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ಸರ್ಕಾರದ ದಿನಾಂಕ : 16-03-2005ರ ಆದೇಶದಲ್ಲಿ, ಶ್ರೀ ಎಂ.ಎನ್. ಗದಗ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಸರ್ಕಾರವು ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶದಂತೆ, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ : (2)ರ ದಿನಾಂಕ : 30-09-2006ರಂದು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ, ಈ ಕೆಳಗಿನಂತೆ ಅಂತಿಮವಾಗಿ ಅಭಿಪ್ರಾಯ ಪಟ್ಟಿರುತ್ತಾರೆ.

"Hence, I answer charge Nos. 1 to 9 levelled against AGO in the negative as not proved satisfactorily."

ಶ್ರೀ ಆರ್.ಎ. ಪಾಟೀಲ, ಹಿಂದಿನ ತಹಶೀಲ್ದಾರ್, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಪ್ರಸ್ತುತ ನಿವೃತ್ತ ಇವರ ವಿರುದ್ಧದ 9 ಆಪಾದನೆಗಳು ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಸಾಬೀತಾಗಿಲ್ಲವೆಂದು ವರದಿ ನೀಡಿರುವುದರಿಂದ, ಶ್ರೀ ಆರ್.ಎ. ಪಾಟೀಲ, ಹಿಂದಿನ ತಹಶೀಲ್ದಾರ್ (ಪ್ರಸ್ತುತ ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 2002, ಬೆಂಗಳೂರು, ದಿನಾಂಕ: 14-06-2010.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಆರ್.ಎ. ಪಾಟೀಲ, ಹಿಂದಿನ ತಹಶೀಲ್ದಾರ್, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಪ್ರಸ್ತುತ ನಿವೃತ್ತ ಇವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಬಿಟ್ಟು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1606

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

## ಕಂದಾಯ ಸಚಿವಾಲಯ

**ವಿಷಯ :** ಶ್ರೀ ಸುಲ್ತಾನ್ ಮಹಮ್ಮದ್, ಹಿಂದಿನ ತಹಶೀಲ್ದಾರ್, ಗುಲ್ಬರ್ಗಾ, ಇವರ ವಿರುದ್ಧ ಇಲಾಖಾ ವಿಚಾರಣೆ.

**ಓದಲಾಗಿದೆ:**
(1) ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಅರೆ ಸರ್ಕಾರಿ ಪತ್ರದ ಸಂ : D.O. No. REV : OAP 28/2006-07, ದಿನಾಂಕ : 17-03-2009.
(2) ಸರ್ಕಾರದ ಪತ್ರ ಸಂಖ್ಯೆ: ಕಂಇ 10 ಎಡಿಇ 2007, ದಿನಾಂಕ : 25-04-2007.
(3) ನಿಬಂಧಕರು, ಕರ್ನಾಟಕ ಲೋಕಾಯುಕ್ತರ ಕಛೇರಿ, ಬೆಂಗಳೂರು ಇವರ ಪತ್ರ ಸಂ : ಕಂಪ್ಲೆಂಟ್/ಇತರೇ ಜಿಎಲ್‌ಬಿ 235/2007/ಎಆರ್‌ಎಲ್‌ಓ-1, ದಿನಾಂಕ : 28-04-2007.

**ಪ್ರಸ್ತಾವನೆ:**

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಗುಲ್ಬರ್ಗಾ ಜಿಲ್ಲಾಧಿಕಾರಿಯವರು ಪತ್ರದಲ್ಲಿ ಶ್ರೀ ಸುಲ್ತಾನ್ ಮಹಮ್ಮದ್, ತಹಶೀಲ್ದಾರ್, ಗುಲ್ಬರ್ಗಾ ಇವರು ಬೇನಾಮಿ ಫಲಾನುಭವಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಿ, ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವುಂಟು ಮಾಡಿರುತ್ತಾರೆಂದು ತಿಳಿಸುತ್ತಾ, ಈ ಪ್ರಕರಣದಲ್ಲಿ ಈಗಾಗಲೇ ಉಪತಹಶೀಲ್ದಾರ್ ಆಗಿದ್ದ, ಶ್ರೀ ಮಾರಪ್ಪ ಇವರನ್ನು ಇಲಾಖಾ ವಿಚಾರಣೆ ಬಾಕಿ ಇಟ್ಟು, ಸೇವೆಯಿಂದ ಅಮಾನತ್ತು ಮಾಡಲಾಗಿದೆ. ಇಂತಹ ಪ್ರಕರಣ ಬಗ್ಗೆ ಕ್ರಾಸ್ ವೆರಿಫಿಕೇಷನ್ ಮಾಡಲು ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಗುಲ್ಬರ್ಗಾ ಇವರನ್ನು ಹಾಗೂ ಶ್ರೀ ಕಾಶೀನಾಥ್ ಪವಾರ್, ಕೆ.ಎ.ಎಸ್. (ಪರಿವೀಕ್ಷಣಾ) ಇವರನ್ನು ತನಿಖೆ ಮಾಡಿ ವರದಿ ನೀಡಲು ಸೂಚಿಸಲಾಗಿತ್ತು. ಅದರಂತೆ, ಸದರಿ ಅಧಿಕಾರಿಗಳು ತನಿಖೆ ನಡೆಸಿ, ಸದರಿ ವರದಿಯನುಸಾರ, ಗುಲ್ಬರ್ಗಾ ತಹಶೀಲ್ದಾರ್ ಆಗಿರುವ ಶ್ರೀ ಸುಲ್ತಾನ್ ಮಹಮ್ಮದ್ ಇವರು ಅನರ್ಹ ಫಲಾನುಭವಿಗಳಿಗೆ ಹಾಗೂ ಬೇನಾಮಿ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡಲು ಕಾರಣರಾಗಿರುತ್ತಾರೆ. ಗುಲ್ಬರ್ಗಾ ನಗರಸಭೆ ವ್ಯಾಪ್ತಿಯಲ್ಲಿ ಒಟ್ಟು 47 ಅನರ್ಹ ಫಲಾನುಭವಿಗಳಿಗೆ ಹಾಗೂ ಜೀಲನ್‌ಬಾಗ್ ವ್ಯಾಪ್ತಿಯಲ್ಲಿ 24 ಅನರ್ಹ ಫಲಾನುಭವಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಲು ಕ್ರಮ ತೆಗೆದುಕೊಂಡಿರುತ್ತಾರೆ. ಈ ಅರ್ಜಿಗಳನ್ನು ಪರಿಶೀಲಿಸಲಾಗಿ, ಅರ್ಜಿದಾರರ ವಿಳಾಸ ಸರಿಯಾಗಿರುವುದಿಲ್ಲ. ಭಾವಚಿತ್ರಗಳು ಸರಿಯಾದ ರೀತಿಯಲ್ಲಿ ಕಾಣುವುದಿಲ್ಲ, ಮಂಜೂರಾತಿ ಆದೇಶದಲ್ಲಿ ಒಂದೇ ತರಹ ಕೈಬರಹ ಹಾಗೂ ಹೆಬ್ಬೆಟ್ಟಿನ ಗುರುತು ಇರುತ್ತದೆ. ಫಲಾನುಭವಿಯ

ಹೆಸರು ಸರಿಯಾದ ರೀತಿಯಲ್ಲಿ ಇರುವುದಿಲ್ಲ. ಇಂತಹ ಪ್ರಕರಣಗಳು, ಕಡತಗಳು ಸಾಮಾನ್ಯವಾಗಿ ಸಿಗುತ್ತಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ವಿಚಾರಣೆ ಮಾಡಿದಾಗ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಭಾಗಿಯಾಗದೇ ಇರುವುದು ಕಂಡು ಬರುತ್ತದೆ. ಇವೆಲ್ಲವನ್ನು ತಹಶೀಲ್ದಾರ್ ಒಬ್ಬರೇ ಮಂಜೂರು ಮಾಡಲು ಕ್ರಮ ತೆಗೆದುಕೊಂಡಿರುತ್ತಾರೆ. ತಹಶೀಲ್ದಾರ್ ರವರ ಸಹಿ ಸ್ಪೆಸಿಮನ್ ಸಹಿಯು ಹೊಂದಾಣಿಕೆಯಾಗುತ್ತಿದ್ದು, ಕೆಲವು ಬೇನಾಮಿ ಫಲಾನುಭವಿಗಳು ಈಗಾಗಲೇ ಪಿಂಚಣಿಯನ್ನು ಕೆಲವು ತಿಂಗಳುಗಳಿಂದ ಪಡೆದಿರುವುದು ತಿಳಿದು ಬಂದಿದೆಯೆಂದು ತಿಳಿಸಿರುವರು.

ಮೇಲೆ ತಿಳಿಸಿರುವ ಅಂಶಗಳಲ್ಲದೆ, ಅನರ್ಹ ವ್ಯಕ್ತಿಗಳಿಗೆ ಪಿಂಚಣಿಯನ್ನು ಮಂಜೂರು ಮಾಡುವಲ್ಲಿ, ಕ್ರಮ ಕೈಗೊಂಡ ಬಗ್ಗೆ ಉದಾಹರಣೆಯಾಗಿ ಕೆಲವು ವ್ಯಕ್ತಿಗಳನ್ನು ಉದಾಹರಿಸಿರುತ್ತಾರೆ. ಇಂತಹ ಪ್ರಕರಣಗಳ ಕಡತಗಳನ್ನು ರಾಜಸ್ವ ನಿರೀಕ್ಷಕರ ಸಹಿಯು ಪ್ರತಿ ಪ್ರಕರಣಕ್ಕೆ ವ್ಯತ್ಯಾಸ ಇರುತ್ತದೆ. ಇದರಿಂದ, ಕ್ಷೇತ್ರ ಮಟ್ಟದ ಇಲಾಖಾ ನೌಕರರು ಭಾಗಿಯಾಗದೇ ಇರುವುದು ತಿಳಿದು ಬರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇಂತಹ ಪ್ರಕರಣಗಳನ್ನು ಮಂಜೂರು ಮಾಡುವಲ್ಲಿ ತಹಶೀಲ್ದಾರ್, ಗುಲ್ಬರ್ಗಾ ಇವರು ಒಬ್ಬರೇ ಕಾರಣರಾಗಿರುವುದರಿಂದ ಸದರಿಯವರ ಮೇಲೆ ಇಲಾಖಾ ವಿಚಾರಣೆ ಜರುಗಿಸಲು ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಬೇಕೆಂದು ಸಹಾಯಕ ನಿರ್ದೇಶಕರು ಕೃಷಿ ಇಲಾಖೆ ಇವರು ವರದಿಯಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈ ಪ್ರಕರಣದಿಂದ ಸರ್ಕಾರಕ್ಕೆ ಆರ್ಥಿಕ ನಷ್ಟವಾಗಿದ್ದು, ಈ ಬಗ್ಗೆ ಇಲಾಖಾ ವಿಚಾರಣೆಯನ್ನು ಜರುಗಿಸಲು ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಲೋಕಾಯುಕ್ತರನ್ನು ಕೋರಲಾಗಿತ್ತು.

ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣವನ್ನು ಸರ್ಕಾರಿ ಆದೇಶದ ರೂಪದಲ್ಲಿ ಯಾವ ಪ್ರಕರಣದಡಿ ವಹಿಸಲಾಗಿದೆ ಎಂಬುದನ್ನು ನಮೂದಿಸಬೇಕಾಗಿರುತ್ತದೆ. ಸದರಿ ತನಿಖೆಯನ್ನು ಲೋಕಾಯುಕ್ತ ಕಾಯ್ದೆಯ ಕಲಂ 7(2) (ಎ)ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ ಎಂಬ ಪದಗಳನ್ನು ನಿರ್ದಿಷ್ಟವಾಗಿ ನಮೂದಿಸಿ, ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿದ್ದರು. ಸದರಿ ವಿಷಯವನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯನ್ನು ಮಾಡಲು ಸರ್ಕಾರವು ತೀರ್ಮಾನಿಸಿ, ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ ಇವರಿಂದ ಶ್ರೀ ಸುಲ್ತಾನ್ ಮಹಮ್ಮದ್, ಹಿಂದಿನ ತಹಶೀಲ್ದಾರ್, ಗುಲ್ಬರ್ಗಾ ಇವರ ವಿರುದ್ಧ ಕರಡು ದೋಷಾರೋಪಣಾ ಪಟ್ಟಿಗಳನ್ನು ಅನುಬಂಧ 1 ರಿಂದ 4ರವರೆಗೆ ತಯಾರಿಸಿ, ಸರ್ಕಾರಕ್ಕೆ ಕಳುಹಿಸುವಂತೆ ದಿನಾಂಕ : 13-11-2008ರ ಪತ್ರದಲ್ಲಿ ಕೋರಲಾಗಿರುತ್ತದೆ.

ಸದರಿ ಪ್ರಕರಣ ನಡೆದು ಈಗಾಗಲೇ ಮೂರು ವರ್ಷ ಮೇಲ್ಪಟ್ಟಿರುವುದರಿಂದ, ಈ ಪ್ರಕರಣದಲ್ಲಿ ಈತನಕ ದೋಷಾರೋಪಣಾ ಪಟ್ಟಿ ಸಹ ನೀಡದೆ ಇದ್ದುದರಿಂದ ಹಾಗೂ ಆಪಾದಿತ ಅಧಿಕಾರಿ ನಿವೃತ್ತಿ ಅಂಚಿನಲ್ಲಿರುವುದರಿಂದ, ಶ್ರೀ ಸುಲ್ತಾನ್ ಮಹಮ್ಮದ್, ತಹಶೀಲ್ದಾರ್ ಇವರಿಗೆ ಎಚ್ಚರಿಕೆ ನೀಡಿ, ಸದರಿ ಪ್ರಕರಣವನ್ನು ಮುಕ್ತಾಯ ಮಾಡಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 10 ಎಡಿಇ 2007, ಬೆಂಗಳೂರು, ದಿನಾಂಕ: 15-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸುಲ್ತಾನ್ ಮಹಮ್ಮದ್, ಹಿಂದಿನ ತಹಶೀಲ್ದಾರ್, ಗುಲ್ಬರ್ಗಾ ಇವರ ವಿರುದ್ಧ ಹೂಡಲು ಉದ್ದೇಶಿಸಿದ್ದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿದೆ. ಹಾಗೂ ಸದರಿ ಅಧಿಕಾರಿಯವರಿಗೆ ಇನ್ನು ಮುಂದೆ ಇಂತಹ ಪ್ರಕರಣ ಮರುಕಳಿಸದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1607

**ಎಸ್.ಬಿ. ಸಸಾಲಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

## ಕಂದಾಯ ಸಚಿವಾಲಯ

**ವಿಷಯ :** ಶ್ರೀ ಕೆ. ನಾಗರಾಜಭಟ್, ಹಿಂದಿನ ವಿಶೇಷ ತಹಶೀಲ್ದಾರ್ ಹಾಗೂ ಪ್ರಭಾರ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು-ಆದೇಶ.

**ಓದಲಾಗಿದೆ:**

(1) ಮಹಾ ವ್ಯವಸ್ಥಾಪಕರು, ಭೂಸ್ವಾಧೀನ, ಕೃಮೇಯೋ, ನವನಗರ, ಬಾಗಲಕೋಟೆ ಇವರ ಪತ್ರ ಸಂಖ್ಯೆ : ಮವ್ಯ/ಭೂಸ್ವಾ/ಸಿಬ್ಬಂದಿ/ವಹಿ/101/2006-07/5951 ದಿನಾಂಕ : 1-2-2007.

(2) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 08 ಎಡಿಇ 2007 ದಿನಾಂಕ : 6-5-2008.

(3) ಸರ್ಕಾರದ ಪತ್ರ ಸಂಖ್ಯೆ : ಕಂಇ 08 ಎಡಿಇ 2007 ದಿನಾಂಕ : 16-10-2008 ಮತ್ತು 2-7-2009.

(4) ಶ್ರೀ ಕೆ. ನಾಗರಾಜಭಟ್, ತಹಶೀಲ್ದಾರ್ ಇವರ ಲಿಖಿತ ಹೇಳಿಕೆ ದಿನಾಂಕ : 17-7-2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ : (1)ರಲ್ಲಿ ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಬಿದರಿ ಗ್ರಾಮದ ಕೆಲವೊಂದು ಜಮೀನುಗಳನ್ನು ಮುಳವಾಡ ಏತ ನೀರಾವರಿ ಕಾಮಗಾರಿಗಾಗಿ ಭೂಸ್ವಾಧೀನ ಪಡಿಸಿಕೊಂಡು ಕಲಂ 6(1)ರ ಅಧಿಸೂಚನೆಯನ್ನು ಅನುಮೋದನೆಗಾಗಿ ಸಲ್ಲಿಸಿದ್ದು, ನಂತರ ದಿನಾಂಕ : 7-5-2004 ರಂದು ಅನುಮೋದನೆಗೊಂಡಿದ್ದು, ತದನಂತರ ಸುಮಾರು ಒಂದು ವರ್ಷ ಗತಿಸಿದರೂ ಐತೀರ್ಪು ಸಲ್ಲಿಸಿದ ಕಾರಣ ದಿನಾಂಕ : 31-5-2005 ರಂದು ಕಾರಣ ಕೇಳುವ ನೋಟೀಸನ್ನು ಹೊರಡಿಸಲಾಗಿತ್ತು. ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು ರವರು ದಿನಾಂಕ : 18-8-2006 ರಂದು ಸುಮಾರು ಎರಡು ವರ್ಷಗಳ ನಂತರ ಈಗಾಗಲೇ ಅನುಮೋದಿಸಲಾದ ಕಲಂ 6(1)ರಲ್ಲಿಯ ರಿ.ಸ.ನಂ. 252 : 2 : 2 ಕ್ಷೇತ್ರ 0 ಎಕರೆ 24 ಗುಂಟೆ ಭೂಸ್ವಾಧೀನಗೊಳ್ಳುವುದಿಲ್ಲ, ಭೂಮಾಲೀಕರ ಅರ್ಜಿ ದಿನಾಂಕ : 16-8-2004 ಹಾಗೂ 29-9-2004 ಗಳಂತೆ ರಿ.ಸ.ನಂ. 252 : 2ಬಿ ಭೂಸ್ವಾಧೀನ ಆಗುತ್ತದೆ ಎಂದು ಕಲಂ 6(1)ರ ಕರ್ನಾಟಕ ರಾಜ್ಯ ಪತ್ರಕ್ಕೆ ತಿದ್ದುಪಡಿ ಹೊರಡಿಸಲು ವಿನಂತಿಸಿದ್ದಾರೆ.

ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು ರಿ.ಸ.ನಂ. 252 : 2ಬಿ ಭೂಸ್ವಧೀನಗೊಳ್ಳುತ್ತದೆ ಎಂದು ಸದರಿ ಜಮೀನಿನ ಭೂಮಾಲೀಕರು ದಿನಾಂಕ : 16-8-2004 ರಂದೇ ಅರ್ಜಿ ಸಲ್ಲಿಸಿದರೂ ಸುಮಾರು 2 ವರ್ಷಗಳ ನಂತರ ತಿದ್ದುಪಡಿಗಾಗಿ ಪ್ರಸ್ತಾವನೆ ಸಲ್ಲಿಸಿರುವರು. ರ.ಸ.ಸನಂ. 252 : 2ಬಿ ಕ್ಕೆ ಹೊಸದಾಗಿ ಕಲಂ 4(1), 6(1) ಹಾಗೂ ಪತ್ರಿಕಾ ಪ್ರಕಟಣೆ ಇತ್ಯಾದಿ ಉದ್ದೇಶಗಳಿಗೆ ಮುದ್ರಣ ವೆಚ್ಚದ ರೂಪದಲ್ಲಿ ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟಾಗಲು ಕಾರಣರಾಗಿದ್ದು, ಮೇಲ್ಕಂಡಂತೆ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿದ್ದು, ಈ ಬಗ್ಗೆ ಸದರಿಯವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ವಿವರಣೆಯು ಸಹ ಸಮಂಜಸವಾಗಿಲ್ಲದ ಕಾರಣ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರಡು ದೋಷಾರೋಪಣೆ ಪಟ್ಟಿ, ಅನುಬಂಧ 1 ರಿಂದ 4 ಹಾಗೂ ಪೂರಕ ದಾಖಲೆಗಳನ್ನು ಲಗತ್ತಿಸುತ್ತಾ, ಪ್ರಸ್ತಾವನೆಯನ್ನು ಮಹಾ ವ್ಯವಸ್ಥಾಪಕರು, ಭೂಸ್ವಾಧೀನ, ಕೃಮೇಯೋ, ನವನಗರ, ಬಾಗಲಕೋಟೆ ರವರು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (2)ರಲ್ಲಿ ಸರ್ಕಾರವು ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ರವರು ಜಮಖಂಡಿ ತಾಲ್ಲೂಕು ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಮಹಾ ವ್ಯವಸ್ಥಾಪಕರು, ಭೂಸ್ವಾಧೀನ, ಕೃಮೇಯೋ, ನವನಗರ, ಬಾಗಲಕೋಟೆ ರವರು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ. (ವ. ನಿ & ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (3)ರ ಸರ್ಕಾರದ ದಿನಾಂಕ : 16-10-2008 ಮತ್ತು 2-7-2009ರ ಪತ್ರಗಳಲ್ಲಿ, ಶ್ರೀ ಕೆ. ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ರವರು ಜಮಖಂಡಿ ತಾಲ್ಲೂಕು ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದು, ಲಿಖಿತ ಹೇಳಿಕೆಯು ಬಾರದಿದ್ದ ಕಾರಣ, ಒಂದು ವಾರದೊಳಗಾಗಿ ಪ್ರತಿವಾದದ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸುತ್ತಾ, ತಪ್ಪಿದಲ್ಲಿ 1957ರ ಕ.ನಾ.ಸೇ. (ವ.ನಿ&ಮೇ) ನಿಯಮಗಳ 11ನೇ ನಿಯಮದ ಮೇರೆಗೆ ಏಕಪಕ್ಷೀಯವಾಗಿ ಮುಂದಿನ ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿ ಪತ್ರ ಬರೆಯಲಾಗಿರುತ್ತದೆ.

ಶ್ರೀ ಕೆ.ನಾಗರಾಜಭಟ್ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ರವರು ಜಮಖಂಡಿ ತಾಲ್ಲೂಕು ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ರವರು ಮೇಲೆ ಓದಲಾದ ಕ್ರಮ ಸಂಖ್ಯೆ : (4) ದಿನಾಂಕ : 17-7-2009ರಂದು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪುನರ್ವಸತಿ ಅಧಿಕಾರಿಗಳು ವರ್ಗವಾದ ಪ್ರಯುಕ್ತ ಜಮಖಂಡಿ ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿಯ ವ್ಯಾಪ್ತಿಯಲ್ಲಿ 28 ಹಳ್ಳಿಗಳು ಮುಳುಗಡೆಯಾಗಿದ್ದು, ಸುಮಾರು 1200 ಎಕರೆ ಜಮೀನು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕಾಗಿದ್ದು, ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ಥರಿಗೆ ಪರಿಹಾರ, ಗಂಜಿಕೇಂದ್ರ ಹಾಗೂ ನಿರಾಶ್ರಿತರಿಗೆ ಮನೆ ಕಟ್ಟಿಸಿಕೊಡುವ ಕೆಲಸ ಒತ್ತಡ ಮತ್ತು ಇದಕ್ಕಾಗಿ ಪ್ರತಿಯೊಂದು ಗ್ರಾಮಕ್ಕೆ ಭೇಟಿ ನೀಡಿ, ಸ್ಥಳ ತನಿಖೆ ನಡೆಸಿ ಪರಿಹಾರ ಕಾರ್ಯ ಕೈಗೊಳ್ಳಬೇಕಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ, 4ಬಿ1 ಅಧಿಸೂಚನೆ 6ಬಿ1 ಸೂಚನೆ ಹೊರಡಿಸುವುದು, ಜೆ.ಎಂ.ಸಿ. ಮಾಡುವುದು ನೋಟೀಸು ನೀಡಿ, ಗ್ರಾಮಗಳಿಗೆ ತೆರಳಿ ಗ್ರಾಮಸಭೆ ನಡೆಸಿ ಪರಿಹಾರ ಚೆಕ್ ವಿತರಿಸುವ ಮಹತ್ತರವಾದ ಜವಾಬ್ದಾರಿ ಇದ್ದು, ಇದರೊಂದಿಗೆ ಜಮಖಂಡಿ, ಅಥಣಿ, ಬಾಗಲಕೋಟೆ ಹಾಗೂ ಬಿಜಾಪುರ ಸಿವಿಲ್ ನ್ಯಾಯಾಲಯಗಳಲ್ಲಿ ಸರ್ಕಾರದ ಪರ ವಾದಿಸಬೇಕಾಗಿದ್ದು, ಇಷ್ಟೆಲ್ಲಾ ಜವಾಬ್ದಾರಿಯು ತಮ್ಮ ಮೇಲಿದ್ದರಿಂದ, 28(ಎ) ಅರ್ಜಿಗಳು ಸ್ವೀಕೃತವಾದ ಸಮಯದಲ್ಲಿ 1200 ಎಕರೆ ಜಮೀನು ಭೂಸ್ವಾಧೀನ ಪಡೆದುಕೊಳ್ಳುವ ಪ್ರಕ್ರಿಯೆ ಭರದಿಂದ ಸಾಗುತ್ತಿದ್ದು, ಸದರಿ ಐತೀರ್ಪು ರಚಿಸುವ ಕಾರ್ಯ ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳದಿದ್ದಲ್ಲಿ ಅಸಿಂಧು ಆಗಿ ನಿಷ್ಫಲಗೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ಈ ಬಗ್ಗೆ ಮೇಲಾಧಿಕಾರಿಗಳಿಂದ ಹೆಚ್ಚಿನ ಒತ್ತಡವಿದ್ದ

ಕಾರಣ ಐತೀರ್ಪು ರಚಿಸುವ ಹಾಗೂ ಪರಿಹಾರ ಚೆಕ್ ವಿತರಿಸುವ ಕೆಲಸಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರಿಂದ 28(ಎ) ಅರ್ಜಿಗಳ ಕಟ್ಟಡದ ಮಾಲೀಕರಿಗೆ ಈಗಾಗಲೇ ಮೊದಲನೆ ಕಂತಿನ ಪರಿಹಾರ ಧನವನ್ನು ನೀಡಿದ್ದರಿಂದ 1200 ಎಕರೆ ಜಮೀನಿನ ಐತೀರ್ಪಿನ ಕಾರ್ಯ ಮುಗಿದ ನಂತರ 28(ಎ) ಪ್ರಕರಣ ವಿಲೇಗೊಳಿಸಲು ತೀರ್ಮಾನಿಸಲಾಯಿತು. 28(ಎ) ಅಡಿಯಲ್ಲಿ ಸಲ್ಲಿಸಿದ 18 ಅರ್ಜಿಗಳನ್ನು ಶೀಘ್ರವಾಗಿ ವಿಲೇ ಮಾಡುವ ಆತುರತೆ ಇದ್ದರೂ ಅರ್ಜಿದಾರರು ವಿಚಾರಣೆಗೆ ಆಸ್ಪದ ಹಾಗೂ ಕನಿಷ್ಠ ಕಾಲಾವಕಾಶ ನೀಡದೇ ವಿಶೇಷ ಭೂಸ್ವಾಧೀನಾಧಿಕಾರಿಗಳಿಂದ ಯಾವುದೇ ಆದೇಶ, ಹಿಂಬರಹ ಪಡೆಯದೇ 18(3)(ಬಿ) ಅಡಿಯಲ್ಲಿ ಅಥಣಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಅಫಿಡವಿಟ್ ಸಹ ಸಲ್ಲಿಸಿದ್ದು, ನ್ಯಾಯಾಲಯದ ಅಂತಿಮ ಆದೇಶ ಬರುವ ಪೂರ್ವದಲ್ಲಿ ಈ ಅರ್ಜಿಗಳನ್ನು ವಿಲೇಗೊಳಿಸಿದಲ್ಲಿ, ನ್ಯಾಯಾಲಯದ ಪ್ರಿಜುಡೀಸ್ ಆಗುತ್ತದೆ ಆದ ಪ್ರಯುಕ್ತ ಮುಂದಿನ ಪ್ರಕ್ರಿಯೆ ತಡೆಹಿಡಿಯಲಾಗಿತ್ತು. ಅಥಣಿ ಸಿವಿಲ್ ನ್ಯಾಯಾಲಯವು ದಿನಾಂಕ : 11-9-2006 ರಂದು ನೀಡಿದ ತೀರ್ಪು ಪ್ರಶ್ನಿಸಿ ದಿನಾಂಕ : 25-10-2006 ರಂದು ಸರ್ಕಾರದ ವಿಶೇಷ ಅಧಿಕಾರಿಗಳು, ಕಾನೂನು ಕೋಶ, ಬಾಗಲಕೋಟೆ ಇವರು ಸಿ.ಆರ್.ಪಿ. ನಂ. 6/2007 ರಿಂದ 23/2007 ರವರೆಗೆ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ದಿನಾಂಕ : 12-3-2007 ರಂದು ಆದೇಶ ನೀಡಿರುತ್ತದೆ. ಜಮಖಂಡಿಯಿಂದ ತಮಗೆ ವರ್ಗವಾದ ಕಾರಣ ದಿನಾಂಕ : 13-9-2006 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿದ್ದು, ಕಾರಣ ಉಚ್ಚ ನ್ಯಾಯಾಲಯದ ತೀರ್ಪಿನ ವಿಚಾರ ತಮ್ಮ ಗಮನಕ್ಕೆ ಬಂದಿರುವುದಿಲ್ಲ. ಅತಿ ಹೆಚ್ಚಿನ ಕೆಲಸದ ಒತ್ತಡ ಜವಾಬ್ದಾರಿ ಇದ್ದು, ಸಮಯದ ಅಭಾವದಿಂದ 28(ಎ) ಪ್ರಕರಣ ವಿಲೇಗೊಳಿಸುವಲ್ಲಿ ವಿಳಂಬವಾಗಿದ್ದು, ಯಾವುದೇ ದುರುದ್ದೇಶದಿಂದ ಕೂಡಿದ್ದು ಇಲ್ಲ ಎಂದು ತಿಳಿಸಿ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ತಮ್ಮನ್ನು ಈ ಆಪಾದನೆಯಿಂದ ಮುಕ್ತಗೊಳಿಸಿ ದೋಷಮುಕ್ತರನ್ನಾಗಿ ಮಾಡಲು ಮತ್ತು ತಮಗೆ ವಿಧಿಸಿರುವ ದಂಡನೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

. ಶ್ರೀ ಕೆ. ನಾಗರಾಜಭಟ್ ಹಿಂದಿನ ವಿಶೇಷ ತಹಶೀಲ್ದಾರ್ ಹಾಗೂ ಪ್ರಭಾರ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರು ತಮ್ಮ ವಿರುದ್ಧ ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಡಿ.ವಿ. ಸೇಟ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ.. ಜಮಖಂಡಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 8 ಎಡಿಇ 2007, ಬೆಂಗಳೂರು, ದಿನಾಂಕ: 08-06-2010.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಕೆ. ನಾಗರಾಜಭಟ್ ಹಿಂದಿನ ವಿಶೇಷ ತಹಶೀಲ್ದಾರ್ ಹಾಗೂ ಪ್ರಭಾರ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಜಮಖಂಡಿ ಪ್ರಸ್ತುತ ತಹಶೀಲ್ದಾರ್, ಜಗಳೂರು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಡಿ.ವಿ. ಸೇಟ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ಜಮಖಂಡಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಕಛೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ ಮಾಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 22 ಸೇಇವಿ 2007 ದಿನಾಂಕ : 11-4-2008 ರನ್ವಯ ರೂ. 8000/- (ಎಂಟು ಸಾವಿರ ರೂ.ಗಳು ಮಾತ್ರ) ಗಳ ಸಂಚಿತ ಸಂಭಾವನೆಯನ್ನು ಹಾಗೂ ರೂ. 1500/- (ಒಂದು ಸಾವಿರದ ಐನೂರು ರೂ.ಗಳು ಮಾತ್ರ) ಗಳ ವಾಹನ ಭತ್ಯೆ (ಕನ್ವೇಯನ್ಸ್ ಅಲೋಯನ್ಸ್) ಅನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿವಿಧಾನವನ್ನು ಅನುಸರಿಸಿ, ಜರುಗಿಸಿ, ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1608

**ಎಸ್.ಬಿ. ಸಸಾಲಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಇಂಧನ ಸಚಿವಾಲಯ

**ವಿಷಯ** : ಮೆ|| ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಡಿಇ 54 ಎನ್‌ಸಿಇ 1999 ದಿನಾಂಕ: 01.04.2000.
2. ಸರ್ಕಾರಿ ಆದೇಶ ಸಂಖ್ಯೆ: ಡಿಇ 138 ಎನ್‌ಸಿಇ 2001 ದಿನಾಂಕ:13.09.2001.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.4.2010
4. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 165 ಎನ್‌ಸಿಇ 2010 ದಿನಾಂಕ: 26.04.2010.
5. ಮೆಃಃ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರ ಪತ್ರ ಸಂಖ್ಯೆ: ಬಿಪಿಸಿಎಲ್/ಎನರ್ಜಿ/278/2010 ದಿನಾಂಕ: 04.05.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆಃಃ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಕೊಪ್ಪಳ ಜಿಲ್ಲೆಯ ಸಾನಾಪುರ ಗ್ರಾಮದ ಆನೆಗುಂದಿಯ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ 3.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಯೋಜನೆಯ ಸಾಮರ್ಥ್ಯವನ್ನು 3.5 ಮೆಗಾ ವ್ಯಾಟ್‌ನಿಂದ 7.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆಃಃ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆಃಃ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ನೋಟೀಸನ್ನು ಕಳುಹಿಸಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ ಅಭಿವೃದ್ಧಿದಾರರು ಕಾರಣ ಕೇಳುವ ನೋಟೀಸಿಗೆ ಸಮಜಾಯಿಷಿಯನ್ನು ನೀಡಿರುತ್ತಾರೆ. ಅಭಿವೃದ್ಧಿದಾರರು ನೀಡಿರುವ ಉತ್ತರದಲ್ಲಿ ಆಗಸ್ಟ್ 2002 ರಲ್ಲಿ ಹಂಪಿ ಪ್ರಾಧಿಕಾರದವರು ಯೋಜನೆ ಸ್ಥಾಪನೆಗೆ ತಡೆಯಾಜ್ಞೆಯನ್ನು ನೀಡಿದ್ದು ಈ ತಡೆಯಾಜ್ಞೆ ವಿರುದ್ಧ ಘನ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 49500/2003 ರಲ್ಲಿ ದಾವೆ ಹೂಡಿದ್ದು, ಈ ರಿಟ್ ಅರ್ಜಿಯು ಈ ಕೆಳಗಿನ ಆದೇಶದೊಂದಿಗೆ ವಜಾಗೊಂಡಿರುತ್ತದೆ:–

> " If the petitioner is willing to approach the State of Karnataka for seeking refund of the amount so spent, it is always open for the petitioner to approach the State of Karnataka."

ಈ ಬಗ್ಗೆ ಖರ್ಚಾಗಿರುವ ವೆಚ್ಚವನ್ನು ಹಿಂದಿರುಗಿಸುವಂತೆ ಮೆಃಃ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರು ದಿನಾಂಕ: 21.11.2008 ರಂದು ಸರ್ಕಾರವನ್ನು ಕೋರಿದ್ದರು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ: 23.06.2009ರ ಆದೇಶ ಸಂಖ್ಯೆ: ಇಎನ್ 444 ಎನ್ ಸಿ ಇ 2008ರಲ್ಲಿ ಮನವಿಯನ್ನು ತಿರಸ್ಕರಿಸಲಾಗಿದೆ. ಕಂಪನಿಯು ತಮ್ಮ ಮನವಿಯಲ್ಲಿ ಈ ಯೋಜನೆಯ ಬದಲಿಗೆ ಬೇರೆ ಯಾವುದಾದರೂ ಯೋಜನೆಯನ್ನು ಹಂಚಿಕೆ ಮಾಡಬೇಕೆಂದು ಅಥವಾ ಇದೇ ಯೋಜನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಏರ್ಪಾಡು ಮಾಡಬೇಕೆಂದು ಕೋರಿರುತ್ತಾರೆ.

ಯೋಜನೆಯು ಹಂಚಿಕೆಗಾಗಿ 10 ವರ್ಷಗಳು ಕಳೆದಿರುತ್ತದೆ. ಈ ಯೋಜನೆಗೆ ಹಂಪಿ ಪ್ರಾಧಿಕಾರದಿಂದ ತಡೆಯಿರುವ ಹಿನ್ನೆಲೆಯಲ್ಲಿ ಹಾಗೂ ಹಂಪಿಯು ಕರ್ನಾಟಕದ ಪ್ರವಾಸಿ ತಾಣದಲ್ಲಿ ಒಂದಾಗಿರುವುದರಿಂದ ಈ ಯೋಜನೆಯನ್ನು ಮುಂದುವರೆಸುವುದು ಅಷ್ಟೊಂದು ಸೂಕ್ತವಾಗಿರುವುದಿಲ್ಲವೆಂದು ತೀರ್ಮಾನಿಸಿ ಹಂಚಿಕೆ ಆದೇಶವನ್ನು ರದ್ದುಪಡಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ :–

ಸರ್ಕಾರದ ಆದೇಶ ಸಂಖ್ಯೆ: ಇಎನ್ 165 ಎನ್‌ಸಿಇ 2010, ಬೆಂಗಳೂರು, ದಿನಾಂಕ: 19-06-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 54 ಎನ್‌ಸಿಇ 1999 ದಿನಾಂಕ: 01.04.2000 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಡಿಇ 138 ಎನ್‌ಸಿಇ 2001 ದಿನಾಂಕ: 13.09.2001ರಲ್ಲಿ ಮೆ॥ಖ ಬೊರೂಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಕೊಪ್ಪಳ ಜಿಲ್ಲೆಯ ಸಾಸಾಪುರ ಗ್ರಾಮದ ಆನೆಗೊಂದಿಯ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಸ್.ಜಿ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

PR. No 1616

**ಇಂಧನ ಸಚಿವಾಲಯ**

**ವಿಷಯ** : ಮೆ॥ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 2.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 260 ಎನ್‌ಸಿಇ 2003 ದಿನಾಂಕ:16.02.2004.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.4.2010
4. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 184 ಎನ್‌ಸಿಇ 2010 ದಿನಾಂಕ: 26.04.2010.
5. ಮೆ॥ಖ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರ ಪತ್ರ ದಿನಾಂಕ: 03.05.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶಗಳಲ್ಲಿ ಮೆ॥ಖ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮರ್ಕಳ ಹೊಳೆಗೆ ಅಡ್ಡಲಾಗಿ (ಸೀತಾನದಿ ಮೇಲ್ತೊರೆ) 2.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ಖ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ॥ಖ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ನೋಟೀಸನ್ನು ಕಳುಹಿಸಿದ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಕಾರಣ ಕೇಳುವ ನೋಟೀಸಿಗೆ ಅಭಿವೃದ್ಧಿದಾರರು ನೀಡಿರುವ ಉತ್ತರದಲ್ಲಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಡಿ.ಪಿ.ಆರ್. ತಯಾರಿಸಿದ್ದು ಅರಣ್ಯ ಇಲಾಖೆಯನ್ನು ಹೊರತುಪಡಿಸಿ ಬೇರೆ ಇಲಾಖೆಗಳಿಂದ Preliminary Permission ಪಡೆಯಲಾಗಿದೆ ಎಂದು ತಿಳಿಸಿ ಯೋಜನೆಯ ಪ್ರದೇಶದ ಭೂ- ಸ್ವಾಧೀನ ಬಗ್ಗೆ ಸರ್ವೆಮಾಡುತ್ತಿರುವ ಸಮಯದಲ್ಲಿ ನಕ್ಸಲೈಟ್‌ಗಳು ಯೋಜನೆಯನ್ನು ಮುಂದುವರೆಸಬಾರದೆಂದು ಬೆದರಿಕೆಯನ್ನು ಒಡ್ಡಿರುವುದರಿಂದ ಸರ್ವೆ ಕೆಲಸವು ಸಂಪೂರ್ಣವಾಗಿರುವುದಿಲ್ಲವೆಂದು, ನಕ್ಸಲೈಟ್‌ಗಳ ತೊಂದರೆಯು ನಿವಾರಣೆಯಾದಲ್ಲಿ ಪೊಲೀಸ್ ರಕ್ಷಣೆಯೊಂದಿಗೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿ ಮುಂದಿನ 1 ವರ್ಷಕ್ಕೆ ಕಾಲಾವಕಾಶವನ್ನು ವಿಸ್ತರಿಸಲು ಕೋರಿದ್ದಾರೆ.

ಯೋಜನೆಯ ಪ್ರದೇಶದಲ್ಲಿ ನಕ್ಸಲೈಟ್‌ಗಳಿಂದ ತೊಂದರೆಯಿರುವುದರಿಂದ ಹಾಗೂ ಯೋಜನೆಯು ಹಂಚಿಕೆಯಾಗಿ 6 ವರ್ಷಗಳು ಕಳೆದರೂ ಮೆ॥ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ಯೋಜನೆಯ ಅನುಷ್ಠಾನದ

ನಿಟ್ಟಿನಲ್ಲಿ ಯಾವುದೇ ಗಣನೀಯವಾದ ಪ್ರಗತಿಯನ್ನು ಸಾಧಿಸಿರುವುದು ಕಂಡು ಬಂದಿಲ್ಲದಿರುವುದರಿಂದ ಈಗಾಗಲೇ ನೀಡಲಾಗಿದ್ದ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 184 ಎನ್‌ಸಿಇ 2010, ಬೆಂಗಳೂರು, ದಿನಾಂಕ: 19-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 260- ಎನ್‌ಸಿಇ 2003 ದಿನಾಂಕ: 16.02.2004ರಲ್ಲಿ ಮೆ॥ ರಿವರ್‌ವ್ಯೂ ಕೋ-ಆಪರೇಟೀವ್ ರೆಸಾರ್ಟ್ಸ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮರ್ಕಳ ಹೊಳೆಗೆ (ಸೀತಾ ನದಿಯ ಮೇಲ್ತೊರೆ) ಅಡ್ಡಲಾಗಿ ಹಂಚಿಕೆಯಾಗಿದ್ದ 2.5 ಮೆಗಾವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಸ್.ಜೆ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

PR. No 1617

**ENERGY SECRETARIAT**

**CORRIGENDUM**

No.En 67 PSR 2009 Bangalore, Dated: 17-06-2010

The date of Addendum No: EN 67 PSR 2009 appeared as "Dated: 26-04-2010" shall be read as "Dated: 31.03.2010".

P.R.NO.1618

By order and in the name of the Governor of Karnataka
**S.J. SAMPATH KUMAR**
Under Secretary to Government,
Energy Department.

**ಇಂಧನ ಸಚಿವಾಲಯ**

**ವಿಷಯ :** ಮೆ॥ ಅಮೃತ್ ಅಪೇರಲ್ಸ್ ಇವರಿಗೆ ಹಂಚಿಕೆ ಮಾಡಲಾಗಿರುವ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರಿ ಆದೇಶ ಸಂಖ್ಯೆ: ಇಂಇ 417 ಎನ್‌ಸಿಇ 2004 ದಿನಾಂಕ: 5.01.2005.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.4.2010
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 191 ಎನ್‌ಸಿಇ 2010 ದಿನಾಂಕ: 26.04.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ॥ ಅಮೃತ್ ಅಪೇರಲ್ಸ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಹಿರಿಯಡ್ಕ ಗ್ರಾಮದ ಬಳಿ ಬಾಜೆ ಅಣೆಕಟ್ಟಿನ ಸ್ವರ್ಣಾ ನದಿಯ ಬಲದಂಡೆಯಲ್ಲಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ ಅಮೃತ್ ಅಪೇರಲ್ಸ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ|| ಅಮೃತ್ ಅಪೇರಲ್ಸ್ ಇವರಿಗೆ ನೋಟೀಸನ್ನು ಕಳುಹಿಸಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು. ಆದರೆ ಸದರಿ ಕಾರಣ ಕೇಳುವ ನೋಟೀಸು No such firm in the address. Hence returned to the sender" ಎಂದು ಹಿಂದಕ್ಕೆ ಬಂದಿರುತ್ತದೆ. ಕ್ರೆಡಲ್ ಸಂಸ್ಥೆಯಲ್ಲಿಯೂ ಸಹ ಪರಿಶೀಲಿಸಲಾಯಿತು. ವಿಳಾಸ ಬದಲಾವಣೆ ಬಗ್ಗೆ ಯವುದೇ ಮಾಹಿತಿಯನ್ನು ಅಭಿವೃದ್ಧಿದಾರರು ನೀಡಿಲ್ಲವೆಂಬುದನ್ನು ಕ್ರೆಡಲ್ ಸಂಸ್ಥೆಯಿಂದ ದೃಡೀಕರಿಸಿಕೊಳ್ಳಲಾಯಿತು. ಯೋಜನೆಯು ಹಂಚಿಕೆಯಾಗಿ 5 ವರ್ಷ ಕಳೆದರೂ ಮೆ|| ಅಮೃತ್ ಅಪೇರಲ್ಸ್ ಇವರು ಯೋಜನೆಯನ್ನು ಅನುಷ್ಠಾನ ಮಾಡಿರುವುದಿಲ್ಲ. ಆದ್ದರಿಂದ ಈಗಾಗಲೇ ನೀಡಲಾಗಿದ್ದ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ :–

**ಸರ್ಕಾರದ ಆದೇಶ ಸಂಖ್ಯೆ: ಇಎನ್ 191 ಎನ್‌ಸಿಇ 2010, ಬೆಂಗಳೂರು, ದಿನಾಂಕ: 21–06–2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 417 ಎನ್‌ಸಿಇ 2004 ದಿನಾಂಕ: 5.01.2005ರಲ್ಲಿ ಮೆ|| ಅಮೃತ್ ಅಪೇರಲ್ಸ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಹಿರಿಯಡ್ಕ ಗ್ರಾಮದ ಬಳಿ ಬಾಜೆ ಅಣೆಕಟ್ಟಿನ ಸ್ವರ್ಣಾ ನದಿಯ ಬಲದಂಡೆಯಲ್ಲಿ ಹಂಚಿಕೆಯಾಗಿದ್ದ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

PR. No 1619

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಎಸ್.ಜಿ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

**ಇಂಧನ ಸಚಿವಾಲಯ**

**ವಿಷಯ** : ಮೆ|| ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 321 ಎನ್‌ಸಿಇ 2002 ದಿನಾಂಕ: 27.01.2003.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.4.2010
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 154 ಎನ್‌ಸಿಇ 2010 ದಿನಾಂಕ: 26.04.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ|| ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ 6. ಕಿ.ಮೀ.ನಲ್ಲಿರುವ ಧಾಡೆ ಸುಗೂರು ಗ್ರಾಮದ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ 2.00 ಮೆಗಾ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ|| ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ|| ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ನೋಟೀಸನ್ನು ಕಳುಹಿಸಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು. ಆದರೆ ಸದರಿ ಕಾರಣ ಕೇಳುವ ನೋಟೀಸು "Refused Returned to sender" ಎಂದು ಹಿಂದಕ್ಕೆ ಬಂದಿರುತ್ತದೆ.

ಯೋಜನೆಯು ಹಂಚಿಕೆಯಾಗಿ 7 ವರ್ಷ ಕಳೆದರೂ ಯೋಜನೆ ಅನುಷ್ಠಾನವನ್ನು ಮೆ॥ ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರು ಮಾಡಿರುವುದಿಲ್ಲ. ಆದ್ದರಿಂದ ಈಗಾಗಲೇ ನೀಡಲಾಗಿದ್ದ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 154 ಎನ್‌ಸಿಇ 2010, ಬೆಂಗಳೂರು, ದಿನಾಂಕ: 21-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 321 ಎನ್‌ಸಿಇ 2002 ದಿನಾಂಕ: 27.01.2003ರಲ್ಲಿ ಮೆ॥ ಎಸ್.ಎಲ್.ಎಸ್. ಪವರ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ 6 ಕಿ.ಮೀ.ನಲ್ಲಿರುವ ಧಾಡೆ ಸುಗೂರು ಗ್ರಾಮದ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ಹಂಚಿಕೆಯಾಗಿದ್ದ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

PR. No 1620

**ಎಸ್.ಜೆ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

## ಇಂಧನ ಸಚಿವಾಲಯ

**ವಿಷಯ** : ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರಿಗೆ ಹಂಚಿಕೆ ಮಾಡಲಾಗಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 375 ಎನ್‌ಸಿಇ 2004 ದಿನಾಂಕ: 21.12.2004.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.4.2010
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 187 ಎನ್‌ಸಿಇ 2010 ದಿನಾಂಕ: 26.04.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಕಿಗ್ಗ ಹೋಬಳಿಯ ಯಡದಹಳ್ಳಿ ಬಳಿ ಮಾಗಿಬೈಲು ಫಾಲ್ಸ್‌ಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರಿಗೆ ನೋಟೀಸನ್ನು ಕಳುಹಿಸಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು. ಆದರೆ ಸದರಿ ಕಾರಣ ಕೇಳುವ ನೋಟೀಸು "No such firm is present in this address not Know hence R/S" ಎಂದು ಹಿಂದಕ್ಕೆ ಬಂದಿರುತ್ತದೆ.

ಯೋಜನೆಯು ಹಂಚಿಕೆಯಾಗಿ 6 ವರ್ಷ ಕಳೆದರೂ ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರು ಯೋಜನೆ ಅನುಷ್ಠಾನ ಮಾಡಿರುವುದಿಲ್ಲ. ಆದ್ದರಿಂದ ಈಗಾಗಲೇ ನೀಡಲಾಗಿದ್ದ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 187 ಎನ್‌ಸಿಇ 2010, ಬೆಂಗಳೂರು, ದಿನಾಂಕ: 21-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 375 ಎನ್‌ಸಿಇ 2004 ದಿನಾಂಕ: 21.12.2004ರಲ್ಲಿ ಮೆ॥ ಮಾಗಿಬೈಲು ಎಂಟರ್‌ಪ್ರೈಸಸ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ

ಕಿಗ್ಗ ಹೋಬಳಿಯ ಯಡದಹಳ್ಳಿ ಬಳಿ ಮಾಗಿಬೈಲು ಫಾಲ್ಸ್‌ಗೆ ಅಡ್ಡಲಾಗಿ ಹಂಚಿಕೆಯಾಗಿದ್ದ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

PR. No 1621

**ಎಸ್.ಜೆ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

## ಇಂಧನ ಸಚಿವಾಲಯ

**ವಿಷಯ :** ಮೆ|| ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 1.0 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ :**
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 88 ಎನ್‌ಸಿಇ 2003 ದಿನಾಂಕ: 12.08.2003.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.04.2010
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 153 ಎನ್‌ಸಿಇ 2010 ದಿನಾಂಕ: 26.04.2010.
4. ಮೆ|| ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರ ಪತ್ರ ದಿನಾಂಕ: 30.04.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆಖಖ ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರಂ ಎಂಬಲ್ಲಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆಖಖ ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆಖಖ ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ನೋಟೀಸನ್ನು ನೀಡಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಅಭಿವೃದ್ಧಿದಾರರು ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡಿರುತ್ತಾರೆ. ಅಭಿವೃದ್ಧಿದಾರರು ನೀಡಿರುವ ಉತ್ತರದಲ್ಲಿ ಡಿ.ಪಿ.ಆರ್. ಪೂರ್ಣಗೊಳಿಸಿದ್ದು, ಕೆ.ಇ.ಬಿ. ಇವರಿಂದ ಜಮೀನು ಗುತ್ತಿಗೆ ನೀಡಿರುವುದಿಲ್ಲ. ಇದರಿಂದಾಗಿ ನಿಗಧಿತ ಅವಧಿಯೊಳಗೆ ಈಟುಚಿಟಟಿಛಿಟ ಅಟಥಾಜಿಜ ಮಾಡಲಾಗಿರುವುದಿಲ್ಲ ಎಂದು ತಿಳಿಸಿ ಕಾಲಾವಕಾಶ ವಿಸ್ತರಣೆಗಾಗಿ ಈಗಾಗಲೇ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ. ಯಾವುದೇ ಪೂರಕ ದಾಖಲಾತಿಗಳನ್ನು ನೀಡಿರುವುದಿಲ್ಲ. ಯೋಜನೆಯ ಹಂಚಿಕೆಯು 2003ರಲ್ಲಿಯೇ ಆಗಿದ್ದು 7 ವರ್ಷಗಳಾದರೂ ಯೋಜನೆಯ ಅನುಷ್ಠಾದ ನಿಟ್ಟಿನಲ್ಲಿ ಯಾವುದೇ ಗಣನೀಯವಾದ ಪ್ರಗತಿಯನ್ನು ಸಾಧಿಸಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಈಗಾಗಲೇ ನೀಡಲಾಗಿದ್ದ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 153 ಎನ್‌ಸಿಇ 2010, ಬೆಂಗಳೂರು, ದಿನಾಂಕ: 18-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 88 ಎನ್‌ಸಿಇ 2003 ದಿನಾಂಕ: 12.08.2003ರಲ್ಲಿ ಮೆಖಖ ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಶಿವನಸಮುದ್ರಂ ಎಂಬಲ್ಲಿ ಹಂಚಿಕೆಯಾಗಿದ್ದ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

PR. No 1622

**ಎಸ್.ಜೆ. ಸಂಪತ್ ಕುಮಾರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

## ಇಂಧನ ಸಚಿವಾಲಯ

**ವಿಷಯ** : ಮೆ|| ತೇಜಸ್ ಎನರ್ಜಿ ಕಂಪನಿ ಇವರಿಗೆ ಹಂಚಿಕೆ ಮಾಡಲಾಗಿರುವ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

**ಓದಲಾಗಿದೆ** :
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 294 ಎನ್‌ಸಿಇ 2002 ದಿನಾಂಕ: 08.03.2004.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 121 ಎನ್‌ಸಿಇ 2007 ದಿನಾಂಕ: 30.03.2007.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ: 17.04.2010
4. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 139 ಎನ್‌ಸಿಇ 2010 ದಿನಾಂಕ: 26.04.2010.
5. ಮೆ|| ತೇಜಸ್ ಎನರ್ಜಿ ಕಂಪನಿ ಇವರ ಪತ್ರಗಳ ದಿನಾಂಕ: 15.05.2010.ಮತ್ತು 10.05.2010.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ॥ ತೇಜಸ್ ಎನರ್ಜಿ ಕಂಪನಿ ಇವರಿಗೆ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕೊಯನಾಡು ಗ್ರಾಮದ ಸಂಪಾಜೆ ಹಳ್ಳಕ್ಕೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಯೋಜನೆಯ ಸಾಮರ್ಥ್ಯವನ್ನು 2.00 ಮೆಗಾ ವ್ಯಾಟ್‌ನಿಂದ 8.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ ತೇಜಸ್ ಎನರ್ಜಿ ಕಂಪನಿ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ॥ ತೇಜಸ್ ಎನರ್ಜಿ ಕಂಪನಿ ಇವರಿಗೆ ನೋಟೀಸನ್ನು ನೀಡಿ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ ಅಭಿವೃದ್ಧಿದಾರರು ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡಿರುತ್ತಾರೆ. ನೀಡಿರುವ ಉತ್ತರ ಪರಿಶೀಲಿಸಲಾಗಿದೆ. ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಮೀನುಗಾರಿಕೆ ಇಲಾಖೆಯಿಂದ, ಕೆ.ಎಸ್.ಪಿ.ಸಿ.ಬಿ. ಯಿಂದ ನಿರಾಕ್ಷೇಪಣೆಯನ್ನು ಪಡೆದು ನೀರಾವರಿ ಮತ್ತು ಅರಣ್ಯ ಇಲಾಖೆಗೆ ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ್ದು ಹೊರೆತು ಪಡಸಿ ಬೇರೆ ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡಿಲ್ಲ. ಯೋಜನೆಯು ಹಂಚಿಕೆಯಾಗಿ 6 ವರ್ಷಗಳು ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಗಣನೀಯವಾದ ಪ್ರಗತಿಯನ್ನು ಸಾಧಿಸಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಈಗಾಗಲೇ ಹಂಚಿಕೆ ಆದೇಶವನ್ನು ರದ್ದುಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರದ ಆದೇಶ ಸಂಖ್ಯೆ: ಇಎನ್ 139 ಎನ್‌ಸಿಇ 2010, ಬೆಂಗಳೂರು, ದಿನಾಂಕ: 18-06-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಂಇ 294 ಎನ್‌ಸಿಇ 2002 ದಿನಾಂಕ: 08.03.2004 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಎನ್ 121 ಎನ್‌ಸಿಇ 2007 ದಿನಾಂಕ: 30.03.2007 ರಲ್ಲಿ ಮೆ|| ತೇಜಸ್ ಎನರ್ಜಿ ಕಂಪನಿ ಇವರಿಗೆ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕೊಯನಾಡು ಗ್ರಾಮದ ಸಂಪಾಜೆ ಹಳ್ಳಕ್ಕೆ ಅಡ್ಡಲಾಗಿ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

(ಅ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು. (ಈ ಉಪ ಕಂಡಿಕೆಗೆ ಸಂಬಂಧಿಸಿದ ವಿವರಣೆಗಳಿಗೆ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು 2 ಮತ್ತು 9 ರನ್ವಯ ಅರ್ಥೈಸಿಕೊಳ್ಳುವುದು)

(ಇ) ಅಭ್ಯರ್ಥಿಗಳು ನ್ಯಾಷನಲ್ ಕ್ಯಾಡೆಟ್ ಕೋರ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷಕನಾಗಿ ಅವನು ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಈ) ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡ ಗ್ರಾಮ ಸಮೂಹ ಪರಿಶೀಲಕನಾಗಿ ಈಗ ಕೆಲಸ ಮಾಡುತ್ತಿದ್ದರೆ ಅಥವಾ ಹಿಂದೆ ಇದ್ದ ಪಕ್ಷದಲ್ಲಿ ಅವನು / ಅವಳು ಅಂತಹ ಗ್ರಾಮ ಪರಿಶೀಲಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

**(ಉ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು**

(ಊ) ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಆವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 5 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಋ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

(ೠ) ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು.

ಉಪ ಕಂಡಿಕೆ 6.2.(ೠ) ರ ಮೇರೆಗೆ ವಯೋಮಿತಿಯ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ಜೀತ ಕಾರ್ಮಿಕ ನಾಗಿದ್ದು, ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ಪಡೆದಿಟ್ಟುಕೊಂಡಿರಬೇಕು.

7. **ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು:–**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು:–

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ ' ಇ ' ರಲ್ಲಿ

ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ ' ಎಫ್ ' ರಲ್ಲಿ

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು) (ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು).

**8. ಗ್ರಾಮೀಣ ಅಭ್ಯರ್ಥಿ**

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೇನೆನಿ 2001 ದಿನಾಂಕ:13-02-2001 ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಇತರೆ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ.)

**9. ಕನ್ನಡ ಮಾಧ್ಯಮ ಅಭ್ಯರ್ಥಿ**

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೇನೆನಿ 2001 ದಿನಾಂಕ 24-10-2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರು ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ)

**10. ಅಂಗವಿಕಲ ಅಭ್ಯರ್ಥಿ**

ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್‌ಆರ್‌ಆರ್ 99 ದಿನಾಂಕ 29-11-2002ರ ಅನುಸೂಚಿಯಡಿ ಸೇರ್ಪಡಿಸಲಾಗಿರುವ ಇಲಾಖೆಗಳು) ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ 19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸಲು ಬರುವುದಿಲ್ಲ. (ಈ ಪ್ರಮಾಣ ಪತ್ರದ ನಮೂನೆಯನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ) (ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು)

**11. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ**

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 23 ಸೇನೆನಿ 99 ದಿನಾಂಕ:23-11-2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು (ಗ್ರೂಪ್ 'ಸಿ' ಹುದ್ದೆಗಳಿಗೆ ಮಾತ್ರ) ಕ್ಲೇಮು ಮಾಡುವ

ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯೋಗವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲಿ ತೋರಿಸಲಾಗಿದೆ.)

12. ಕಡ್ಡಾಯ ಕನ್ನಡ ಭಾಷಾ / ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಗಳೂರು / ಮೈಸೂರು / ಬೆಳಗಾಂ / ಗುಲ್ಬರ್ಗಾ / ಶಿವಮೊಗ್ಗ ವಿಭಾಗೀಯ ಕೇಂದ್ರದಲ್ಲಿ ಹಾಗೂ ಆಯೋಗವು ನಿಗದಿಪಡಿಸಿರುವ ಇತರೆ ಯಾವುದೇ ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಅವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವ ವಿಭಾಗೀಯ ಕೇಂದ್ರವನ್ನು ನಮೂದಿಸತಕ್ಕದ್ದು. ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ. ಸಂದರ್ಶನ/ಪರೀಕ್ಷೆಗಳ ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದು ಹಾಗೂ ಆಯೋಗದ ವೆಬ್ ಸೈಟ್ "http://kpsc.kar.nic in/ notification" ನಲ್ಲಿಯೂ ಬಿತ್ತರಿಸಲಾಗುವುದು.

**13. ಆಯೋಗದೊಡನೆ ಪತ್ರ ವ್ಯವಹಾರ:**

ಆಯೋಗವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಅಭ್ಯರ್ಥಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರ / ಸಂದರ್ಶನಕ್ಕೆ ಸೂಚನೆ ಪತ್ರ ಬಾರದಿದ್ದಲ್ಲಿ, ಅಭ್ಯರ್ಥಿಯು ಆಯೋಗದ ಕಛೇರಿಯನ್ನು ಖುದ್ದಾಗಿ ಸಂಪರ್ಕಿಸತಕ್ಕದ್ದು. ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳು ಪ್ರವೇಶ ಪತ್ರ ಬಾರದಿದ್ದಲ್ಲಿ ಆಯೋಗದ ಅಂತರ್ಜಾಲದಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಸಂದರ್ಶನಕ್ಕೆ ಅನುಮತಿಸಲಾದ ಅಭ್ಯರ್ಥಿಯಾಗಿದ್ದರೆ ಸಂದರ್ಶನ ಪತ್ರದ ನಕಲನ್ನು ನೀಡಲಾಗುವುದು.

ವಿಳಾಸ ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು. ಅಭ್ಯರ್ಥಿಗಳು ಆಯೋಗದೊಡನೆ ಸಂಪರ್ಕಿಸಲೇಬೇಕಾದ ಸಂದರ್ಭದಲ್ಲಿ ತಮ್ಮ ಮನವಿಯಲ್ಲಿ ಕೆಳಕಂಡ ಮಾಹಿತಿಗಳು ಒಳಗೊಂಡಿರಬೇಕು:–

(i) ಹುದ್ದೆಯ / ವಿಷಯದ ಹೆಸರು

(ii) ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)

(iii) ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ

**14. ಪ್ರಾಮುಖ್ಯವಾದ ಸೂಚನೆಗಳು:–**

ಅಭ್ಯರ್ಥಿಯ ಇತ್ತೀಚಿನ ಪಾರ್ಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್ / ಮಾರ್ಕರ್ ಪೆನ್‌ರಲ್ಲಿ ಸಹಿಯನ್ನು ಮಾಡಿ ಇದನ್ನು ಸ್ಕ್ಯಾನ್ ಮಾಡಿ ಅರ್ಜಿಗೆ **UPLOAD** ಮಾಡಬೇಕು. **ಕೋರಿರುವ ಮೀಸಲಾತಿ ಪ್ರಮಾಣ ಪತ್ರಗಳು ಮತ್ತು ಇತರೇ ಪ್ರಮಾಣ ಪತ್ರಗಳನ್ನು ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಅದೇ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕು. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು /ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.**

**ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.**

1) ಹುದ್ದೆಗೆ ನಿಗದಿಪಡಿಸಿದ ಶುಲ್ಕ (ಅರ್ಜಿಯನ್ನು ಭರ್ತಿ ಮಾಡಿದ ನಂತರ ಪಾವತಿಸತಕ್ಕದ್ದು) ಪಾವತಿ ರಸೀತಿ.

2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ /ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗು ಘಟಿಕೋತ್ಸವದ ಪ್ರಮಾಣ ಪತ್ರಗಳು /ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ಪ್ರಮಾಣ ಪತ್ರ.

3) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.

4) ಹುದ್ದೆಗೆ ಅನುಭವ / ತರಬೇತಿ ನಿಗದಿಪಡಿಸಿದ್ದಲ್ಲಿ ಅದರ ಪ್ರಮಾಣ ಪತ್ರಗಳು

5) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)

6) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಮತ್ತು ಪ್ರವರ್ಗ–3ಬಿ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ)

7) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

8) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

9) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

10) ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

11) ಸೇವಾನುಭವ ಪ್ರಮಾಣ ಪತ್ರಗಳು(ನಿಗದಿಪಡಿಸಿದಲ್ಲಿ)

(ಮೇಲಿನ ಕ್ರಮ ಸಂಖ್ಯೆ 6, 7, 8, 9 ಮತ್ತು 10 ರ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ನಿಗದಿಪಡಿಸಿದ ನಮೂನೆಗಳಲ್ಲಿ ಮೀಸಲಾತಿಯನ್ನು ಕೋರದೇ ಇತರೆ ನಮೂನೆಗಳಲ್ಲಿ ಕೋರಿದ್ದಲ್ಲಿ ಮೀಸಲಾತಿಯನ್ನು ತಿರಸ್ಕರಿಸಲಾಗುವುದು).

**15. ವಿಶೇಷ ಸೂಚನೆಗಳು:–**

(1) **ON LINE** ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

(2) ಈಗಾಗಲೇ ಸೇವೆಯಲ್ಲಿರುವ / ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು.

(3) ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವಾಗುವುದು.

**16. ದುರ್ನಡತೆ:–** ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ.

**V-F 2-B/B**

## ಅನುಸೂಚಿ

ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 1 ಆರ್‌ಟಿ(4)ಬಿ–1/2010 ದಿನಾಂಕ: 06–09–2010

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–10–2010 ಸಂಜೆ 5.30 ಗಂಟೆ ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ 13–10–2010 ಬ್ಯಾಂಕಿನ ವೇಳೆಯೊಳಗೆ

| ಹುದ್ದೆಗಳ ಅನುಕ್ರಮ ಸಂಖ್ಯೆ | ಹುದ್ದೆಯ ಸಂಕೇತ/ POST CODE | ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ | ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಹುದ್ದೆಗಳ ವರ್ಗೀಕರಣ |
|---|---|---|---|---|---|---|
| (1) | (2) | (3) | (4) | (5) | (6) | (7) |
| | | | ಗ್ರೂಪ್– ' ಸಿ ' ಹುದ್ದೆಗಳು | | | |
| 01–02 | 01 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಲ್ಲಿ ಪ್ರಾರೂಪಣಾ ಸಹಾಯಕರು– 02 ಹುದ್ದೆಗಳು<br>**Drafting Asst. in the Dept. of Law & Parliamentary Affairs - 02 posts** | ರೂ.10000 –18150 | **Must be holder of a degree in Law. Preference be given to candidates having first class degree in Law or is a holder of Master degree in Law.** | ಕನಿಷ್ಠ – 18<br>ಗರಿಷ್ಠ – 35<br>ಪ್ರ. 2ಎ<br>ಪ್ರ 2ಬಿ<br>ಪ್ರ 3ಎ 38<br>ಪ್ರ 3ಬಿ<br>ಪ.ಜಾ<br>ಪ.ಪಂ 40<br>ಪ್ರ 1 | ಸಾಮಾನ್ಯ ಅರ್ಹತೆ(ಗ್ರಾಮೀಣ) – 01 ಹುದ್ದೆ<br>ಪ್ರವರ್ಗ 1(ಇತರೆ) – 01 ಹುದ್ದೆ |

| ಹುದ್ದೆಗಳ ಅನುಕ್ರಮ ಸಂಖ್ಯೆ | ಹುದ್ದೆಯ ಸಂಕೇತ/ POST CODE | ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ | ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಹುದ್ದೆಗಳ ವರ್ಗೀಕರಣ |
|---|---|---|---|---|---|---|
| (1) | (2) | (3) | (4) | (5) | (6) | (7) |
| 03–284 | 02 | ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ವಿದ್ಯಾರ್ಥಿ ನಿಲಯಗಳ ನಿಲಯ ವಾರ್ಡನ್ (ಬಾಲಕ – ಬಾಲಕಿಯರು) 282 ಹುದ್ದೆಗಳು **Hostel Warden (Boys/Girls)in Social Welfare Dept-282 posts** | ರೂ: 7275–13350 | **Must be holder of a Degree with Degree in Education** | –ಅದೇ– | (see below) |

| ಮೀಸಲಾತಿ | ಇ | ಮ | ಗ್ರಾ | ಮಾಸೈ | ಕಮಾಅ | ಯೋ.ನಿ | ಅಂ.ವಿ | ಒಟ್ಟು |
|---|---|---|---|---|---|---|---|---|
| ಪ.ಜಾ | 09 | 12 | 10 | 05 | 02 | 02 | 02(1* /1** | 42 |
| ಪ.ಪಂ | 01 | 02 | 03 | 01 | 01 | – | – | 08 |
| ಪ್ರ.1 | 03 | 04 | 02 | 01 | 01 | 01 | – | 12 |
| ಪ್ರ.2(ಎ) | 09 | 13 | 10 | 05 | 02 | 02 | 02(1* /1** | 43 |
| ಪ್ರ.2(ಬಿ) | 03 | 03 | 02 | 01 | 01 | 01 | – | 11 |
| ಪ್ರ.3(ಎ) | 03 | 03 | 02 | 01 | 01 | 01 | – | 11 |
| ಪ್ರ.3(ಬಿ) | 02 | 04 | 04 | 01 | 01 | 01 | 01# | 14 |
| ಸಾ.ಅ | 28 | 42 | 36 | 14 | 07 | 07 | 07(2* /2**/ 1***/ 2#) | 141 |
| ಒಟ್ಟು | 58 | 83 | 69 | 29 | 16 | 15 | 12 | 282 |

| ಹುದ್ದೆಗಳ ಅನುಕ್ರಮ ಸಂಖ್ಯೆ | ಹುದ್ದೆಯ ಸಂಕೇತ/ POST CODE | ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ | ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಹುದ್ದೆಗಳ ವರ್ಗೀಕರಣ | | | | | | | | |
|---|---|---|---|---|---|---|---|---|---|---|---|---|---|---|
| (1) | (2) | (3) | (4) | (5) | (6) | (7) | | | | | | | | |
| 285–337 | 03 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ವಿದ್ಯಾರ್ಥಿ ನಿಲಯಗಳ ನಿಲಯ ವಾರ್ಡನ್ (ಬಾಲಕ – ಬಾಲಕಿಯರು) 53 ಹುದ್ದೆಗಳು<br>Hostel Warden (Boys/Girls)in ST Welfare Dept-53 posts | ರೂ: 7275–13350 | Must be holder of a Degree with Degree in Education | ಕನಿಷ್ಠ – 18<br>ಗರಿಷ್ಠ – 35<br>ಪ್ರ, 2ಎ, ಪ್ರ 2ಬಿ, ಪ್ರ 3ಎ } 38<br>ಪ್ರ 3ಬಿ<br>ಪ.ಜಾ, ಪ.ಪಂ } 40<br>ಪ್ರ 1 | ಮೀಸಲಾತಿ | ಇ | ಮ | ಗ್ರಾ | ಮಾಸೈ | ಕಮಾಅ | ಯೋ. ನಿ | ಅಂ.ವಿ | ಒಟ್ಟು |
| | | | | | | ಪ.ಜಾ | 01 | 02 | 02 | 01 | 01 | – | – | 07 |
| | | | | | | ಪ.ಪಂ | – | – | 01 | – | – | – | 01# | 02 |
| | | | | | | ಪ್ರ.1 | – | 01 | 01 | – | – | – | 01# | 03 |
| | | | | | | ಪ್ರ.2(ಎ) | 01 | 02 | 02 | 01 | 01 | – | – | 07 |
| | | | | | | ಪ್ರ.2(ಬಿ) | – | – | 01 | – | – | – | 01# | 02 |
| | | | | | | ಪ್ರ.3(ಎ) | – | – | 01 | – | – | – | 01# | 02 |
| | | | | | | ಪ್ರ.3(ಬಿ) | – | 01 | 01 | – | – | – | 01# | 03 |
| | | | | | | ಸಾ.ಅ | 06 | 08 | 07 | 03 | 01 | 01 | 01* | 27 |
| | | | | | | **ಒಟ್ಟು** | **08** | **14** | **16** | **05** | **03** | **01** | **06** | **53** |

| ಹುದ್ದೆಗಳ ಅನುಕ್ರಮ ಸಂಖ್ಯೆ | ಹುದ್ದೆಯ ಸಂಕೇತ/ POST CODE | ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ | ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಹುದ್ದೆಗಳ ವರ್ಗೀಕರಣ |
|---|---|---|---|---|---|---|
| (1) | (2) | (3) | (4) | (5) | (6) | (7) |
| 338–755 | 04 | ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರಿಕೆ ಸಹಾಯಕರು – 418 ಹುದ್ದೆಗಳು Horticulture Assistant in the Dept. of Horticulture-418 posts | ರೂ.6250 –12000 | Must have passed PUC Examination or possess equivalent qualification and must have undergone successful 10 months training in Horticulture conducted by the Horticulture Department. OR 2) Must possess Job Oriented Course Certificate in Horticulture subject conducted by the Directorate of Vocational Education. | –ಅದೇ– | |

| ಮೀಸಲಾತಿ | ಇ | ಮ | ಗ್ರಾ | ಮಾ.ಸ್ಯೆ. | ಕ.ಮಾ.ಅ | ಯೋ.ಅ | ಅಂ.ವಿ | ಒಟ್ಟು |
|---|---|---|---|---|---|---|---|---|
| ಪ.ಜಾ | 13 | 19 | 16 | 06 | 03 | 03 | 03 | **63** |
| ಪ.ಪಂ | 03 | 04 | 04 | 01 | – | – | 01 | **13** |
| ಪ್ರ.1 | 03 | 05 | 05 | 01 | 01 | 01 | 01 | **17** |
| ಪ್ರ.2(ಎ) | 13 | 19 | 15 | 06 | 03 | 03 | 03 | **62** |
| ಪ್ರ.2(ಬಿ) | 03 | 05 | 05 | 01 | 01 | 01 | 01 | **17** |
| ಪ್ರ.3(ಎ) | 03 | 05 | 05 | 01 | 01 | 01 | 01 | **17** |
| ಪ್ರ.3(ಬಿ) | 04 | 06 | 05 | 02 | 01 | 01 | 01 | **20** |
| ಸಾ.ಅ | 42 | 63 | 53 | 20 | 10 | 10 | 11 | **209** |
| **ಒಟ್ಟು** | **84** | **126** | **108** | **38** | **20** | **20** | **22** | **418** |

ಅಂಗವಿಕಲ ಮೀಸಲಾತಿಗೆ ಮೀಸಲಿದ್ದ 22 ಹುದ್ದೆಗಳಿಗೆ ಕುಷ್ಟರೋಗದಿಂದ ಗುಣಮುಖರಾದರು ಮಾತ್ರ ಅರ್ಜಿ ಸಲ್ಲಿಸಬಹುದು.

ಅಂಗವಿಕಲರಿಗೆ ಮೀಸಲಿದ್ದ ವಾರ್ಡನ್ ಹುದ್ದೆಗಳ ಅಂಗವಿಕಲತೆ ವಿವರ: *ಶ್ರವಣ ದೋಷ/ ** ಚಲನವಲನ ವೈಕಲ್ಯ/*** ಕುಷ್ಟರೋಗದಿಂದ ಗುಣಮುಖರಾದವರು ಮತ್ತು ಮಾನಸಿಕ ಅಸ್ವಸ್ಥ/ #ಶ್ರವಣ ದೋಷ,ಚಲನವಲನ ವೈಕಲ್ಯ, ಕುಷ್ಟರೋಗದಿಂದ ಗುಣಮುಖರಾದವರು ಮತ್ತು ಮಾನಸಿಕ ಅಸ್ವಸ್ಥ ನಿಗದಿಪಡಿಸಿದ ಅಂಗವಿಕಲತೆವುಳ್ಳ ಅಭ್ಯರ್ಥಿಗಳು ದೊರಕದಿದ್ದಲ್ಲಿ ಹುದ್ದೆಗೆ ನಿಗದಿಪಡಿಸಿದ ಇತರೆ ಅಂಗವಿಕಲತೆವುಳ್ಳ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಮಹಿಳೆಯರಿಗೆ / ಮಾಜಿ ಸೈನಿಕರಿಗೆ / ಗ್ರಾಮೀಣ / ಯೋಜನೆ ನಿರ್ವಸಿತ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**ಸಂಕ್ಷೇಪ:–** ಇ – ಇತರೆ / ಮ – ಮಹಿಳೆ / ಗ್ರಾ – ಗ್ರಾಮೀಣ / ಮಾ.ಸೈ – ಮಾಜಿ ಸೈನಿಕ / ಕ..ಮಾ.ಅ.–ಕನ್ನಡ ಮಾಧ್ಯಮದ ಅಭ್ಯರ್ಥಿ/ಪ.ಜಾ – ಪರಿಶಿಷ್ಟ ಜಾತಿ / ಪ.ಪಂ.–ಪರಿಶಿಷ್ಟ ಪಂಗಡ / ಪ್ರ.–ಪ್ರವರ್ಗ / ಸಾ.ಅ.–ಸಾಮಾನ್ಯ ಅರ್ಹತೆ / ಅಂ.ವಿ–ಅಂಗ ವಿಕಲ/ಯೋ.ಅ–ಯೋಜನಾ ನಿರಾಶ್ರಿತರು.

ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ಪಿ.ಆರ್.690

**ಕರ್ನಾಟಕ ಸರ್ಕಾರ**

**ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ**

**ಕಾರ್ಯನಿರ್ವಾಹಕ ಇಂಜನಿಯರ್ ರವರ ಕಛೇರಿ, ಪಂ.ರಾ. ಇಂ. ವಿಭಾಗ, ಮಧುಗಿರಿ,**

**ಸಂಖ್ಯೆ:ಕಾನಿಇಂ/ಪಂರಾಇಂವಿ/ಮಧು/ಯೋಶಾ/ಜೆಇ–3/ಟೆಂಡರ್/ /2010–11, ದಿನಾಂಕ:16ನೇ ಆಗಸ್ಟ್, 2010**

**ಇ– ಟೆಂಡರ್ ಪ್ರಕಟಣೆ – 04 / 2010–11**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K/W-3 ಮತ್ತು K/W-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕಿಯೋನಿಕ್ಸ್, ನಂ 24, ಸುಧಾ ಕಾಂಪ್ಲೆಕ್ಸ್, 3ನೇ ಹಂತ, 4ನೇ ಬ್ಲಾಕ್, ಪವಿತ್ರ ಪ್ಯಾರಡೈಸ್ ಹತ್ತಿರ, ಬಸವೇಶ್ವರ ನಗರ, ಬೆಂಗಳೂರು–79 ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ **2009–10 ನೇ ಸಾಲಿನ 3ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ** ಕಾಮಗಾರಿಗಳಿಗೆ ಟೆಂಡರ್‌ಗಳನ್ನು **ಇ–ಟೆಂಡರ್ ಮೂಲಕ** ಮಾತ್ರ ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ದ್ವಿ ಲಕೋಟೆಗಳಲ್ಲಿ ಒಂದು ತಾಂತ್ರಿಕ ಬಿಡ್, ಎರಡನೆಯದು ಆರ್ಥಿಕ ಬಿಡ್ ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ಪ್ರಥಮ ಹಂತದಲ್ಲಿ ತೆರೆಯಲಾಗುವುದು, ತದ ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ಮಾತ್ರ ತೆರೆದು ವಿಶ್ಲೇಷಿಸಲಾಗುವುದು.

| | | |
|---|---|---|
| 1) | ಖಾಲಿ **ಇ–ಟೆಂಡರ್** ನಮೂನೆಗಳಿಗಾಗಿ ಆನ್‌ಲೈನ್ ನಲ್ಲಿ **ಇ–ಪೇಮೆಂಟ್/ಎನ್.ಇ.ಎಫ್.ಟಿ.** ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : 16–9–2010 ರಿಂದ 21–9–2010 ಸಂಜೆ 5.00 ಗಂಟೆವರೆಗೆ |
| 2) | ಖಾಲಿ **ಇ–ಟೆಂಡರ್** ನಮೂನೆಗಳನ್ನು **ಆನ್‌ಲೈನ್** ಮೂಲಕ ಪಡೆಯಲು ಕೊನೆಯ ದಿನಾಂಕ | : 16–9–2010 ರಿಂದ 21–9–2010 ಸಂಜೆ 5.00 ಗಂಟೆವರೆಗೆ |
| 3) | ಭರ್ತಿ ಮಾಡಿದ **ಇ–ಟೆಂಡರ್** ಗಳನ್ನು ಹಾಗೂ ಇ.ಎಂ.ಡಿ. ಠೇವಣಿಯನ್ನು **ಆನ್‌ಲೈನ್ ಮೂಲಕ** ಸ್ವೀಕರಿಸುವ ಕೊನೆಯ ದಿನಾಂಕ | : 21–9–2010 ಸಂಜೆ 4.00 ಗಂಟೆವರೆಗೆ |
| 4) | ತಾಂತ್ರಿಕ ಬಿಡ್ ಲಕೋಟೆಯನ್ನು ತೆರೆಯುವ ದಿನಾಂಕ (**ಆನ್‌ಲೈನ್ ಮೂಲಕ**) | : 23–9–2010 ಪೂರ್ವಾಹ್ನ 11.00 ಗಂಟೆ ನಂತರ. |
| 5) | ಅರ್ಹ ಗುತ್ತಿಗೆದಾರರ ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ (ಆನ್‌ಲೈನ್ ಮೂಲಕ) | : ಮುಂದೆ ತಿಳಿಸಲಾಗುವುದು |

| ಕ್ರ. ಸಂ. | ತಾಲ್ಲೂಕು | ಪ್ಯಾಕೇಜ್/ಕಾಮಗಾರಿ | ಟೆಂಡರಿಗಿಡುವ ಅಂದಾಜು ಮೊಬಲಗು (ರೂ.ಲಕ್ಷಗಳಲ್ಲಿ) | ಮುಂಗಡ ಠೇವಣಿ ಹಣ (ರೂ.ಲಕ್ಷಗಳಲ್ಲಿ) | ಅರ್ಹ ದರ್ಜೆಯ ಗುತ್ತಿಗೆದಾರರು | ಇ–ಟೆಂಡರ್ ಬೆಲೆ + ತೆರಿಗೆ ಹಿಂತಿರುಗಿಸಲಾಗುವುದಿಲ್ಲ ( ರೂ ಲಕ್ಷಗಳಲ್ಲಿ) | ಕಾಲಾವಧಿ (ಮಳೆಗಾಲ ಸೇರಿ) |
|---|---|---|---|---|---|---|---|
| 1 | 2 | 4 | 5 | 6 | 7 | 8 | 9 |

| ಕ್ರ. ಸಂ. | ತಾಲ್ಲೂಕು | ಪ್ಯಾಕೇಜ್/ಕಾಮಗಾರಿ | ಟೆಂಡರಿಗಿಡುವ ಅಂದಾಜು ಮೊಬಲಗು (ರೂ.ಲಕ್ಷಗಳಲ್ಲಿ) | ಮುಂಗಡ ಠೇವಣಿ ಹಣ (ರೂ.ಲಕ್ಷಗಳಲ್ಲಿ) | ಅರ್ಹ ದರ್ಜೆಯ ಗುತ್ತಿಗೆದಾರರು | ಇ–ಟೆಂಡರ್ ಬೆಲೆ + ತೆರಿಗೆ ಹಿಂತಿರುಗಿಸಲಾಗುವುದಿಲ್ಲ ( ರೂ ಲಕ್ಷಗಳಲ್ಲಿ) | ಕಾಲಾವಧಿ (ಮಳೆಗಾಲ ಸೇರಿ) |
|---|---|---|---|---|---|---|---|
| 1 | 2 | 4 | 5 | 6 | 7 | 8 | 9 |
| 1 | ಶಿರಾ | TMK-SR-01 | 150.00 | 2.25 | 1ನೇ ದರ್ಜೆ | 28200–00 | 8 ತಿಂಗಳು |
| 2 | ಶಿರಾ | TMK-SR-02 | 135.00 | 2.05 | 1ನೇ ದರ್ಜೆ | 28200–00 | 8 ತಿಂಗಳು |
| 3 | ಮಧುಗಿರಿ | TMK-MGR-03 | 124.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 4 | ಮಧುಗಿರಿ | TMK-MGR-04 | 173.00 | 2.60 | 1ನೇ ದರ್ಜೆ | 28200–00 | 8 ತಿಂಗಳು |
| 5 | ಮಧುಗಿರಿ | TMK-MGR-05 | 123.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 6 | ಮಧುಗಿರಿ | TMK-MGR-06 | 175.00 | 2.63 | 1ನೇ ದರ್ಜೆ | 28200–00 | 8 ತಿಂಗಳು |
| 7 | ಕೊರಟಗೆರೆ | TMK-KTG-07 | 74.60 | 1.50 | 1ನೇ ದರ್ಜೆ | 22500–00 | 6 ತಿಂಗಳು |
| 8 | ಕೊರಟಗೆರೆ | TMK-KTG-08 | 75.00 | 1.50 | 1ನೇ ದರ್ಜೆ | 22500–00 | 6 ತಿಂಗಳು |
| 9 | ಕೊರಟಗೆರೆ | TMK-KTG-09 | 96.10 | 1.93 | 1ನೇ ದರ್ಜೆ | 22500–00 | 6 ತಿಂಗಳು |
| 10 | ಪಾವಗಡ | TMK-PVG-10 | 93.00 | 1.86 | 1ನೇ ದರ್ಜೆ | 22500–00 | 6 ತಿಂಗಳು |
| 11 | ಪಾವಗಡ | TMK-PVG-11 | 116.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 12 | ಪಾವಗಡ | TMK-PVG-12 | 114.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 13 | ಪಾವಗಡ | TMK-PVG-13 | 114.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 14 | ಪಾವಗಡ | TMK-PVG-14 | 112.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 15 | ಚಿ.ನಾ.ಹಳ್ಳಿ | ಹಂದನಕೆರೆ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ | 121.00 | 2.00 | 1ನೇ ದರ್ಜೆ | 28200–00 | 8 ತಿಂಗಳು |

| ಕ್ರ. ಸಂ. | ತಾಲ್ಲೂಕು | ಪ್ಯಾಕೇಜ್/ಕಾಮಗಾರಿ | ಟೆಂಡರಿಗಿಡುವ ಅಂದಾಜು ಮೊಬಲಗು (ರೂ.ಲಕ್ಷಗಳಲ್ಲಿ) | ಮುಂಗಡ ಠೇವಣಿ ಹಣ (ರೂ.ಲಕ್ಷಗಳಲ್ಲಿ) | ಅರ್ಹ ದರ್ಜೆಯ ಗುತ್ತಿಗೆದಾರರು | ಇ-ಟೆಂಡರ್ ಬೆಲೆ + ತೆರಿಗೆ ಹಿಂತಿರುಗಿಸಲಾಗುವುದಿಲ್ಲ ( ರೂ ಲಕ್ಷಗಳಲ್ಲಿ) | ಕಾಲಾವಧಿ (ಮಳೆಗಾಲ ಸೇರಿ) |
|---|---|---|---|---|---|---|---|
| 1 | 2 | 4 | 5 | 6 | 7 | 8 | 9 |
| 16 | ಚಿ.ನಾ.ಹಳ್ಳಿ | ಬೆಳಗುಲಿ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ | 102.00 | 2.00 | 1ನೇ ದರ್ಜೆ | 28200–00 | 8 ತಿಂಗಳು |
| 17 | ಚಿ.ನಾ.ಹಳ್ಳಿ | ದಸೂಡಿ ಗ್ರಾ.ಪಂ.ದಪ್ಪಗುಂಟೆ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ | 90.00 | 1.80 | 1ನೇ ದರ್ಜೆ | 22500–00 | 6 ತಿಂಗಳು |
| 18 | ಚಿ.ನಾ.ಹಳ್ಳಿ | ಕಂದಿಕೆರೆ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ | 58.00 | 1.16 | 1ನೇ ದರ್ಜೆ | 22500–00 | 6 ತಿಂಗಳು |
| 19 | ಚಿ.ನಾ.ಹಳ್ಳಿ | TMK-CNH-15 | 72.00 | 1.44 | 1ನೇ ದರ್ಜೆ | 22500–00 | 6 ತಿಂಗಳು |

**ನಿಬಂಧನೆಗಳು:**

1) ಈ **ಇ-ಟೆಂಡರ್** ನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸುವಾಗ ಅರ್ಹ ದರ್ಜೆಯಲ್ಲಿ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಗುತ್ತಿಗೆದಾರರ ದಾಖಲಾತಿ ಪುಸ್ತಕವನ್ನು ಸಲ್ಲಿಸಿ, ದಾಖಲಾತಿಯನ್ನು ಕಿಯೋನಿಕ್ಸ್, ನಂ: 24, ಸುಧಾ ಕಾಂಪ್ಲೆಕ್ಸ್, 3 ನೇ ಹಂತ, 4ನೇ ಬ್ಲಾಕ್, ಪವಿತ್ರ ಪ್ಯಾರಡೈಸ್ ಹತ್ತಿರ, ಬಸವೇಶ್ವರನಗರ, ಬೆಂಗಳೂರು-79 ರಲ್ಲಿ ನೊಂದಣಿ ಮಾಡಿಸಿಕೊಳ್ಳಬೇಕು.
2) ಇ-ಪೇಮೆಂಟ್/ಎನ್.ಇ.ಎಫ್.ಟಿ. ಮೂಲಕ ಅರ್ಜಿ ಸಲ್ಲಿಸಿದವರಿಗೆ ಮಾತ್ರ ಟೆಂಡರ್ ಷೆಡ್ಯೂಲ್‌ಗಳನ್ನು ಆನ್‌ಲೈನ್ ಮೂಲಕ ವಿತರಿಸಲಾಗುವುದು.
3) ಕಾಮಗಾರಿಯ **ಇ-ಟೆಂಡರ್** ಮೊತ್ತಕಿಂತಲೂ ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಕಡಿಮೆಯಾದಲ್ಲಿ ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿಯಾಗಿ ಡಿ.ಡಿ./ಎಫ್.ಡಿ.ಆರ್./ಪ್ಲೆಡ್ಜ್ ಎನ್.ಎಸ್.ಸಿ. ರೂಪದಲ್ಲಿ ಕೆಲಸದ ಆದೇಶ ನೀಡುವ ಮೊದಲು ಕಡ್ಡಾಯವಾಗಿ ಪಾವತಿಸತಕ್ಕದ್ದು..
4) ನಿಬಂಧನೆಯುಕ್ತ **ಇ-ಟೆಂಡರ್** ಪರಿಗಣಿಸಲಾಗುವುದಿಲ್ಲ.
5) ಗುತ್ತಿಗೆದಾರರು ಜಂಟಿಯಾಗಿ (ಇನ್ನೋರ್ವ ಗುತ್ತಿಗೆದಾರರೊಂದಿಗೆ) ಭಾಗವಹಿಸಲು ಅವಕಾಶವಿರುವುದಿಲ್ಲ.
6) ಗುತ್ತಿಗೆದಾರರು ಯಾವುದೇ ಕಾನೂನು ಬಾಹಿರ ಚಟುವಟಿಕೆ ಅಥವಾ ಭ್ರಷ್ಟ ವಂಚನೆ ಪ್ರಕರಣಗಳಲ್ಲಿ ಬಾಗಿಯಾಗಿರುವ ಬಗ್ಗೆ ಸರ್ಕಾರದಿಂದ ಘೋಷಿಸಲ್ಪಟ್ಟಿರಬಾರದು.

7) ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಯಾವುದೇ ಹಾನಿ ಸಂಭವಿಸಿದ್ದಲ್ಲಿ ವೆಚ್ಚವನ್ನು ಗುತ್ತಿಗೆದಾರರೇ ಭರಿಸಬೇಕಾಗುತ್ತದೆ.

8) ಮೇಲ್ಕಂಡ ಕಾಮಗಾರಿಗಳಲ್ಲಿ ಯಾವುದೇ ಸೇರ್ಪಡೆ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

9) ಟೆಂಡರ್ ರದ್ದಾದಲ್ಲಿ ಟೆಂಡರ್ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಯಿಸುವಂತಿಲ್ಲ.

10) ಸರ್ಕಾರದ ಆದೇಶ ಸಂಖ್ಯೆ: ಎಲ್‌ಡಿ/300/ಎಲ್‌ಇಟಿ/2006 ದಿನಾಂಕ18–1–2007 ರಂತೆ ಕಾರ್ಮಿಕ ಕಲ್ಯಾಣ ನಿಧಿಗೆ ಬಿಲ್ಲುಗಳ ಮೊತ್ತದ ಶೇ.1ರಷ್ಟನ್ನು ಕಡಿತಗೊಳಿಸಲಾಗುವುದು.

11) ಕಾಮಗಾರಿಗೆ ಉಪಯೋಗಿಸುವ ಎಲ್ಲಾ ಸಾಮಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು ಹಾಗೂ ಸಾಮಗ್ರಿಗಳ ಗುಣಮಟ್ಟವನ್ನು ಸಕ್ಷಮ ಪ್ರಾಧಿಕಾರದಿಂದ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ಗುಣಮಟ್ಟ ಪರೀಕ್ಷಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

12) ಟೆಂಡರ್‌ಗಿಟ್ಟ ಕಾಮಗಾರಿಯ ಅಂದಾಜು ಮೊತ್ತದ 100 ಲಕ್ಷಗಳವರೆಗೆ ಶೇಕಡಾ 50 ರಷ್ಟು ಮೊತ್ತದ ಇದೇ ರೀತಿಯ ಕಾಮಗಾರಿಯನ್ನು ಹಾಗೂ ಅಂದಾಜು ಮೊತ್ತ 100 ಲಕ್ಷ ಮೇಲ್ಪಟ್ಟ ಕಾಮಗಾರಿಯ ಶೇಕಡಾ 80 ರಷ್ಟು ಮೊತ್ತದ ಇದೇ ರೀತಿಯ ಕಾಮಗಾರಿಯನ್ನು 2005–06 ರಿಂದ 2009–10 ವರೆಗಿನ ಐದು ವರ್ಷಗಳಲ್ಲಿ ಯಾವುದಾದರೂ ಒಂದು ಆರ್ಥಿಕ ವರ್ಷದಲ್ಲಿ ಕೆಲಸ ಕೈಗೊಂಡು ತೃಪ್ತಿಕರವಾಗಿ ಪೂರೈಸಿರಬೇಕು ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳ ದೃಡೀಕರಣ ಪತ್ರವನ್ನು ಒದಗಿಸಬೇಕು. ಹಾಗೂ 2005–06 ರಿಂದ 2009–10 ವರೆಗಿನ ಐದು ವರ್ಷಗಳಲ್ಲಿ ಆಯಾ ಅಂದಾಜು ಮೊತ್ತಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಆಡಿಟರ್‌ರವರಿಂದ ದಾಖಲಾತಿಗಳನ್ನು ಒದಗಿಸತಕ್ಕದ್ದು.

13) ಈ ಯೋಜನೆಯಡಿ ನಿರ್ಮಿಸುವ ಕಾಮಗಾರಿಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು ಹಾಗೂ ಕಾಮಗಾರಿ ಪೂರ್ಣಗೊಂಡನಂತರ 1 ವರ್ಷ ಕಾಮಗಾರಿ ನಿರ್ವಹಣೆ ಅವಧಿಯನ್ನು ನಿಗದಿಪಡಿಸಲಾಗಿದೆ. ಸದರಿ ಕಾಮಗಾರಿಯ ದುರಸ್ತಿ ಈ 1 ವರ್ಷದಲ್ಲಿ ಸಂಭವಿಸಿದ್ದಲ್ಲಿ ಗುತ್ತಿಗೆದಾರರೆ ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿ ನಿರ್ವಹಣೆ ಮಾಡತಕ್ಕದ್ದು. ಈ 1 ವರ್ಷದವರೆಗೆ ಗುತ್ತಿಗೆದಾರರ ಭದ್ರತಾ ಠೇವಣಿಯನ್ನು ಹಿಂದಿರುಗಿಸುವುದಿಲ್ಲ.

14) ಗುತ್ತಿಗೆದಾರರು 2005–06ರಿಂದ 2009–10ನೇ ಸಾಲಿನ ಯಾವುದಾದರೂ 2 ಆರ್ಥಿಕ ವರ್ಷಗಳಲ್ಲಿ ಸರಾಸರಿ ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ವಹಿವಾಟನ್ನು 100 ಲಕ್ಷಗಳ ಅಂದಾಜು ಮೊತ್ತದವರೆಗೆ ಹಾಗೂ 100 ಲಕ್ಷ ಮೇಲ್ಪಟ್ಟ ಕಾಮಗಾರಿಗೆ 2 ಆರ್ಥಿಕ ವರ್ಷಗಳಲ್ಲಿ ಸರಾಸರಿ ಅಂದಾಜು ಮೊತ್ತಕ್ಕಿಂತ ಎರಡುಪಟ್ಟು ಹೆಚ್ಚಿನ ಮೊತ್ತದ ವಹಿವಾಟನ್ನು (Turnover) ಹೊಂದಿರಬೇಕು.

15) ಗುತ್ತಿಗೆದಾರರು ಕಾಮಗಾರಿಯ ಅಂದಾಜು ಮೊತ್ತದ ಶೇಕಡ 30ರಷ್ಟು ಮೊತ್ತದ ಲೈನ್ ಆಫ್ ಕ್ರೆಡಿಟ್ ಅನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಲ್ಲಿಸತಕ್ಕದ್ದು.

16) ಅಂದಾಜಿನಲ್ಲಿರುವ ಪರಿಮಾಣಗಳ ಶೇಕಡ 80ರಷ್ಟು ಪರಿಮಾಣಗಳನ್ನು 2005–06 ರಿಂದ 2009–10 ವರೆಗಿನ ಐದು ವರ್ಷಗಳಲ್ಲಿ ಯಾವುದಾದರೂ ಒಂದು ಆರ್ಥಿಕ ವರ್ಷದಲ್ಲಿ ಕೆಲಸ ಕೈಗೊಂಡು ತೃಪ್ತಿಕರವಾಗಿ ಪೂರೈಸಿರಬೇಕು ಇದಕ್ಕೆ ಸಂಬಂದಿಸಿದಂತೆ ಸಕ್ಷಮ ಅಧಿಕಾರಿಗಳ ದೃಡೀಕರಣ ಪತ್ರವನ್ನು ಒದಗಿಸಬೇಕು.

17) ಗುತ್ತಿಗೆದಾರರು ರೋಡ್ ರೋಲರ್–2, ಟಿಪ್ಪರ್–2 ಹಾಟ್‌ಮಿಕ್ಸ್ ಪ್ಲಾಂಟ್–1, ಕಾಂಕ್ರೀಟ್ ಮಿಕ್ಸರ್–1, ವಾಟರ್ ಟ್ಯಾಂಕರ್–1, ಮೆಕಾನಿಕಲ್ ಸ್ಪ್ರೇಯರ್–1, ಏರ್ ಕಂಪ್ರೆಸ್ಸರ್–1, ವೈಬ್ರೇಟರ್–1, ಬಿಟುಮಿನ್ ಬಾಯ್ಲರ್–1, ಸೆಂಟ್ರಿಂಗ್ ಸಾಮಗ್ರಿಗಳು ಹಾಗೂ ಇತರೆ ಅವಶ್ಯಕ ಸಾಮಗ್ರಿಗಳನ್ನು ಹೊಂದಿರುವ ಬಗ್ಗೆ ದೃಢೀಕರಣ ಪತ್ರ ನೀಡಬೇಕು ಈ ಯಂತ್ರೋಪಕರಣಗಳಲ್ಲಿ ರೋಡ್ ರೋಲರ್ 1 ಸಂಖ್ಯೆ, ಟಿಪ್ಪರ್ – 1 ಸಂಖ್ಯೆ ಹೊಂದಿಕೊಂಡಂತೆ ಶೇಕಡಾ 50 ರಷ್ಟು ಸ್ವಂತ ಹೊಂದಿರಬೇಕು ಹಾಗೂ ಶೇಕಡಾ 50 ರಷ್ಟು ಯಂತ್ರೋಪಕರಣಗಳನ್ನು ಬಾಡಿಗೆ/ಗುತ್ತಿಗೆ ಪಡೆಯಬಹುದು. ಬಾಡಿಗೆ/ಗುತ್ತಿಗೆ ಕರಾರಿನ ದೃಡೀಕರಣ ಪತ್ರಗಳನ್ನು ಸಲ್ಲಿಸಬೇಕು.

18) ಎಲ್ಲಾ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಅಧಿಕೃತ ಗುಣ ನಿಯಂತ್ರಣ ಪರಿವೀಕ್ಷಕರಿಂದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪರಿವೀಕ್ಷಣೆ ಮಾಡಿಸಿ ಗುಣಮಟ್ಟದ ಬಗ್ಗೆ ದೃಡೀಕೃತ ಪತ್ರಗಳನ್ನು ಬಿಲ್ಲಿನೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ.

19) ಗುತ್ತಿಗೆದಾರರು ಟೆಂಡರ್ ಅನುಮೋದನೆಯಾದ ದಿನದಿಂದ 20 ದಿವಸದೊಳಗೆ ಗುತ್ತಿಗೆ ಕರಾರು ಮಾಡಿಕೊಳ್ಳದಿದ್ದಲ್ಲಿ ಅಥವಾ ಕರಾರು ಮಾಡಿಕೊಂಡ ನಂತರ ಒಂದು ವಾರದೊಳಗೆ ಕಾಮಗಾರಿಯನ್ನು ಪ್ರಾರಂಭಿಸದಿದ್ದಲ್ಲಿ ಹೊಣೆ ಮತ್ತು ಜವಾಬ್ದಾರಿ ಮೇಲೆ ಗುತ್ತಿಗೆ ರದ್ದುಪಡಿಸಿ ಇ.ಎಂ.ಡಿ.ಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

20) ಟೆಂಡರ್ ಅನುಮೋದನೆಯಾದ ಗುತ್ತಿಗೆದಾರರು ಗುತ್ತಿಗೆ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಕರಾರು ಮೊತ್ತದ ಶೇಕಡಾ 5ರಷ್ಟು ಮೊತ್ತವನ್ನು ಡಿ.ಡಿ./ಎಫ್.ಡಿ.ಆರ್./ಪ್ಲೆಡ್ಜ್ಡ್ ಎನ್.ಎಸ್.ಸಿ. ರೂಪದಲ್ಲಿ ಭದ್ರತಾ ಠೇವಣಿಯಾಗಿ ಸಲ್ಲಿಸತಕ್ಕದ್ದು.

21) ಕಾಮಗಾರಿಯ ವಿವಿಧ ಅಂಶಗಳನ್ನು ನಿಗಧಿಪಡಿಸಿರುವ ಕಾಲಾವಧಿಯೊಳಗೆ ಪೂರ್ಣಗೊಳಿಸುವ ತಾತ್ಕಾಲಿಕ ಕಾರ್ಯಕ್ರಮವನ್ನು ಸಲ್ಲಿಸತಕ್ಕದ್ದು.

22) ಟೆಂಡರ್‌ನಲ್ಲಿ ಅನರ್ಹರಾದ ಗುತ್ತಿಗೆದಾರರ ಇ.ಎಂ.ಡಿ (ಮುಂಗಡ ಠೇವಣಿ)ಯನ್ನು ಟೆಂಡರ್ ತೆರೆದ 90 (ತೊಂಬತ್ತು) ದಿನಗಳ ನಂತರವೇ ಹಿಂದಿರುಗಿಸಲಾಗುವುದು.

23) ತಾಂತ್ರಿಕ ಬಿಡ್‌ನಲ್ಲಿ ತಿಳಿಸಲಾದ ಎಲ್ಲಾ ವಿವರಗಳಿಗೆ ಪ್ರಮಾಣ ಪತ್ರವನ್ನು ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗಿಂತ ಕಡಿಮೆ ಶ್ರೇಯಾಂಕರಲ್ಲದವರಿಂದ ಪಡೆದು ಸಲ್ಲಿಸಬೇಕು ಕಾಮಗಾರಿಯು ದ್ವಿ ಲಕೋಟೆ ಪದ್ಧತಿ ಕಾಮಗಾರಿಯಾಗಿದ್ದು ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಎಲ್ಲಾ ವಿವರಗಳನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ನಿಭಂದನೆಗಳಲ್ಲಿ ತಿಳಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ಕ್ಯಾನ್ ಮಾಡುವುದು. ಹಾಗೂ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕದಂದು ಆನ್‌ಲೈನ್‌ನಲ್ಲಿ ದಾಖಲಿಸಿರುವ ದಾಖಲೆಗಳನ್ನು ತಾಳೆ ಮಾಡಲು ಮೂಲ ದಾಖಲೆಗಳನ್ನು ಒದಗಿಸತಕ್ಕದ್ದು.

24) ಟೆಂಡರ್ ಸಲ್ಲಿಸುವಾಗ ತಗಲುವ ವೆಚ್ಚವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು. ಸಕ್ಷಮ ಪ್ರಾಧಿಕಾರವು ಯಾವುದೆ ವೆಚ್ಚವನ್ನು ಭರಿಸುವುದಿಲ್ಲ.

25) ಯಾವ ಕಾರಣವನ್ನು ನೀಡದೇ ಹಾಗೂ ಯಾವುದೇ ಕಾನೂನಿನ ಬದ್ಧತೆಯಿಲ್ಲದೆ, ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ/ನಿರಾಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ.

26) ನಿಗಧಿಪಡಿಸಿರುವ ದಿನಾಂಕಗಳಂದು ಸರ್ಕಾರಿ ರಜಾ ದಿನಗಳಾದರೆ ಮುಂದಿನ ದಿನವನ್ನು ಪರಿಗಣಿಸಲಾಗುವುದು.

27) ಟೆಂಡರ್‌ಅನ್ನು **ಇ–ಟೆಂಡರ್** ಮುಖಾಂತರ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ www. Tenderwizard.in./PRED ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಕಿಯೋನಿಕ್ಸ್ ಸಂಸ್ಥೆಯ 9986618376 ನಂಬರನ್ನು ಸಂಪರ್ಕಿಸಬಹುದಾಗಿದೆ.

28) ಕೆ.ಡಬ್ಲ್ಯೂ 3 ಮತ್ತು 4 (ಸ್ಟಾಂಡಡ್ ಟೆಂಡರ್ ಡಾಕ್ಯುಮೆಂಟ್) ನಿಭಂದನೆಗೊಳಪಟ್ಟಿರಬೇಕು.

ಕಾರ್ಯನಿರ್ವಾಹಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ಮಧುಗಿರಿ.

ಪಿಡಿ–132

**ಕರ್ನಾಟಕ ಸರ್ಕಾರ**

**ನೋಂದಣಿ ಮತ್ತು ಮುದ್ರಾಂಕ ಇಲಾಖೆ**

**ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ನಂ. 720, ಶಿಂಪಾ ಭವನ, 46ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು ಇವರ ನಡವಳಿಗಳು**

**ಸಂಖ್ಯೆ: EST-2-235/2003-04, ದಿನಾಂಕ:28ನೇ ಆಗಸ್ಟ್, 2010**

**PEON BACKLOG FINAL SELECTION LIST**

**ಜವಾನರ ಬ್ಯಾಕ್‌ಲಾಗ್ ಅಂತಿಮ ಆಯ್ಕೆ ಪಟ್ಟಿ**

**ವಿಷಯ:** ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಜವಾನರ (ಡಿ-ಗ್ರೂಪ್) ಬ್ಯಾಕ್‌ಲಾಗ್ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:** 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ: 21-11-01 (ದಿನಾಂಕ: 22-11-2001 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಸೇನೆನಿ 2001 ದಿನಾಂಕ:13-02-2001

3) ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ದಿನಾಂಕ:08-02-2000

4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇನೆನಿ 2001 ದಿನಾಂಕ:-13-02-2001

5) ಸರ್ಕಾರ ಅಧಿಸೂಚನೆ ಸಂಖ್ಯೆ: ಡಿಪಿಎಆರ್:13:ಎಸ್‌ಬಿಸಿ:2001 ದಿನಾಂಕ: 01-06-2002 (ದಿನಾಂಕ: 14-06-2002 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

6) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22-11-2002

7) ಸರ್ಕಾರದ ಆದೇಶ ಸಂಖ್ಯೆ: ಅಇ 3 ಬಿಇಎಂ 2001 ದಿನಾಂಕ: 03-01-2003

8) ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 74 SRR 2002 ದಿನಾಂಕ:29-01-2003 (ದಿನಾಂಕ: 30/01/2003 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

9) ಸರ್ಕಾರದ ಪತ್ರ ಸಂಖ್ಯೆ: ಕಂಇ 15 ಮುನೋಸ 2003, ದಿನಾಂಕ: 30-01-2004

10) ಈ ಕಛೇರಿಯ ಅಧಿಸೂಚನೆ ಸಂಖ್ಯೆ: EST-2-235/2003-04 ದಿನಾಂಕ: 04-05-2004 (ದಿನಾಂಕ: 06-05-2004 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

11) ಈ ಕಛೇರಿಯ ಜವಾನರ ಬ್ಯಾಕ್‌ಲಾಗ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: EST-2-235/2003-04 ದಿ:14-06-2004 (ದಿನಾಂಕ: 17-06-2004 ರಂದು ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

12) ಈ ಕಛೇರಿಯ ಜವಾನರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ: EST-2-235/2003-04 ದಿನಾಂಕ: 16-09-2005.

13) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 29 ಮುನೋಮು 2010 ದಿನಾಂಕ: 18-06-2010 (ದಿನಾಂಕ: 19-06-2010 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

14) ಈ ಕಛೇರಿಯ ಜವಾನರ ಬ್ಯಾಕ್‌ಲಾಗ್ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ: EST-2-235/2003-04 ದಿನಾಂಕ: 21-07-2010.

15) ಈ ಕಛೇರಿಯ ಸಮಸಂಖ್ಯೆ ರದ್ದತಿ ಆದೇಶ ದಿನಾಂಕ: 28-08-2010

16) ಈ ಕಛೇರಿಯ ಸಮಸಂಖ್ಯೆ ರದ್ದತಿ ಆದೇಶ ದಿನಾಂಕ: 28-08-2010

**ಪ್ರಸ್ತಾವನೆ:**

ಈ ಇಲಾಖೆಯ ಕೆಳಕಂಡ ಜಿಲ್ಲಾ ನೋಂದಣಾಧಿಕಾರಿಗಳಿಂದ ಅವರವರ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಜವಾನರ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಬಂದ ವರದಿ ಅನ್ವಯ ಉಲ್ಲೇಖ (1)(4)(5)(6) ರಲ್ಲಿ ಪ್ರಕಟಿಸಿರುವ ಬ್ಯಾಕ್‌ಲಾಗ್ ನಿಯಮಗಳ ಅಡಿಯಲ್ಲಿ ಕೆಳಕಂಡ ಮೀಸಲಾತಿ ವರ್ಗೀಕರಣದ ಪ್ರಕಾರ ಪರಿಶಿಷ್ಟ ಜಾತಿಯ ಹತ್ತೊಂಭತ್ತು (19) ಮತ್ತು ಪರಿಶಿಷ್ಟ ಪಂಗಡದ ಹದಿನೇಳು (17) ಈ ರೀತಿ ಒಟ್ಟು ಮೂವತ್ತಾರು (36) ಜವಾನರ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಈ ಇಲಾಖೆಯಲ್ಲಿ ಗುರುತಿಸಿ ಉಲ್ಲೇಖ (9) ರ ಸರ್ಕಾರದ ಪತ್ರದಲ್ಲಿನ ನಿರ್ದೇಶನದಂತೆ ಅಭ್ಯರ್ಥಿಗಳು ಏಳನೇ ತರಗತಿಯಲ್ಲಿ

ತೇರ್ಗಡೆ ಹೊಂದಿರಬೇಕೆಂಬ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಉಲ್ಲೇಖ (10) ರ ಈ ಕಛೇರಿಯ ಅಧಿಸೂಚನೆಯಲ್ಲಿ ಅರ್ಜಿಗಳನ್ನು ಕರೆಯಲಾಯಿತು.

ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 2 SRE 2000 ದಿನಾಂಕ: 24-11-2000 ದನ್ವಯ ಪ್ರಕಟಿಸಿರುವ ಈ ಇಲಾಖೆಯ ಸಿ ಅಂಡ್ ಆರ್ ರೂಲ್ಸ್ ಗಳಿಗೆ ಸರ್ಕಾರದವರು ಉಲ್ಲೇಖ (13) ರ ಅಧಿಸೂಚನೆ ಸಂಖ್ಯೆ: ಆರ್‌ಡಿ 29 ಮುನೋಮು 2010 ದಿನಾಂಕ: 18-6-2010 ರನ್ವಯ ತಿದ್ದುಪಡಿ ಹೊರಡಿಸಿ ಸದರಿ ತಿದ್ದುಪಡಿ ನಿಯಮಗಳಲ್ಲಿ ಅಭ್ಯರ್ಥಿಗಳು ಡಿ-ಗ್ರೂಪ್ ನೌಕರರಾಗಿ ನೇಮಕ ಹೊಂದಲು ನಾಲ್ಕನೇ ತರಗತಿಗೆ ಬದಲಾಗಿ ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕೆಂಬ ವಿದ್ಯಾರ್ಹತೆಯನ್ನು ನಿಗದಿಪಡಿಸಿ ಆದೇಶ ಹೊರಡಿಸಿರುತ್ತಾರೆ.

| ಕ್ರಮ ಸಂಖ್ಯೆ | ಮೀಸಲಾತಿ ವರ್ಗೀಕರಣ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|---|
| 1 | ಸಾಮಾನ್ಯ ಅರ್ಹತಾ ಅಭ್ಯರ್ಥಿ | 4 | 4 |
| 2 | ಮಹಿಳಾ ಅಭ್ಯರ್ಥಿ | 6 | 5 |
| 3 | ಗ್ರಾಮೀಣ ಅಭ್ಯರ್ಥಿ | 5 | 5 |
| 4 | ಮಾಜಿ ಸೈನಿಕ | 1 | 1 |
| 5 | ಕನ್ನಡ ಮಾಧ್ಯಮ ಅಭ್ಯರ್ಥಿ | 1 | 1 |
| 6 | ಯೋಜನಾ ನಿರಾಶ್ರಿತ ಅಭ್ಯರ್ಥಿ | 1 | 1 |
| 7 | ಅಂಗವಿಕಲ ಅಭ್ಯರ್ಥಿ | 1 | ಇಲ್ಲ |
| | **ಒಟ್ಟು** | **19** | **17** |

ಆಯಾಯ ಜಿಲ್ಲೆಯ ಜಿಲ್ಲಾ ನೋಂದಣಾಧಿಕಾರಿಗಳಿಂದ ಆಯಾಯ ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟ ಜವಾನರ ಬ್ಯಾಕ್‌ಲಾಗ್ ಹುದ್ದೆಗಳ ವಿವರಗಳು ಕೆಳಗಿನಂತೆ ಇರುತ್ತವೆ.

| ಕ್ರಮ ಸಂಖ್ಯೆ | ಜಿಲ್ಲೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|
| 1 | ಬೆಂಗಳೂರು | 4 | 2 | 6 |
| 2 | ಬಳ್ಳಾರಿ | 1 | – | 1 |
| 3 | ಬಾಗಲಕೋಟೆ | 2 | 1 | 3 |
| 4 | ಚಿಕ್ಕಮಗಳೂರು | 1 | 1 | 2 |
| 5 | ಚಿತ್ರದುರ್ಗ | – | 2 | 2 |
| 6 | ಚಾಮರಾಜನಗರ | 1 | – | 1 |
| 7 | ಧಾರವಾಡ | 1 | – | 1 |
| 8 | ಗದಗ | 1 | 1 | 2 |
| 9 | ಹಾಸನ | 1 | 1 | 2 |
| 10 | ಹಾವೇರಿ | 1 | 1 | 2 |
| 11 | ಕೋಲಾರ | 1 | – | 1 |
| 12 | ಕೊಪ್ಪಳ | 1 | 1 | 2 |
| 13 | ಕೊಡಗು | – | 1 | 1 |

| ಕ್ರಮ ಸಂಖ್ಯೆ | ಜಿಲ್ಲೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|
| 14 | ಮಂಡ್ಯ | – | 2 | 2 |
| 15 | ರಾಯಚೂರು | – | 1 | 1 |
| 16 | ಶಿವಮೊಗ್ಗ | 2 | 1 | 3 |
| 17 | ಉಡುಪಿ | – | 1 | 1 |
| 18 | ಕಾರವಾರ (ಉತ್ತರ ಕನ್ನಡ) | 2 | 1 | 3 |
| | **ಒಟ್ಟು** | **19** | **17** | **36** |

ಮೇಲ್ಕಂಡ ಉಲ್ಲೇಖ (10) ರ ಈ ಕಛೇರಿಯ ಅಧಿಸೂಚನೆಗೆ ಅನುಗುಣವಾಗಿ ಬಂದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅವುಗಳ ಪೈಕಿ ಉಲ್ಲೇಖ (1) ರ ನಿರ್ದೇಶನದಂತೆ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅಂತಹ ಅಭ್ಯರ್ಥಿಗಳಲ್ಲಿ ಏಳನೇ ತರಗತಿ ಪರೀಕ್ಷೆಯಲ್ಲಿ ಹೆಚ್ಚು ಶೇಕಡಾವಾರು ಅಂಕಗಳಿಸಿದವರನ್ನು Merit ಆಧಾರದ ಮೇಲೆ ಮೇಲ್ಕಂಡಂತೆ ವರ್ಗೀಕರಿಸಿದ ಮೀಸಲಾತಿಗೆ ಅನುಗುಣವಾಗಿ ಉಲ್ಲೇಖ (5) ರ ಸರ್ಕಾರದ ಅಧಿಸೂಚನೆ ಅನ್ವಯ 1:1 ರ ಪ್ರಮಾಣದಲ್ಲಿ ಜವಾನರ ಬ್ಯಾಕ್‌ಲಾಗ್ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿಯನ್ನು ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದಕ್ಕಾಗಿ ಈ ಅಭ್ಯರ್ಥಿಗಳು ಸಲ್ಲಿಸಿರುವ ಏಳನೇ ತರಗತಿ ಅಂಕಪಟ್ಟಿ ಜೆರಾಕ್ಸ್ ಪ್ರತಿಗಳನ್ನು ಅಂತಿಮವಾಗಿ ಪರಿಶೀಲನೆ ಮಾಡುತ್ತಿರುವ ಸಮಯದಲ್ಲಿ

(i) ಬ್ಯಾಕ್‌ಲಾಗ್ ಅರ್ಜಿಗಳನ್ನು ಸ್ವೀಕರಿಸುವ ಕೊನೆ ದಿನಾಂಕವನ್ನು 03-07-2004 ಎಂದು ಗೊತ್ತುಪಡಿಸಿದ್ದು, ಸದರಿ ದಿನಾಂಕದ ನಂತರ, ಹಾಗೂ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಮೊದಲು ಹೆಚ್.ಹೆಚ್.ಭಜಂತ್ರಿ ಎಂಬುವರು ದಿನಾಂಕ: 23-04-2005 ರನ್ವಯ ಈ ಕಛೇರಿಗೆ ಸಲ್ಲಿಸಿರುವ ದೂರು ಅರ್ಜಿಯಲ್ಲಿ ಕೆಳಕಂಡವರು ನಕಲಿ (ಖೊಟ್ಟಿ) ಅಂಕಪಟ್ಟಿಗಳನ್ನು ಸಲ್ಲಿಸಿರುತ್ತಾರೆಂದು ಆಪಾದಿಸಿ ಈ ಬಗ್ಗೆ ಸರಿಯಾಗಿ ಪರೀಕ್ಷಿಸಿದಲ್ಲಿ ನಿಜಾಂಶ ಹೊರಗೆ ಬರುತ್ತದೆಂದು ತಿಳಿಸುತ್ತಾ ಈ ಬಗ್ಗೆ ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

1) ಜಂಗನ್ನವರ ಗೋಕಾಕ್ ತಾಲ್ಲೂಕು
2) ಸಣ್ಣೆಲ್ಲಪ್ಪ ನಾಯಕ, ದಾಸನಟ್ಟಿ ತಾಲ್ಲೂಕು ಗೋಕಾಕ್
3) ಪರುಶುರಾಮ ನಾಯಕ ಹುಕ್ಕೇರಿ ತಾಲ್ಲೂಕು
4) ಜಗಮೈನವರ್ ಸವದತ್ತಿ ತಾಲ್ಲೂಕ್
5) ದೂಳಪ್ಪ ಗೋಳ ಬೆಳಗಾವಿ ಜಿಲ್ಲೆ,
6) ನಾಯಕ ತವಗ ಗೋಕಾಕ್
7) ನಾಯಕ ಗೋಕಾಕ್ ತಾಲ್ಲೂಕು

(ii) ಇದೇ ರೀತಿ ಬ್ಯಾಕ್‌ಲಾಗ್ ಅರ್ಜಿಗಳನ್ನು ಸ್ವೀಕರಿಸುವ ಕೊನೆ ದಿನಾಂಕದ ನಂತರ ಅಂದರೆ 3-7-2004 ರ ನಂತರ ಹಾಗೂ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಮೊದಲು ಕೇಚಪ್ಪಾ ಬೇಮಳ ಖೇಡಾ ಹುಮನಾಬಾದ್ ಎಂಬುವರು ದಿನಾಂಕ: 17-06-2005 ರನ್ವಯ ಈ ಕಛೇರಿಗೆ ಸಲ್ಲಿಸಿರುವ ದೂರು ಅರ್ಜಿಯಲ್ಲಿ ಕೆಳಕಂಡವರು ಸಲ್ಲಿಸಿರುವ ಅಂಕಪಟ್ಟಿಗಳು ನಕಲಿಯಾಗಿರುವ ಕಾರಣ ಈ ಬಗ್ಗೆ ಸರಿಯಾಗಿ ಪರಿಶೀಲಿಸಿ ತಪ್ಪನ್ನು ಕಂಡುಹಿಡಿದು ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

1) ಪ್ರಕಾಶ ತಂದೆ ಮಾರುತಿ
2) ಅನೀಲ ತಂದೆ ಸೈಬಣ್ಣಾ
3) ಲಕ್ಷ್ಮಣ ತಂದೆ ತುಕ್ಕಪ್ಪ
4) ಮಲ್ಲಿಕಾರ್ಜುನ ತಂದೆ ಬಸಪ್ಪಾ
5) ಶರಣಪ್ಪ ತಂದೆ ಬಸಪ್ಪ

ಈ ರೀತಿ ಮೇಲ್ಕಂಡಂತೆ ಲಿಖಿತ ದೂರುಗಳು ಬಂದ ಕಾರಣದಿಂದ ಹಾಗೂ ನ್ಯಾಯಯುತವಾಗಿ ಏಳನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಆಯ್ಕೆಗೆ ಅನ್ಯಾಯವಾಗಬಾರದೆಂಬ ಕಾರಣದಿಂದ ಹಾಗೂ ಸ್ವಾಭಾವಿಕ ನ್ಯಾಯ ದೃಷ್ಟಿಯಿಂದ (ಅಂದರೆ Principles of Natural Justice ದೃಷ್ಟಿಯಿಂದ) ಬ್ಯಾಕ್‌ಲಾಗ್ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಮುನ್ನ ದೂರು ಬಂದಿರುವ ಮೇಲ್ಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳನ್ನು ಸೇರಿಸಿಕೊಂಡು ಒಟ್ಟು 573 ಬ್ಯಾಕ್‌ಲಾಗ್ ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸತ್ಯಾಪನೆಗೆ ಒಳಪಡಿಸಲಾಯಿತಾದರೂ ಈ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟರೂ ಸತ್ಯಾಪನೆಗೆ ಒಳಪಡಿಸಿದ ಸದರಿ ನೂರಾರು ಅಂಕಪಟ್ಟಿಗಳ ಬಗ್ಗೆ ಯಾವುದೇ ಮಾಹಿತಿಯಾಗಲೀ ಅಥವಾ ಸತ್ಯಾಪನಾ ವರದಿಗಳಾಗಲೀ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಧಿಕಾರದಿಂದ ಸಕಾಲಕ್ಕೆ ಬಾರದೇ ಇದ್ದುದರಿಂದ ಆಯ್ಕೆ ಪಟ್ಟಿ ಪ್ರಕಟಿಸುವಲ್ಲಿ ವಿಳಂಬವಾಗುತ್ತಿತ್ತು, ಇದಲ್ಲದೇ ಬ್ಯಾಕ್‌ಲಾಗ್ ಆಯ್ಕೆಯ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸರ್ಕಾರದಿಂದ ಮೇಲಿಂದ ಮೇಲೆ ಬರುತ್ತಿದ್ದ ನಿರ್ದೇಶನವನ್ನು ಗಮನಿಸಿ ಹಾಗೂ ಆಯ್ಕೆಯಲ್ಲಾಗುವ ಇನ್ನೂ ಹೆಚ್ಚಿನ ವಿಳಂಬವನ್ನು ತಪ್ಪಿಸುವ ಸದುದ್ದೇಶದಿಂದ ಅಂಕಪಟ್ಟಿಗಳ ಬಗ್ಗೆ ಸತ್ಯಾಪನಾ ವರದಿ ಬಾರದೇ ಇದ್ದಂತಹ ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳ ನೈಜತೆ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಬರುವ ಸತ್ಯಾಪನಾ ವರದಿಯನ್ನು ಕಾಯ್ದಿರಿಸಿ, ಸತ್ಯಾಪನಾ ವರದಿ ಬಂದಂತಹ ಅಭ್ಯರ್ಥಿಗಳ ಹೆಸರಿನ ಜೊತೆಯಲ್ಲೇ ಅಂಕಪಟ್ಟಿಗಳ ಬಗ್ಗೆ ಸತ್ಯಾಪನಾ ವರದಿ ಬಾರದೇ ಇದ್ದಂತಹ ಅಭ್ಯರ್ಥಿಗಳ ಹೆಸರುಗಳನ್ನೂ ಸಹ ಆಯ್ಕೆ ಪಟ್ಟಿಯಲ್ಲಿ ಸೇರಿಸಿ, ಪರಿಶಿಷ್ಟ ಜಾತಿಯ 38 ಅಭ್ಯರ್ಥಿಗಳನ್ನು ಹಾಗೂ ಪರಿಶಿಷ್ಟ ಪಂಗಡದ 34 ಅಭ್ಯರ್ಥಿಗಳನ್ನು ಜವಾನರೆಂದು ತಾತ್ಕಾಲಿಕವಾಗಿ ಆಯ್ಕೆ ಮಾಡಿ ಈ ಎಲ್ಲಾ 72 ಅಭ್ಯರ್ಥಿಗಳ ಈ ತಾತ್ಕಾಲಿಕ ಆಯ್ಕೆಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆಂದು ಷರತ್ತುಗಳನ್ನು ವಿಧಿಸಿ ಉಲ್ಲೇಖ (5) ರ ಸರ್ಕಾರದ ಅಧಿಸೂಚನೆ ಅನ್ವಯ 1:1 ರ ಪ್ರಮಾಣದಲ್ಲಿ 36 ಅಭ್ಯರ್ಥಿಗಳಿರುವ ಜವಾನರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯನ್ನು ಮತ್ತು 36 ಅಭ್ಯರ್ಥಿಗಳಿರುವ ತಾತ್ಕಾಲಿಕ ಆಯ್ಕೆಯ ಹೆಚ್ಚುವರಿ ಪಟ್ಟಿಯನ್ನು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಉಲೇಖ (12) ರನ್ವಯ ದಿನಾಂಕ:16–09–2005 ರಂದು ಪ್ರಕಟಿಸಲಾಯಿತು ಹಾಗೂ 30 ದಿನಗಳೊಳಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಯಿತು.

**ದಿನಾಂಕ: 16–9–05 ರಂದು ಪ್ರಕಟಿಸಿರುವ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ವಿಧಿಸಿದ ಷರತ್ತುಗಳು:**

1. ಅಂಕಪಟ್ಟಿಗಳ ನೈಜತೆ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಇನ್ನೂ ಸತ್ಯಾಪನಾ ವರದಿ ಬಾರದೇ ಇದ್ದಂತಹ ಅಭ್ಯರ್ಥಿಗಳ ವಿಷಯದಲ್ಲಿ ಒಂದು ವೇಳೆ ಈ ಅಭ್ಯರ್ಥಿಗಳು ಸಲ್ಲಿಸಿರುವ 7ನೇ ತರಗತಿ ಅಂಕಪಟ್ಟಿಗಳು (ಖೊಟ್ಟಿ) ನಕಲಿ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಧಿಕಾರದಿಂದ ವರದಿ ಬಂದಲ್ಲಿ ಯಾವ ಕಾರಣವನ್ನು ನೀಡದೇ ಹಾಗೂ ಯಾವ ಸೂಚನೆಯನ್ನು ನೀಡದೇ ಇಂತಹ ಅಭ್ಯರ್ಥಿಗಳ ಬ್ಯಾಕ್‌ಲಾಗ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹ ಅಭ್ಯರ್ಥಿಗಳ ಹೆಸರನ್ನು ಯಾವ ಕಾರಣ ನೀಡದೇ ಹಾಗೂ ಯಾವ ಸೂಚನೆ ನೀಡದೇ ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದಲೂ ಸಹ ಶಾಶ್ವತವಾಗಿ ಕೈಬಿಡಲಾಗುವುದು ಅಂದರೆ ಶಾಶ್ವತವಾಗಿ ತೆಗೆದುಹಾಕಲಾಗುವುದು. ಇದಕ್ಕೆ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.
2. ಹಾಗೂ ಮೇಲ್ಕಂಡ ಕಾರಣಗಳಿಂದ ಈ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಇಂತಹ ಅಭ್ಯರ್ಥಿಗಳು ಜವಾನರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲ ಹಾಗೂ ಜವಾನರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಸಾಧಿಸತಕ್ಕದ್ದಲ್ಲ.
3. ಒಂದು ವೇಳೆ 7ನೇ ತರಗತಿಯ ಅಂಕಪಟ್ಟಿಗಳು (ಖೊಟ್ಟಿ) ನಕಲಿ ಅಂಕಪಟ್ಟಿಗಳೆಂದು ವರದಿ ಬಂದಂತಹ ಅಭ್ಯರ್ಥಿಗಳನ್ನು ಈ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಶಾಶ್ವತವಾಗಿ ತೆಗೆದು ಹಾಕಿದಾಗ ಉಳಿದ ಅಭ್ಯರ್ಥಿಗಳ ಆಯ್ಕೆ ಕ್ರಮಾಂಕದಲ್ಲಿ ಹಾಗೂ ಅಭ್ಯರ್ಥಿಗಳ ಮೀಸಲಾತಿ ವರ್ಗೀಕರಣದಲ್ಲಿನ ಆಯ್ಕೆಯಲ್ಲಿಯೂ ಬದಲಾವಣೆಯಾಗುತ್ತದೆ. ಇದಕ್ಕೆ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.
4. **16–09–2005 ರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳ ನೈಜತೆ ಬಗ್ಗೆ ವರದಿ ಬಂದ ನಂತರವೇ** ಅವುಗಳೆಲ್ಲವನ್ನು ಇನ್ನೊಮ್ಮೆ ಕೂಲಕುಂಷವಾಗಿ ಪರಿಶೀಲಿಸಿ ನಕಲಿ (ಖೊಟ್ಟಿ) ಅಂಕಪಟ್ಟಿಗಳನ್ನು ಸಲ್ಲಿಸಿರುವ ಅಭ್ಯರ್ಥಿಗಳ ಹೆಸರುಗಳನ್ನು ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ

ಶಾಶ್ವತವಾಗಿ ತೆಗೆದು ಹಾಕಿದ ನಂತರವೇ ಉಳಿದವರನ್ನು ಮೀಸಲಾತಿಗೆ ಅನುಗುಣವಾಗಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ ಅಂತಿಮ ಆಯ್ಕೆ ಪಟ್ಟಿಯನ್ನು ಕಾನೂನು ರೀತ್ಯಾ ಪ್ರಕಟಿಸಲಾಗುವುದು. ಇದಕ್ಕೆ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.

5. ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರದಿಂದ ಸತ್ಯಾಪನೆಗೆ ಒಳಪಡುತ್ತವೆ.
6. ಒಂದು ವೇಳೆ ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿಗಳು ಮತ್ತು ಮೀಸಲಾತಿ ಪ್ರಮಾಣ ಪತ್ರಗಳು ಹಾಗೂ ಜಾತಿ ಪ್ರಮಾಣ ಪತ್ರಗಳು ಸುಳ್ಳು ಅಥವಾ ನಕಲಿ ಎಂದು ದೃಢಪಟ್ಟಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಶಾಶ್ವತವಾಗಿ ಯಾವುದೇ ಸೂಚನೆ ನೀಡದೇ ರದ್ದುಪಡಿಸಲಾಗುವುದು.
7. 16-09-2005 ರ ತಾತ್ಕಾಲಿಕ ಆಯ್ಕೆ ಪಟ್ಟಿ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆಯು ರದ್ದಾದ ಪಕ್ಷದಲ್ಲಿ ಅಂತಹವರ ಬದಲಿಗೆ ಅರ್ಹತೆ ಮತ್ತು ಮೀಸಲಾತಿ ಆಧಾರದ ಮೇಲೆ ಬೇರೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

(a) ಈ ರೀತಿ ಮೇಲ್ಕಂಡಂತೆ ಷರತ್ತುಗಳನ್ನು ವಿಧಿಸಿ ಉಲ್ಲೇಖ (12) ರನ್ವಯ ದಿನಾಂಕ:16-09-2005 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರವೂ ಮಂಜುನಾಥ S/oಶಂಕ್ರಯ್ಯ, ಕೋಡಿಹಳ್ಳಿ ಕನಕಪುರ ಎಂಬುವರು ಸಲ್ಲಿಸಿರುವ ದೂರು ಅರ್ಜಿಯು ಈ ಕಛೇರಿಗೆ ದಿನಾಂಕ:07-10-2005 ರಂದು ಬಂದಿದ್ದು, ಸದರಿ ದೂರು ಅರ್ಜಿಯಲ್ಲಿ ದಿನಾಂಕ:16-09-2005 ರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಗಳು ಏಳನೇ ತರಗತಿಯ ನಕಲಿ (ಖೊಟ್ಟಿ) ಅಂಕಪಟ್ಟಿಗಳನ್ನು ಸಲ್ಲಿಸಿರುತ್ತಾರೆಂದು, ಆದ್ದರಿಂದ ಇಂತಹ ಅಂಕಪಟ್ಟಿಗಳ ಸತ್ಯಾಪನೆಯನ್ನು ಕರಾರುವಾಕ್ಕಾಗಿ ನಡೆಸಿ, ಕಠಿಣ ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

1. ಶ್ರೀನಿವಾಸ, ಅರಕೆರೆ ಗ್ರಾಮ, ಕನಕಪುರ ತಾಲ್ಲೂಕು (SC)
2. ಎನ್ ಮಂಜಪ್ಪ, ಬಸವನಹಳ್ಳಿ, ಹೊನ್ನಾಳಿ ತಾಲ್ಲೂಕು, (SC)
3. ಪಾವಡೆಪ್ಪ, ನಿಡಗುಂದಿ, ಬಸವನಬಾಗೇವಾಡಿ (SC)
4. ಹನುಮಪ್ಪ ಹಂಡರಗಲ್ಲಿ, ಚಿಕ್ಕ ಮ್ಯಾಗೇರಿ, ಬಾಗಲಕೋಟೆ ತಾ: (SC)
5. ಭೀಮಪ್ಪ, ಚಿಕ್ಕಮ್ಯಾಗೇರಿ, ಬಾಗಲಕೋಟೆ ತಾಲ್ಲೂಕು (SC)
6. ರವೀಂದ್ರನಾಥ, ತಾಂಬಾ, ಇಂಡಿ ತಾಲ್ಲೂಕು (SC)

(b) ಇದೇ ರೀತಿ ಮೇಲ್ಕಂಡಂತೆ ಷರತ್ತುಗಳನ್ನು ವಿಧಿಸಿ ಉಲ್ಲೇಖ (12) ರನ್ವಯ ದಿನಾಂಕ: 16-9-05 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರವೂ ಶ್ರವಣ ಯ. ಸಿಂಗ್ಯಾಗೋಳ ಜಂಬಗಿ ಕೆ.ಡಿ. ಜಮಖಂಡಿ ತಾಲ್ಲುಕ್ ಇವರು ದಿನಾಂಕ: 6-10-06 ರನ್ವಯ ಸಲ್ಲಿಸಿರುವ ದೂರು ಅರ್ಜಿಯಲ್ಲಿ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯು ನಕಲಿ ಅಂಕಪಟ್ಟಿಯನ್ನು ಸೃಷ್ಟಿಸಿಕೊಟ್ಟಿರುತ್ತಾರೆಂದು, ಆದ್ದರಿಂದ ಇವರ ಅಂಕಪಟ್ಟಿಯನ್ನು ಇನ್ನೊಮ್ಮೆ ಪರಿಶೀಲಿಸುವಂತೆ ವಿನಂತಿಸಿರುತ್ತಾರೆ.

(1) ಬಸವಂತ ಮಳಪ್ಪ ಮಾದರ್ (SC)

(c) ಇದೇ ರೀತಿ ಮೇಲ್ಕಂಡಂತೆ ಷರತ್ತುಗಳನ್ನು ವಿಧಿಸಿ ಉಲ್ಲೇಖ (12) ರನ್ವಯ ದಿನಾಂಕ: 16-09-2005 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ (i)ಆರ್.ಹೆಚ್.ಪಾಟೀಲ್ ಮತ್ತು ಇತರೆ ನಾಲ್ಕು ಜನರು ಜಂಟಿಯಾಗಿ ಹಾಗೂ (ii)ಕವಿತಾ ಶಿವಪ್ಪ ವಾಲಿಕಾರ ಸಾ:ಪೋ: ವನಹಳ್ಳಿ ಗ್ರಾಮ, ತಾಲ್ಲೂಕು ಮುದ್ದೇಬಿಹಾಳ ಎಂಬುವರು ಮತ್ತು (iii) ಸರಿತಾ ಕೆ.ವಾಲಿಕಾರ ಮತ್ತು ಇತರೆ ಐದು ಜನರು ಜಂಟಿಯಾಗಿ ಸಲ್ಲಿಸಿರುವ ಈ ಮೂರು ದೂರು ಅರ್ಜಿಗಳು ಈ ಕಛೇರಿಗೆ ದಿನಾಂಕ: 14-10-2005 ಮತ್ತು 14-10-2005 ಹಾಗೂ 13-10-07 ರಂದು ಬಂದಿದ್ದು, ಸದರಿ ದೂರು ಅರ್ಜಿಯಲ್ಲಿ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯು ಏಳನೇ ತರಗತಿಯ ನಕಲಿ (ಖೊಟ್ಟಿ) ಅಂಕಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ಆದ್ದರಿಂದ ಇವರ ಅಂಕಪಟ್ಟಿಯನ್ನು ಇನ್ನೊಮ್ಮೆ ಪರಿಶೀಲಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.

(1) ಮಹಾದೇವಿ ಬಸಪ್ಪ ಸುತಗುಂಡಾರ,ಸಾ:ಧವಳಗಿ, ತಾ: ಮುದ್ದೇಬಿಹಾಳ (ST)

(d) ಇದೇ ರೀತಿ ಮೇಲ್ಕಂಡಂತೆ ಷರತ್ತುಗಳನ್ನು ವಿಧಿಸಿ ಉಲ್ಲೇಖ (12) ರನ್ವಯ ದಿನಾಂಕ: 16-09-2005 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಪ್ರೆಸಿಡೆಂಟ್ ಜಿಲ್ಲಾ ದಲಿತ ಸಂಘರ್ಷ ಸಮಿತಿ (ರಿ) ಧಾರವಾಡ ಇವರು ದಿನಾಂಕ: 20-10-2006 ರಂದು ಸಲ್ಲಿಸಿರುವ ದೂರು ಅರ್ಜಿಯಲ್ಲಿ ಕೆಳಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಯು ನಕಲಿ ಅಂಕಪಟ್ಟಿಯನ್ನು ಸಲ್ಲಿಸಿ ಅರ್ಜಿ ಹಾಕಿದ್ದಾರೆಂದು ಇದರಿಂದ ಬೇರೆ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆಯಾದ್ದರಿಂದ ಈ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಮನವಿ ಸಲ್ಲಿಸಿರುತ್ತಾರೆ.

(1) ಭೀಮಪ್ಪ ಖಂಡಪ್ಪ ಲಮಾಣಿ ಸಾ: ಕಜ್ಜರಿ ತಾ: ರಾಣಿಬೆನ್ನೂರು. (SC)

(1) ಈ ರೀತಿ ಬ್ಯಾಕ್‌ಲಾಗ್ ಅಭ್ಯರ್ಥಿಗಳ ವಿರುದ್ಧ ಮೇಲ್ಕಂಡಂತೆ ಲಿಖಿತ ದೂರುಗಳು ಬಂದ ಕಾರಣದಿಂದ ಉಲ್ಲೇಖ (12) ರನ್ವಯ ದಿನಾಂಕ: 16-09-2005 ರಂದು ಪ್ರಕಟಿಸಿದ ತಾತ್ಕಾಲಿಕ ಆಯ್ಕೆಪಟ್ಟಿಯ ಮೂಲಕ ಆಯ್ಕೆಯಾದ ಮೇಲಿನ ಕಂಡಿಕೆ (a) ಮತ್ತು (b) ಯಲ್ಲಿ ಕಂಡು ಬಂದ ಮೇಲ್ಕಂಡ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಏಳನೇ ತರಗತಿ ಅಂಕಪಟ್ಟಿಗಳನ್ನು ಹಾಗೂ ನ್ಯಾಯಯುತವಾಗಿ 7ನೇ ತರಗತಿಯಲ್ಲಿ ತೇರ್ಗಡೆಯಾಗಿರುವ ಅರ್ಹ ಅಭ್ಯರ್ಥಿಗಳಿಗೆ ಯಾವ ರೀತಿಯಲ್ಲೂ ಅನ್ಯಾಯವಾಗಬಾರದೆಂಬ ಸದ್ದುದ್ದೇಶದಿಂದ ಉಲ್ಲೇಖ (12) ರನ್ವಯ ದಿನಾಂಕ: 16-09-05 ರಂದು ಪ್ರಕಟಿಸಿರುವ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯ ಮೂಲಕ ಆಯ್ಕೆಯಾದ ಎಲ್ಲಾ 72 ಬ್ಯಾಕ್‌ಲಾಗ್ ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳನ್ನು ಅವುಗಳ ಸತ್ಯಾಸತ್ಯತೆ ತಿಳಿಯುವ ಸಲುವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸತ್ಯಾಪನೆಗೆ ಪುನಃ ಕಳುಹಿಸಲಾಯಿತು.

ಈ ರೀತಿ ದಿನಾಂಕ: 16-9-05 ರಂದು ಪ್ರಕಟಿಸಿದ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯ ಮೂಲಕ ಆಯ್ಕೆಯಾದ 72 ಅಭ್ಯರ್ಥಿಗಳನ್ನು ಸೇರಿಸಿಕೊಂಡು ಒಟ್ಟು 573 ಅಭ್ಯರ್ಥಿಗಳ 7ನೇ ತರಗತಿ ಅಂಕಪಟ್ಟಿಗಳನ್ನು ಸತ್ಯಾಪನೆಗೆ ಒಳಪಡಿಸಿದ್ದು, ಈ ಪೈಕಿ ದಿನಾಂಕ: 16-09-2005 ರಂದು ಉಲ್ಲೇಖ (12)ರನ್ವಯ ಪ್ರಕಟಿಸಿರುವ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯ ಮೂಲಕ ಆಯ್ಕೆಯಾದ 72 ಅಭ್ಯರ್ಥಿಗಳ ಪೈಕಿ ಇದಕ್ಕೆ ಲಗತ್ತಿಸಿರುವ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಏಳನೇ ತರಗತಿ ಅಂಕಪಟ್ಟಿಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಪುನರ್ ಸತ್ಯಾಪನೆಯಿಂದ (ಖೊಟ್ಟಿ) ನಕಲಿಯಾಗಿರುತ್ತವೆಂದು ವರದಿಗಳು ಬಂದಿರುವ ಹಿನ್ನಲೆಯಲ್ಲಿ ಇದಕ್ಕೆ ಲಗತ್ತಿಸಿರುವ ಸದರಿ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳು ಈ ಇಲಾಖೆಯ ಜವಾನರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆ ಹೊಂದುವ ಸಲುವಾಗಿ ಉದ್ದೇಶ ಪೂರ್ವಕವಾಗಿ ನಕಲಿ (ಖೊಟ್ಟಿ) ಅಂಕಪಟ್ಟಿಗಳನ್ನು ಸಲ್ಲಿಸಿ ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ನಿಯಮ 20 ಅನ್ನು ಉಲ್ಲಂಘಿಸಿ ಅಪರಾಧ ಎಸಗಿರುವುದರಿಂದ ಸದರಿ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಬ್ಯಾಕ್‌ಲಾಗ್ ಅರ್ಜಿಗಳನ್ನು ಉಲ್ಲೇಖ (14) ರನ್ವಯ ತಿರಸ್ಕರಿಸಿ ಉಲ್ಲೇಖ (12) ರನ್ವಯ ದಿನಾಂಕ: 16-09-05 ರಂದು ಮಾಡಿದ ಸದರಿ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಯನ್ನು ಕಾನೂನು ರೀತ್ಯಾ ಉಲ್ಲೇಖ (14) ರನ್ವಯ ಶಾಶ್ವತವಾಗಿ ರದ್ದುಪಡಿಸಿ ಹಾಗೂ ಸದರಿ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಹೆಸರುಗಳನ್ನು ಉಲ್ಲೇಖ (12)ರನ್ವಯ ದಿನಾಂಕ:16-09-2005 ರಂದು ಪ್ರಕಟಿಸಿರುವ ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯಿಂದ ಶಾಶ್ವತವಾಗಿ ತೆಗೆದುಹಾಕಿ ಸ್ವಾಭಾವಿಕ ನ್ಯಾಯ ದೃಷ್ಟಿಯಿಂದ ಅಂದರೆ Principles of Natural Justice ದೃಷ್ಟಿಯಿಂದ ಉಲ್ಲೇಖ (12) ರನ್ವಯ ದಿನಾಂಕ: 16-09-2005 ರಂದು ಪ್ರಕಟಿಸಿರುವ ಈ ಇಲಾಖೆಯ ಜವಾನರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ರದ್ದುಪಡಿಸುತ್ತಾ (Cancel ಮಾಡುತ್ತಾ) ಈ ಇಲಾಖೆಯಲ್ಲಿ ಗುರುತಿಸಲ್ಪಟ್ಟ ಪರಿಶಿಷ್ಟ ಜಾತಿಯ ಹತ್ತೊಂಭತ್ತು ಮತ್ತು ಪರಿಶಿಷ್ಟ ಪಂಗಡದ ಹದಿನೇಳು ಈ ರೀತಿ ಒಟ್ಟಾರೆ ಗುರುತಿಸಲ್ಪಟ್ಟ ಮೂವತ್ತಾರು ಜವಾನರ ಬ್ಯಾಕ್‌ಲಾಗ್ ಹುದ್ದೆಗಳಿಗಾಗಿ ಇದಕ್ಕೆ ಲಗತ್ತಿಸಿರುವ Annexure-B ಯಲ್ಲಿ ವಿವರಿಸಿರುವ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಬದಲಿಗೆ ಉಲ್ಲೇಖ (1) ರಲ್ಲಿನ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಇದಕ್ಕೆ ಲಗತ್ತಿಸಿರುವ Annexure-C ಯಲ್ಲಿ ವಿವರಿಸಿರುವ ಪರಿಶಿಷ್ಟ ಜಾತಿಯ 38 ಮತ್ತು ಪರಿಶಿಷ್ಟ ಪಂಗಡದ 34 ಅಭ್ಯರ್ಥಿಗಳಿರುವ ಜವಾನರ ಪರಿಷ್ಕೃತ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯನ್ನು ಮತ್ತು ಪರಿಷ್ಕೃತ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯನ್ನು ಉಲ್ಲೇಖ (5) ರನ್ವಯ 1:1 ರ ಪ್ರಮಾಣದಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅಭ್ಯರ್ಥಿಗಳ ಮಾಹಿತಿಗಾಗಿ ಪುನಃ ಉಲ್ಲೇಖ (14) ರನ್ವಯ ದಿನಾಂಕ:21-07-2010 ರಂದು ಪ್ರಕಟಿಸಿ ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು (30) ಮೂವತ್ತು ದಿನಗಳ ಒಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಯಿತು.

## ANNEXURE-B

| ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST | ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST |
|---|---|---|---|---|---|
| 1 | ಚಂದ್ರಕಾಂತ ಮಲ್ಲಪ್ಪ ಗುಡಗುಂಟಿ ಕಾರಾಕುಟ್ಟಿ ಮಿಷನ್ ಹತ್ತಿರ, Z.P. ಆಫೀಸ್ ಮೈನ್ ರೋಡ್, ಸುರಪುರ, ಜಿಲ್ಲೆ: ಗುಲ್ಬರ್ಗಾ | SC | 6 | ಅನಿಲ S/oಜೈವಂತ ಸಾಂಗಳೆ ಭೌದ್ಧನಗರ, ಚಿಟಗುಪ್ಪಾ ಹುಮ್ನಾಬಾದ್ ತಾ: ಜಿಲ್ಲೆ: ಬೀದರ್ – 585412 | SC |
| 2 | ತಿರುಮಲೇಶ @ ತಿಮ್ಮಪ್ಪ ವೆಂಕಪ್ಪ ಜಮಾದಾರ್ ಹೆಗಾಡಿ ಪ್ಲಾಟ್ ಮುಕ್ಕಾಂ ಪೋಸ್ಟ್: ಮಹಾಲಿಂಗಪುರ ತಾಲ್ಲೂಕು:ಮುಧೋಳ ಜಿಲ್ಲೆ: ಬಾಗಲಕೋಟೆ | SC | 7 | ಕೆ.ಎಸ್.ಹನುಮಂತಪ್ಪ S/o ಸಿದ್ದಪ್ಪ ಕಂಚಿಗಾರರ ಬಸವನಹಳ್ಳಿ ಅಂಚೆ ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆ | SC |
| 3 | ಶ್ರೀನಿವಾಸ ವಿ. S/o ಲೇ.ವೆಂಕಟಯ್ಯ ಅರಕೆರೆ ಗ್ರಾಮ ಕೋಡಿಹಳ್ಳಿ ಹೋಬಳಿ ಮತ್ತು ಪೋಸ್ಟ್ ಕನಕಪುರ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ | SC | 8 | ಭೀಮಪ್ಪ ಸಂಗಪ್ಪ ಚಲವಾದಿ ಮುಕ್ಕಾಂ ಪೋಸ್ಟ್ ಚಿಕ್ಕಮ್ಯಾಗೇರಿ ತಾಲ್ಲೂಕು ಜಿಲ್ಲೆ ಬಾಗಲಕೋಟೆ | SC |
| 4 | ಎನ್. ಮಂಜಪ್ಪ S/oನರಸಿಂಹಪ್ಪ ಬಸವನಹಳ್ಳಿ ಅಂಚೆ ಬಸವನಹಳ್ಳಿ ಹೊನ್ನಾಳಿ ತಾ: ದಾವಣಗೆರೆ ಜಿಲ್ಲೆ | SC | 9 | ಶರಣಪ್ಪ S/oಬಸಪ್ಪಾ ಮುಕ್ಕಾಂ: ಮಂಗಲಗಿ ತಾಲ್ಲೂಕು ಹುಮ್ನಾಬಾದ್ ಜಿಲ್ಲೆ: ಬೀದರ್ | SC |
| 5 | ಪಾವಡೆಪ್ಪ ಶಿವಪ್ಪ ಚಳ್ಳಮರದ ಪೋಸ್ಟ್ ನಿಡಗುಂಬಿ ತಾ: ಬಸವನಬಾಗೇವಾಡಿ ಜಿಲ್ಲೆ: ಬಿಜಾಪುರ–586213 | SC | 10 | ಶಿವಕುಮಾರ್ ಹೆಚ್.ಎನ್. S/oನರಸಿಂಹಪ್ಪ ಬಸವನಹಳ್ಳಿ ಅಂಚೆ, ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆ | SC |
| 11 | ಮಹದೇವಮ್ಮ. ಆರ್. ನಂ.6, C/O ವೈ. ವೆಂಕಟಸ್ವಾಮಿ ಬಿಲ್ಡಿಂಗ್, ಆಶ್ರಮ ರಸ್ತೆ, ಆಂಜನೇಯ ದೇವಸ್ಥಾನದ ಎದುರು, ಎಲಚೇನಹಳ್ಳಿ, ಕನಕಪುರ ಮುಖ್ಯರಸ್ತೆ, ಜೆ.ಪಿ.ನಗರ ಅಂಚೆ ಬೆಂಗಳೂರು–560078 | SC | 19 | ಪ್ರಕಾಶ S/O ಮಾರುತಿ ದಿನಕರ್ ಮುಕ್ಕಾಂ:ಪೋಸ್ಟ್ ಮಂಗಲಗಿ ತಾಲ್ಲೂಕು ಹುಮ್ನಾಬಾದ್ ಜಿಲ್ಲೆ: ಬೀದರ್ | SC |
| 12 | ಲೀಲಾವತಿ ಬಿ D/o ಲೇಟ್ ಬಿ. ಬಸವಯ್ಯ C/o ರುಕ್ಮಿಣಿ ಗೌಡರು ನಂ. 425 L.N, ಸ್ಕೂಲ್ ಕಾಮಾಕ್ಷಿಪಾಳ್ಯ ಬೆಂಗಳೂರು–560079 | SC | 20 | ಭಾಜು ಶೇವು ರಾಠೋಡ್ ಮುಕ್ಕಾಂಪೋಸ್ಟ್ ಬರಟಗಿ ತಾಂಡಾ ನಂ.–1 ತಾಲ್ಲುಕ್ ಜಿಲ್ಲೆ ಬಿಜಾಪುರ | SC |

| ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST | ಕ್ರ ಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST |
|---|---|---|---|---|---|
| 13 | ಮಹಾಂತೇಶಪ್ಪ ಹೆಚ್. S/Oಟಿ. ಹನುಮಂತಪ್ಪ ವಿಡುಪನಕುಂಟೆ ಮೀರಾಸಾಬಿಹಳ್ಳಿ ಅಂಚೆ ಚಳ್ಳಕೆರೆ ತಾಲ್ಲೂಕ್ | SC | 21 | ಲಕ್ಷ್ಮಣ ಜಾಬನೂರ ಮುಕ್ಕಾಂ: ಮಂಗಲಗಿ ತಾಲ್ಲುಕ್: ಹುಮ್ನಾಬಾದ್ ಜಿಲ್ಲೆ: ಬೀದರ್ | SC |
| 14 | ಸುಮನ ಬಾಳಾರಾಮ ಕಲಾಂಗದೆ MIGI-35 KHB ಕಾಲನಿ ನವನಗರ, ಹುಬ್ಬಳ್ಳಿ–580025 | SC | 22 | ಹನುಮಪ್ಪ ಕಂಟಪ್ಪ ಹೊಸಮನಿ ಮುಕ್ಕಾಂ: ಹಂಡರಗಲ್ಲಿ ಪೋಸ್ಟ್:ಚಿಕ್ಕಮ್ಯಾಗೇರಿ ತಾಲ್ಲೂಕು:ಜಿಲ್ಲೆ: ಬಾಗಲಕೋಟೆ | SC |
| 15 | ಭಾರತಿ ಶ್ರೀಮಂತ ಮಸೂತಿ W No. 6 ಸ್ಟೇಷನ್ ರೋಡ್ ಜುಲೈಗಲ್ಲಿ, ಬಿಜಾಪುರ | SC | 23 | ರವೀಂದ್ರನಾಥ ರಾವುತಪ್ಪ ನಡುಗಡ್ಡಿ ಮುಕ್ಕಾಂ:ಪೋಸ್ಟ್ ತಾಂಬಾ ತಾಲ್ಲೂಕು: ಇಂಡಿ, ಜಿಲ್ಲೆ: ಬಿಜಾಪುರ | SC |
| 16 | ರಾಜ ಕುಲಶೇಖರ್ C/O ಚಿನ್ನಪ್ಪ ETCM ಮನೆ ನಂ. 817 1ನೇ ಮುಖ್ಯರಸ್ತೆ ಗಾಂಧಿನಗರ ಕೋಲಾರ | SC | 24 | ದುರ್ಗರಾಜ ಭೀಮಪ್ಪ ದಡ್ಡಿಮನಿ ಪೋಸ್ಟ್: ಮಹಾಲಿಂಗಪುರ ಹರಿಜನಗಲ್ಲಿ ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ–587312 | SC |
| 17 | ಅನಿಲ ಕುಮಾರ S/Oಸಾಯಿಬಣ್ಣಾ ತುಮಕುಂಟೆ ಮುಕ್ಕಾಂ:ಪೋಸ್ಟ್: ಮಂಗಲಗಿ, ತಾಲ್ಲೂಕು ಹುಮ್ನಾಬಾಡ್ ಜಿಲ್ಲೆ: ಬೀದರ್ | SC | 25 | ಬಸಪ್ಪ ಸಂಗವ್ವ ಹೊಲೇರ ಮುಕ್ಕಾಂ:ಪೋಸ್ಟ್ ಚಿಕ್ಕಮ್ಯಾಗೇರಿ ತಾಲ್ಲೂಕು:ಜಿಲ್ಲೆ: ಬಾಗಲಕೋಟೆ | SC |
| 18 | ಮಾರಪ್ಪ ಬಿ. ವಿ. ಪಾಳ್ಯ ಪೋಸ್ಟ್ ವಿ. ಪಾಳ್ಯ ಚಿತ್ರದುರ್ಗ ತಾಲ್ಲೂಕ್ | SC | 26 | ಯಲ್ಲಪ್ಪ ಚಂದ್ರವ್ವ ಶಿರೋಳ ಮುಕ್ಕಾಂ:ಪೋಸ್ಟ್ ನಾವಲಗಿ ತಾಲ್ಲೂಕು:ಜಮಖಂಡಿ ಜಿಲ್ಲೆ: ಬಾಗಲಕೋಟೆ | SC |
| 27 | ಪರಶುರಾಮ್ ಲಾಲಪ್ಪ ಜಾಧವ್ ಅಂಚೆ ವಸತಿ ಹವೇಲಿ ತಾ: ಜಿಲ್ಲೆ: ಬಾಗಲಕೋಟೆ | SC | 36 | ರವಿ ಹೆಚ್. S/oಹನುಮಯ್ಯ ಹಂದಿಗನಡು ಬರಕನಹಾಲು ಅಂಚೆ ಹುಳಿಯಾರು ಹೋಬಳಿ ಸಿ.ಎನ್. ಹಳ್ಳಿ ತಾ: ತುಮಕೂರು ಜಿಲ್ಲೆ | ST |
| 28 | ಸುವರ್ಣಾ ಕಾಶವ್ವ ಗಿರವ್ವಗೋಳ ಪೋಸ್ಟ್ ಮಹಾಲಿಂಗಪುರ (ಹರಿಜನ ಗಲ್ಲಿ) ತಾ: ಮುಧೋಳ ಜಿಲ್ಲೆ: ಬಾಗಲಕೋಟೆ | SC | 37 | ನಕುಲಪ್ಪ ನಿಂಗಪ್ಪ ಓಲೇಕಾರ ಸಾ: ಸತ್ತಿಗೇಹಳ್ಳಿ ಪೋಸ್ಟ್ ಶಿರಗಂಬಿ ತಾ: ಹಿರೇಕೆರೂರು ಜಿಲ್ಲೆ: ಹಾವೇರಿ–581116 | ST |
| 29 | ಶಾಂತಾ W/O ಕಂಟಿಪ್ಪಾ ಹೊಸಮನೆ ನಂ. 7–3–58 ಹಳೆ ಮನೆ ನಂ. 7–3–35 ಸಾ ಭೀಮಾನಗರ ಬೀದರ್–585401 | SC | 38 | ಬಸವರಾಜ S/oದತ್ತು ಮೇಸಾಲೆ ಮುಕ್ಕಾಂ ನಸೀರವಾಡಿ ಪೋಸ್ಟ್ ತಡಕಲ್ ತಾ: ಆಳಂದ ಜಿಲ್ಲೆ: ಗುಲ್ಬರ್ಗಾ | ST |

| ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST | ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST |
|---|---|---|---|---|---|
| 30 | ಅನಸೂಯ W/O ಬಸಪ್ಪ ಚಾಮನಾಳ ಪೋಸ್ಟ್: ಚಾಮನಾಳ ತಾ: ಶಹಾಪುರ,ಜಿಲ್ಲೆ: ಗುಲ್ಬರ್ಗಾ | SC | 39 | ಶಿವಶಂಕರ S/oಭೀಮರಾಯ ಚನ್ನೂರ C/o ನರಸಿಂಹ ನಾಯಕ ಇನಾಂದಾರ್ ಮ್ಯಾಗೇರಿ ಓಣಿ, ಸುರಪುರ ಜಿಲ್ಲೆ: ಗುಲ್ಬರ್ಗಾ | ST |
| 31 | ಟಿ. ಕಸ್ತೂರಿ ಟಿ. ತೇಜಪ್ಪ ಪೋಸ್ಟ್: ತೆಲಗಿ ತಾ: ಬಸವನಬಾಗೇವಾಡಿ ಜಿಲ್ಲೆ: ಬಿಜಾಪುರ | SC | 40 | ರುಕ್ಮಿಣಿ W/o ಸೋಮಪ್ಪ ಹೊಸಮನಿ ರೂಂ. ನಂ. VII 6/A ಪೋಸ್ಟ್ BTDA ಕಾಲನಿ, ತಾ: ಬಾಗಲಕೋಟೆ | ST |
| 32 | ಶ್ರವಣ ವೈ. ಸಿಂಗ್ಯಾಗೋಳ ಮುಕ್ಕಾಂ ಪೋಸ್ಟ್ ಜಂಬಗಿ ಕೆ.ಡಿ. ತಾಲ್ಲುಕ್: ಜಮಖಂಡಿ ಜಿಲ್ಲೆ: ಬಾಗಲಕೋಟೆ–586126 | SC | 41 | ಹೆಚ್.ಲಕ್ಷ್ಮಮ್ಮ W/O ಈಶ್ವರ ಬಿ.ಹೆಚ್. ರಸ್ತೆ, ವೈ.ಎನ್. ಹೊಸಕೋಟೆ, ಪಾವಗಡ ತಾಲ್ಲುಕು | ST |
| 33 | ಸಣ್ಣೆಲ್ಲಪ್ಪಾ ಲಕ್ಷ್ಮಣ ನಾಯಕ ಮುಕ್ಕಾಂ ದಾಸನಹಟ್ಟಿ, ಪೋಸ್ಟ್ ಕುಂಡರಗಿ ತಾ: ಗೋಕಾಕ್ ಜಿಲ್ಲೆ: ಬೆಳಗಾಂ | ST | 42 | ಪಿ. ಗಾಯತ್ರಮ್ಮ C/o ಜಯಪ್ರಕಾಶ್ ಭದ್ರಾತಾ ಹಾಗೂ ಜಾಗೃತಾಧಿಕಾರಿ ಕ.ರಾ.ರ.ಸಾ.ಸಂ. ಬಾರೆಬೈಲ್ ಕುಂಟಿಕಾನ ಮಂಗಳೂರು ದಕ್ಷಿಣ ಕನ್ನಡ–575004 | ST |
| 34 | ದಿಗಂಬರ ಮೇಕಾಲೆ ಮುಕ್ಕಾಂ ನಸೀರವಾಡಿ ಪೋಸ್ಟ್ ತಡಕಲ್ ತಾ: ಆಳಂದ ಜಿಲ್ಲೆ: ಗುಲ್ಬರ್ಗಾ | ST | 43 | ಲಕ್ಷ್ಮಿದೇವಿ N. ಕಂಚಿಕೇರಿ ಮುಕ್ಕಾಂ ಪೋಸ್ಟ್ ಹಿರೇಬಿದರಿ ತಾ: ರಾಣಿಬೆನ್ನೂರು, ಜಿಲ್ಲೆ: ಹಾವೇರಿ | ST |
| 35 | ಬಸವರಾಜ ಕೊರಳ್ಳಿ ಮುಕ್ಕಾಂ ನಸೀರವಾಡಿ ಪೋಸ್ಟ್ ತಡಕಲ್ ತಾ: ಆಳಂದ, ಜಿಲ್ಲೆ: ಗುಲ್ಬರ್ಗಾ | ST | 44 | ಬಸವಣ್ಣೆ ಬಾಳಪ್ಪ ದೂಳಪ್ಪ ಗೋಳ ಮುಕ್ಕಾಂ ಪೋಸ್ಟ್ ನಂದಿ ತಾ: ಬೆಳಗಾಂ–590010 | ST |
| 45 | ಹಣಮವ್ವ ರುದ್ರಪ್ಪ ಯರಗಂಟಿ ಮುಕ್ಕಾಂ ಪೋಸ್ಟ್ ನಾಲತವಾಡ ತಾ: ಮುದ್ದೇಬಿಹಾಳ್ ಜಿಲ್ಲೆ: ಬಿಜಾಪುರ | ST | 51 | ಅಕ್ಕಲಪ್ಪ S/o ಹನುಮಂತಪ್ಪ ಹೊಸದುರ್ಗ ಪೋತಗಾನಹಳ್ಳಿ ಅಂಚೆ ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ | ST |
| 46 | ಶಿವಬಸಪ್ಪ ಯಲ್ಲಪ್ಪ ಹಿರೇಬೀಳ ಟೀಚರ್ಸ್ ಕಾಲೋನಿ, ವಿನಾಯಕನಗರ ಪ್ಲಾಟ್ ನಂ. 45, ಪೋಸ್ಟ್ ಹಿಂಡಲಗ ತಾ: ಜಿಲ್ಲೆ: ಬೆಳಗಾಂ–591108 | ST | 52 | ಹನಮಪ್ಪ ಸಂಗಪ್ಪ ಸೀಮಾಕೇರಿ ಮುಕ್ಕಾಂ ಚಿಂತಕಮಲದಿನ್ನಿ, ಪೋಸ್ಟ್ ಕಡಿವಾಲ ಇನಾಂ, ತಾಲ್ಲೂಕು ಹುನಗುಂದ ಜಿಲ್ಲೆ: ಬಾಗಲಕೋಟೆ | ST |
| 47 | ಎಂ.ಟಿ. ಕುಮಾರ C/o ರಾಜಣ್ಣ ಮಾತೃಕೃಪ ಬಿಲ್ಡಿಂಗ್ ದಿವ್ಯ CPEd. ಕಾಲೇಜ್ ಮುಂಬಾಗ, ಸದಾಶಿವನಗರ ತುಮಕೂರು–572101 | ST | 53 | ಹೆಚ್.ಡಿ ಆನಂದಯ್ಯ S/oದೊಡ್ಡರಂಗಯ್ಯ ಹೆಗ್ಗುಂದ ಪೋಸ್ಟ್ ಹೆಗ್ಗುಂದ ಸೋಂಪುರ ಹೋಬಳಿ ನೆಲಮಂಗಲ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ | ST |

| ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST | ಕ್ರ ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | SC/ ST |
|---|---|---|---|---|---|
| 48 | ಸಾಯಿಬಣ್ಣಾ ಜಮಾದ್ಧಾರ ಮುಕ್ಕಾಂಪೋಸ್ಟ್ ದೊಂಗರಗಾಂವ ತಾ: ಜಿಲ್ಲೆ: ಗುಲ್ಬರ್ಗಾ | ST | 54 | ಕೆ.ಬಿ. ರಾಜನಾಯಕ S/oಬಡವನಾಯಕ ಕೊಂಡೆತಿಮ್ಮನಹಳ್ಳಿ ಸಿ.ಕೆ. ಪುರ ಅಂಚೆ, ಪಾವಗಡ ತಾ: –572116 | ST |
| 49 | ಜಿ. ರಾಜಯ್ಯ S/oಗಂಟೆಪ್ಪ ಮುದಿಗೆರೆ ಮ್ಯಾಕೇರಹಳ್ಳಿ ಅಂಚೆ ಕಸಬಾ ಹೋಬಳಿ ಶಿರಾ ತಾಲ್ಲೂಕು ತುಮಕೂರು ಜಿಲ್ಲೆ | ST | 55 | ಬಾದಿಪಲ್ಲಪ್ಪ S/oಲೇಟ್ ಬಜ್ಜಪ್ಪ ನಜೀರ್‌ಸಾಬ್ ರಸ್ತೆ, ವೈ.ಎನ್. ಹೊಸಕೋಟೆ, ಪಾವಗಡ ತಾ: ತುಮಕೂರು ಜಿಲ್ಲೆ | ST |
| 50 | ಎಂ.ಟಿ. ಮಂಜುನಾಥ C/o ಚನ್ನಬಸವಯ್ಯ ಹೌಸ್ ನಂ. 2849, 14ನೇ ಡಿ ಮುಖ್ಯರಸ್ತೆ, 8ನೇ ಇ. ಕ್ರಾಸ್, ಅತ್ತಿಗುಪ್ಪೆ ವಿಜಯನಗರ 2ನೇ ಹಂತ ಬೆಂಗಳೂರು–560040 | ST | 56 | ಸುಶೀಲ ಸೋಮಪ್ಪ ವಾಲ್ಮೀಕಿ C/o ಅಶೋಕ ಎಸ್. ವಾಲ್ಮೀಕಿ ಮನೆ. ನಂ. 38 ದೀಪಪ್ರಿಯ ನಿಲಯ, ಮಿತ್ರ ವಿಶಾಲ ಪಾರ್ಕ್ ಹಾಗೂ ಕಾಳಿದಾಸ ನಗರ ಹತ್ತಿರ ರಾಜೀವನಗರ ವಿದ್ಯಾನಗರ ಹುಬ್ಬಳ್ಳಿ | ST |

ಈ ರೀತಿ ಉಲ್ಲೇಖ (14) ರನ್ವಯ ದಿನಾಂಕ: 21–07–2010 ರಂದು ಪ್ರಕಟಿಸಿದ ಸದರಿ ಜವಾನರ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕೆಳಕಂಡ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣಾ ಅರ್ಜಿಗಳನ್ನು ನಿಯಮಾನುಸಾರ ಕೂಲಂಕುಷವಾಗಿ ಪರಿಶೀಲಿಸಿ ಅವುಗಳನ್ನು ತಿರಸ್ಕರಿಸಲಾಯಿತು ಹಾಗೂ ಇವರ ಅರ್ಜಿಗಳನ್ನು ತಿರಸ್ಕರಿಸಿದ ಬಗ್ಗೆ ಕೆಳಕಂಡವರಿಗೆ ಪ್ರತ್ಯೇಕವಾದ ಹಿಂಬರಹಗಳನ್ನು ನೀಡಲಾಯಿತು.

(1) ಬಸವರಾಜ ಮಡಿವಾಳಪ್ಪ ನಾಯಕ (ST) (4) ಮಹಾಲಿಂಗ ಬಾಳನಾಯಕ ಜಂಗಣ್ಣವರ್ (ST)
(2) ಸಿದ್ದಪ್ಪ ಕರಿಯಪ್ಪ ಗುರಿಕಾರ (ST) (5) ಎನ್. ಮಂಜಪ್ಪ (SC)
(3) ಶಿವಪ್ಪ ನಾಯಕ (ST) (6) ಸಂಗೊಂದೆಪ್ಪ ಭೀಮಪ್ಪ ಮಾದರ್ (SC)

